ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಮತ್ತುಸಾಕ್ಷರತಾ ಇಲಾಖೆ

ಶಿಕ್ಷಕರ ಚಟುವಟಿಕೆ ಕೋಶ

2025-26

ಕನ್ನಡ ಪ್ರಥಮ ಭಾಷೆ

5

ಐದನೇ ತರಗತಿ

ಪಠ್ಯಾಧಾರಿತ ಮೌಲ್ಯಾಂಕನ ಸಾಮಗ್ರಿ 2025-26

ಸಮಗ್ರ ಶಿಕ್ಷಣ ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ

ನೃಪತುಂಗ ರಸ್ತೆ, ಬೆಂಗಳೂರು -560001

ಮತ್ತು

ರಾಜ್ಯ ಶಿಕ್ಷಣ ಮತ್ತು ತರಬೇತಿ ಇಲಾಖೆ

ನಂ 4 100 ಅಡಿ ರಸ್ತೆ, ಬನಶಂಕರಿ 3 ನೇ ಹಂತ

ಬೆಂಗಳೂರು 560085

ಪರಿಕಲ್ಪನೆ ಮತ್ತು ಮಾರ್ಗದರ್ಶನ

ಶ್ರೀಮತಿ ರಶ್ಮಿ ಮಹೇಶ್ ಭಾ,ಆ, ಸೇ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತುಸಾಕ್ಷರತಾ ಇಲಾಖೆ	
ಡಾ.ತ್ರಿಲೋಕಚಂದ್ರ ಕೆವಿ ಭಾ,ಆ, ಸೇ ಆಯುಕ್ತರು ಶಾಲಾ ಶಿಕ್ಷಣ ಮತ್ತುಸಾಕ್ಷರತಾ ಇಲಾಖೆ,ಬೆಂಗಳೂರು	ಶ್ರೀ ಗೋಪಾಲಕೃಷ್ಣ ಹೆಚ್ಎನ್ ನಿರ್ದೇಶಕರು ಡಿ ಎಸ್ಇ ಆರ್ ಟಿ ಬೆಂಗಳೂರು
ಡಯಟ್ ಸಹಕಾರ	
ಪ್ರಾಂಶುಪಾಲರು ಶ್ರೀ ರಂಗನಾಥಸ್ವಾಮಿ ಜಿ ಜಿಲ್ಲಾಶಿಕ್ಷಣ ಮತ್ತುತರಬೇತಿ ಸಂಸ್ಥೆ ಹಾಸನ	ಮೆಂಟರ್ ಶ್ರೀ ಮಂಜೇಗೌಡ ಎಂ ಉಪನ್ಯಾಸಕರು ಡಯಟ್ ಹಾಸನ
ಸಂಯೋಜನೆ	
ಶ್ರೀಮತಿ ರಾಧಾ ಪಿ ಹಿರಿಯ ಸಹಾಯಕ ನಿರ್ದೇಶಕರು ಡಿ ಎಸ್ ಇ ಆರ್ ಟಿ ಬೆಂಗಳೂರು	
ಪಾಠಾಧಾರಿತ ಮೌಲ್ಯಾಂಕನ ಸಾಮಗ್ರಿ ರಚನಾ ಸಂಪನ್ಮೂಲ ತಂಡ	
1. ಲೋಕೇಶ್ ಕುಮಾರ್ ಸ.ಕಿ.ಪ್ರಾ. ಶಾಲೆ ಕಣಜನಹಳ್ಳಿ ಹಾಸನತಾ. **2 ಕಲಾವತಿ.ಜಿ.ಪಿ.ಪ್ರ.ಮು. ಶಿ** **ಕೆಪಿಎಸ್ ಹಳೇಬೀಡು ಬೇಲೂರುತಾ//** **3 ಸುಮ ಹೆಚ್.ಸಿ.** ಸ. ಹಿ. ಪ್ರಾ. ಶಾಲೆ ಕಬ್ಬಳಿಗೆರೆ. ಅರಕಲಗೂಡುತಾ// **4 ದಾಕ್ಷಾಯಿಣಿ ಸ.ಶಿ** ಸ ಹಿ ಮಾ ಪ್ರಾ ಶಾಲೆ ಯರೆಹಳ್ಳಿ ಹಾಸನ **5 ಮಮತ ಸ.ಶಿ** ಸ. ಹಿ. ಪ್ರಾ. ಶಾಲೆ ಯಡೇಹಳ್ಳಿ ಸಕಲೇಶಪುರತಾ//	**6 ಎಲಿಜಬೆತ್‌ರಾಣಿ** ಸ.ಶಿ ಸ. ಕಿ. ಪ್ರಾ ಶಾಲೆ ಹಳೆ ಆಲೂರು ತಾ// **7 ಆಶಾ ಜಿ.ಎಮ್. ಸ.ಶಿ.** ಸ.ಮಾ. ಹಿ. ಪ್ರಾ. ಶಾಲೆ ಸಕಲೇಶಪುರ ತಾ// **8 ಮಧು ಹೆಚ್. ಎನ್. ಸ.ಶಿ.** ಸ.ಮಾ. ಹಿ. ಪ್ರಾ. ಶಾಲೆ ಸುಂಡಹಳ್ಳಿ. ಚ.ರಾ.ಪಟ್ಟಣ ತಾ// **9 ಶ್ವೇತಾ ಸ.ಶಿ.** ಸ. ಹಿ. ಪ್ರಾ. ಶಾಲೆ ಕೆಳಗಳಲೆ ಸಕಲೇಶಪುರ ತಾ// **10 ಮಧುಮತಿ ಸ.ಶಿ** ಸ.ಕಿ. ಪ್ರಾ. ಶಾಲೆ ಕಟ್ಟೇಹಳ್ಳಿ ಹೊನ.ಪುರತಾ//
ಮಾರ್ಗದರ್ಶಕರು ಹಾಗೂ ಪರಿಶೀಲಕರು	
ಕವಿತಾ ಎನ್. ಬಿ,ಆರ್ ಪಿ ನೆಲಮಂಗಲ ತಾ/ ಬೆಂಗಳೂರು ಗ್ರಾಮಾಂತರ ಜಿಲ್ಲೆ	ರಶ್ಮಿ ಸ.ಶಿ. ಸ.ಹಿ.ಪ್ರಾ. ಶಾಲೆ ಕತ್ರಿಗುಪ್ಪೆ ಬೆಂಗಳೂರು ದಕ್ಷಿಣ

ಪರಿವಿಡಿ

ಕ್ರಮಸಂಖ್ಯೆ	ಪಠ್ಯದಹೆಸರು
1	ಒಟ್ಟಿಗೆ ಬಾಳುವ ಆನಂದ
2	ನದಿಯ ಅಳಲು
3	ನಮ್ಮ ಮಾತು ಕೇಳಿ
4	ಜೀವದ ಮೌಲ್ಯ
5	ಪಂಜರಶಾಲೆ
6	ಮಲ್ಲಜ್ಜಿಯ ಮಳಿಗೆ
7	ಧೀರ ಸೇನಾನಿ
8	ಸಂಗೊಳ್ಳಿ ರಾಯಣ್ಣ
9	ಗಿಡಮರ
10	ಸ್ವಾತಂತ್ರ್ಯದ ಹಣತೆ
11	ವಚನಗಳು
12	ಕನ್ನಡ ಕನ್ನಡ ಬರ್ರೀ ನಮ್ಮ ಸಂಗಡ
13	ಕರಡಿ ಕುಣಿತ
14	ಮಗುವಿನ ಮೊರೆ
15	ಮೂಡಲ ಮನೆ
16	ಭುವನೇಶ್ವರಿ
17	ಕಾಮನ ಬಿಲ್ಲು
18	ನಾನು ಮತ್ತು ಹುಂಚಿಮರ
19	ನನ್ನ ರಟ್ಟೆಯ ಬಲ
20	ಹಿನ್ನುಡಿ
21	ಮೆಚ್ಚಿನ ಗೊಂಬೆ

ನೀಲನಕ್ಷೆ

ಪಾಠದ ಹೆಸರು: ಒಟ್ಟಿಗೆ ಬಾಳುವ ಆನಂದ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	30	17	14
ಗ್ರಹಿಕೆ	56	33	22
ಅಭಿವ್ಯಕ್ತಿ	14	08	02
ಪ್ರಶಂಸೆ	-	-	-
ಒಟ್ಟು	**100%**	**58**	**38**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ

ಕಠಿಣತೆಯಮಟ್ಟ	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಸುಲಭ	30	17	14
ಸಾಧಾರಣ	56	33	22
ಕಠಿಣ	14	08	02
ಒಟ್ಟು	**100%**	**58**	**38**

ಪಾಠದ ಹೆಸರು: ನದಿಯಅಳಲು

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	23	12	10
ಗ್ರಹಿಕೆ	54	28	21
ಅಭಿವ್ಯಕ್ತಿ	23	12	3
ಪ್ರಶಂಸೆ	-	-	-
ಒಟ್ಟು	**100%**	**52**	**34**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ

ಕಠಿಣತೆಯಮಟ್ಟ	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಸುಲಭ	44	23	23
ಸಾಧಾರಣ	25	13	7
ಕಠಿಣ	31	16	4
ಒಟ್ಟು	**100%**	**52**	**34**

ಪಾಠದಹೆಸರು: ನಮ್ಮಮಾತುಕೇಳಿ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	43	13	10
ಗ್ರಹಿಕೆ	37	11	11
ಅಭಿವ್ಯಕ್ತಿ	20	6	2
ಪ್ರಶಂಸೆ	-	-	-
ಒಟ್ಟು	**100%**	**30**	**21**

ಹಂತ 2: ಕ್ಲಿಷ್ಟತೆಯ ಮಟ್ಟವನ್ನುಆಧರಿಸಿ ಅಂಕಗಳ ಹಂಚಿಕೆ

ಕಠಿಣತೆಯಮಟ್ಟ	ಶೇಕಡಅಂಕಗಳು	ನಿಗದಿಪಡಿಸಿದಅಂಕಗಳು	ಪ್ರಶ್ನೆಗಳು
ಸುಲಭ	43	13	10
ಸಾಧಾರಣ	43	13	09
ಕಠಿಣ	14	4	4
ಒಟ್ಟು	**100%**	**30**	**21**

ಪಾಠದಹೆಸರು: ಜೀವದಮೌಲ್ಯ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	20	08	12
ಗ್ರಹಿಕೆ	25	10	06
ಅಭಿವ್ಯಕ್ತಿ	30	12	06
ಪ್ರಶಂಸೆ	25	10	04
ಒಟ್ಟು	**100%**	**40**	**28**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ ಸುಲಭ

ಕಠಿಣತೆಯಮಟ್ಟ	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಸುಲಭ	30	12	12
ಸಾಧಾರಣ	50	20	12
ಕಠಿಣ	20	8	4
ಒಟ್ಟು	**100%**	**40**	**28**

ಪಾಠದಹೆಸರು: ಪಂಜರಶಾಲೆ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	31	10	09
ಗ್ರಹಿಕೆ	38	12	12
ಅಭಿವ್ಯಕ್ತಿ	19	06	03
ಪ್ರಶಂಸೆ	12	04	1
ಒಟ್ಟು	**100%**	**32**	**25**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ

ಕಠಿಣತೆಯಮಟ್ಟ	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಸುಲಭ	50	16	16
ಸಾಧಾರಣ	38	12	08
ಕಠಿಣ	12	4	01
ಒಟ್ಟು	**100%**	**32**	**25**

ಪಾಠದಹೆಸರು: ಮಲ್ಲಜ್ಜಿಯ ಮಳಿಗೆ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	6	2	02
ಗ್ರಹಿಕೆ	66	23	20
ಅಭಿವ್ಯಕ್ತಿ	28	10	2
ಪ್ರಶಂಸೆ	-	-	-
ಒಟ್ಟು	**100%**	**35**	**24**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ

ಕಠಿಣತೆಯಮಟ್ಟ	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಸುಲಭ	6	02	02
ಸಾಧಾರಣ	66	23	20
ಕಠಿಣ	28	10	2
ಒಟ್ಟು	**100%**	**35**	**24**

ಪಾಠದಹೆಸರು: ಧೀರಸೇನಾನಿ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	30	12	7
ಗ್ರಹಿಕೆ	48	18	16
ಅಭಿವ್ಯಕ್ತಿ	11	4	1
ಪ್ರಶಂಸೆ	11	4	1
ಒಟ್ಟು	**100%**	**38**	**25**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ

ಕಠಿಣತೆಯಮಟ್ಟ	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಸುಲಭ	40	16	16
ಸಾಧಾರಣ	38	14	7
ಕಠಿಣ	22	8	2
ಒಟ್ಟು	**100%**	**38**	**25**

ಪಾಠದಹೆಸರು: ಸಂಗೊಳ್ಳಿರಾಯಣ್ಣ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	17	05	05
ಗ್ರಹಿಕೆ	70	20	08
ಅಭಿವ್ಯಕ್ತಿ	13	04	01
ಪ್ರಶಂಸೆ	-	-	-
ಒಟ್ಟು	**100%**	**29**	**14**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ

ಕಠಿಣತೆಯಮಟ್ಟ	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಸುಲಭ	38	11	08
ಸಾಧಾರಣ	21	06	03
ಕಠಿಣ	41	12	03
ಒಟ್ಟು	**100%**	**29**	**14**

ಪದ್ಯದ ಹೆಸರು: ಗಿಡಮರ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	37	18	15
ಗ್ರಹಿಕೆ	31	15	10
ಅಭಿವ್ಯಕ್ತಿ	24	12	3
ಪ್ರಶಂಸೆ	8	4	1
ಒಟ್ಟು	**100%**	**49**	**29**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ

ಕಠಿಣತೆಯಮಟ್ಟ	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಸುಲಭ	47	23	20
ಸಾಧಾರಣ	37	18	07
ಕಠಿಣ	16	8	2
ಒಟ್ಟು	**100%**	**49**	**29**

ಪದ್ಯದ ಹೆಸರು: ಸ್ವಾತಂತ್ರ್ಯದ ಹಣತೆ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	36	8	8
ಗ್ರಹಿಕೆ	23	5	2
ಅಭಿವ್ಯಕ್ತಿ	27	6	2
ಪ್ರಶಂಸೆ	14	3	1
ಒಟ್ಟು	**100%**	**22**	**13**

ಹಂತ 2: ಕ್ಲಿಷ್ಟತೆಯ ಮಟ್ಟವನ್ನುಆಧರಿಸಿ ಅಂಕಗಳ ಹಂಚಿಕೆ

ಕಠಿಣತೆಯಮಟ್ಟ	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಸುಲಭ	36	8	8
ಸಾಧಾರಣ	18	4	2
ಕಠಿಣ	46	10	3
ಒಟ್ಟು	**100%**	**22**	**13**

ಪದ್ಯದ ಹೆಸರು: ವಚನಗಳು

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	38	16	13
ಗ್ರಹಿಕೆ	35	14	08
ಅಭಿವ್ಯಕ್ತಿ	18	08	02
ಪ್ರಶಂಸೆ	9	04	01
ಒಟ್ಟು	**100%**	**42**	**24**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ

ಕಠಿಣತೆಯಮಟ್ಟ	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಸುಲಭ	28	12	12
ಸಾಧಾರಣ	34	14	8
ಕಠಿಣ	38	16	04
ಒಟ್ಟು	**100%**	**42**	**24**

ಪದ್ಯದ ಹೆಸರು: ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	35	12	7
ಗ್ರಹಿಕೆ	30	10	8
ಅಭಿವ್ಯಕ್ತಿ	23	8	2
ಪ್ರಶಂಸೆ	12	4	1
ಒಟ್ಟು	**100%**	**34**	**18**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ

ಕಠಿಣತೆಯಮಟ್ಟ	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಸುಲಭ	30%	10	10
ಸಾಧಾರಣ	24%	8	4
ಕಠಿಣ	46%	16	4
ಒಟ್ಟು	**100%**	**34**	**18**

ಪದ್ಯದ ಹೆಸರು: ಕರಡಿಯಕುಣಿತ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	38	13	12
ಗ್ರಹಿಕೆ	32	11	9
ಅಭಿವ್ಯಕ್ತಿ	24	8	2
ಪ್ರಶಂಸೆ	6	2	1
ಒಟ್ಟು	**100%**	**34**	**24**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ ಸುಲಭ

ಕಠಿಣತೆಯಮಟ್ಟ	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಸುಲಭ	52	18	18
ಸಾಧಾರಣ	24	8	4
ಕಠಿಣ	24	8	2
ಒಟ್ಟು	**100%**	**34**	**20**

ಪದ್ಯದ ಹೆಸರು: ಮಗುವಿನ ಮೊರೆ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	28	11	8
ಗ್ರಹಿಕೆ	52	21	13
ಅಭಿವ್ಯಕ್ತಿ	20	08	2
ಪ್ರಶಂಸೆ	-	-	-
ಒಟ್ಟು	**100%**	**40**	**23**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ ಸುಲಭ

ಕಠಿಣತೆಯಮಟ್ಟ	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಸುಲಭ	28	11	8
ಸಾಧಾರಣ	52	21	13
ಕಠಿಣ	20	08	2
ಒಟ್ಟು	**100%**	**40**	**21**

ಪದ್ಯದ ಹೆಸರು: ಮೂಡಲಮನೆ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	42	6	6
ಗ್ರಹಿಕೆ	42	6	5
ಅಭಿವ್ಯಕ್ತಿ	16	2	1
ಪ್ರಶಂಸೆ	0	0	0
ಒಟ್ಟು	**100%**	**14**	**12**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ

ಕಠಿಣತೆಯಮಟ್ಟ	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಸುಲಭ	42	6	6
ಸಾಧಾರಣ	42	6	5
ಕಠಿಣ	16	2	1
ಒಟ್ಟು	**100%**	**14**	**12**

ಪದ್ಯದ ಹೆಸರು: ಭುವನೇಶ್ವರಿ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	26	20	18
ಗ್ರಹಿಕೆ	32	24	20
ಅಭಿವ್ಯಕ್ತಿ	25	18	11
ಪ್ರಶಂಸೆ	17	13	3
ಒಟ್ಟು	**100%**	**75**	**52**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ ಸುಲಭ

ಕಠಿಣತೆಯಮಟ್ಟ	ಶೇಕಡಅಂಕಗಳು	ನಿಗದಿಪಡಿಸಿದ ಅಂಕಗಳು	ಪ್ರಶ್ನೆಗಳು
ಸುಲಭ	37	28	28
ಸಾಧಾರಣ	38	29	19
ಕಠಿಣ	25	18	5
ಒಟ್ಟು	**100%**	**75**	**52**

ಪಾಠದಹೆಸರು: ಕಾಮನಬಿಲ್ಲು

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	25	8	5
ಗ್ರಹಿಕೆ	52	16	6
ಅಭಿವ್ಯಕ್ತಿ	23	7	2
ಪ್ರಶಂಸೆ	-	-	-
ಒಟ್ಟು	**100%**	**31**	**12**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ.

ಕಠಿಣತೆಯಮಟ್ಟ	ಶೇಕಡಅಂಕಗಳು	ನಿಗದಿಪಡಿಸಿದ ಅಂಕಗಳು	ಪ್ರಶ್ನೆಗಳು
ಸುಲಭ	25%	08	5
ಸಾಧಾರಣ	58%	18	06
ಕಠಿಣ	13%	4	1
ಒಟ್ಟು	**100%**	**31**	**12**

ಪಾಠದಹೆಸರು: ನಾನು ಮತ್ತು ಹುಂಚಿಮರ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	25	10	10
ಗ್ರಹಿಕೆ	45	18	14
ಅಭಿವ್ಯಕ್ತಿ	20	08	2
ಪ್ರಶಂಸೆ	10	4	1
ಒಟ್ಟು	**100%**	**40**	**27**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ.

ಕಠಿಣತೆಯಮಟ್ಟ	ಶೇಕಡಅಂಕಗಳು	ನಿಗದಿಪಡಿಸಿದ ಅಂಕಗಳು	ಪ್ರಶ್ನೆಗಳು
ಸುಲಭ	37	15	15
ಸಾಧಾರಣ	33	13	9
ಕಠಿಣ	30	12	3
ಒಟ್ಟು	**100%**	**40**	**27**

ಪಾಠದಹೆಸರು: ನನ್ನ ರಟ್ಟೆಯ ಬಲ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	43	12	9
ಗ್ರಹಿಕೆ	50	14	8
ಅಭಿವ್ಯಕ್ತಿ	07	2	1
ಪ್ರಶಂಸೆ	-	-	-
ಒಟ್ಟು	**100%**	**28**	**18**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ ಸುಲಭ

ಕಠಿಣತೆಯಮಟ್ಟ	ಶೇಕಡಅಂಕಗಳು	ನಿಗದಿಪಡಿಸಿದ ಅಂಕಗಳು	ಪ್ರಶ್ನೆಗಳು
ಸುಲಭ	43	12	10
ಸಾಧಾರಣ	57	16	08
ಕಠಿಣ	-	-	-
ಒಟ್ಟು	**100%**	**28**	**18**

ಪಾಠದಹೆಸರು: ಹಿನ್ನುಡಿ

ಹಂತ 1: ಉದ್ದಿಷ್ಟವಾರುಅಂಕಗಳವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	40	12	09
ಗ್ರಹಿಕೆ	34	10	10
ಅಭಿವ್ಯಕ್ತಿ	13	4	1
ಪ್ರಶಂಸೆ	13	4	1
ಒಟ್ಟು	**100%**	**30**	**21**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ

ಕಠಿಣತೆಯಮಟ್ಟ	ಶೇಕಡಅಂಕಗಳು	ನಿಗದಿಪಡಿಸಿದ ಅಂಕಗಳು	ಪ್ರಶ್ನೆಗಳು
ಸುಲಭ	40	12	09
ಸಾಧಾರಣ	34	10	10
ಕಠಿಣ	26	8	2
ಒಟ್ಟು	**100%**	**30**	**21**

ಪಾಠದಹೆಸರು: ಮೆಚ್ಚಿನಗೊಂಬೆ

ಹಂತ 1: ಉದ್ದಿಷ್ಟವಾರು ಅಂಕಗಳ ವಿವರಣೆ

ಉದ್ದಿಷ್ಟಗಳು	ಶೇಕಡಅಂಕಗಳು	ಅಂಕಗಳು	ಪ್ರಶ್ನೆಗಳು
ಅರಿವು	30	13	8
ಗ್ರಹಿಕೆ	19	08	4
ಅಭಿವ್ಯಕ್ತಿ	32	14	5
ಪ್ರಶಂಸೆ	19	8	2
ಒಟ್ಟು	**100%**	**39**	**19**

ಹಂತ 2: ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಅಂಕಗಳ ಹಂಚಿಕೆ

ಕಠಿಣತೆಯಮಟ್ಟ	ಶೇಕಡಅಂಕಗಳು	ನಿಗದಿಪಡಿಸಿದ ಅಂಕಗಳು	ಪ್ರಶ್ನೆಗಳು
ಸುಲಭ	55	7	7
ಸಾಧಾರಣ	20	16	8
ಕಠಿಣ	25	16	4
ಒಟ್ಟು	**100%**	**39**	**19**

ಘಟಕ -1 ಒಟ್ಟಿಗೆಬಾಳುವಆನಂದ

ಕಲಿಕಾಫಲ-1 ಕೇಳಿದ/ಓದಿದಸಾಹಿತ್ಯ(ಹಾಸ್ಯ, ಸಾಹಸ,ಸಾಮಾಜಿಕ ಮುಂತಾದಕಥೆ, ಕವಿತೆ, ವಿಷಯವಸ್ತು, ಘಟನೆಯ ಚಿತ್ರಗಳು ಮತ್ತು ಪಾತ್ರಗಳು, ಶಿರೋನಾಮೆ ಮುಂತಾದವುಗಳ ಬಗ್ಗೆ ಮಾತನಾಡುತ್ತಾರೆ, ಪ್ರಶ್ನಿಸುತ್ತಾರೆ, ಸ್ವತಃ ಟಿಪ್ಪಣಿ ಬರೆಯುತ್ತಾರೆ. ತಮ್ಮ ಅಭಿಪ್ರಾಯ ಮತ್ತು ತರ್ಕ ನೀಡುತ್ತಾರೆ ಮತ್ತು ಒಂದು ನಿರ್ಣಯಕ್ಕೆ ಬರುತ್ತಾರೆ.

I. ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದುದ್ದನ್ನು ಆರಿಸಿ ಬರೆಯಿರಿ. (ಸುಲಭ)

1.ಅಲ್ಲಿ ರೈತನೊಬ್ಬನ ಹೊಲವಿತ್ತು. ಈ ವಾಕ್ಯದಲ್ಲಿರುವ ಹ್ರಸ್ವಸ್ವರ ಗುರುತಿಸಿ

1. ಅ 2. ರ 3. ತ 4. ಬ

2. ಭಯ -ಭಕ್ತಿ ಎಂಬುದು ಒಂದು-__________

1. ದ್ವಿರುಕ್ತಿ 2. ಅವ್ಯಯ 3. ಜೋಡುನುಡಿ 4. ಒಗಟು

3." ಈ ವಾಕ್ಯದಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ "________

1. ಪ್ರಶ್ನಾರ್ಥಕ ಚಿಹ್ನೆ 2. ಉದ್ಧರಣ ಚಿಹ್ನೆ 3. ಆಶ್ಚರ್ಯಕರ ಚಿಹ್ನೆ 4. ಪೂರ್ಣ ವಿರಾಮ ಚಿಹ್ನೆ

4. ಇದು ಅಮ್ಮನ ಮರ. ಇಲ್ಲಿ ಅಮ್ಮ ಎಂಬುದರ ಲಿಂಗರೂಪ____________

1. ಪುಲ್ಲಿಂಗ 2. ಸ್ತ್ರೀಲಿಂಗ 3. ನಪುಂಸಕ ಲಿಂಗ 4. ನಪುಂಸಕ ಲಿಂಗ

II. ಸರಿ/ ತಪ್ಪು ಎಂದು ಬರೆ. (ಸುಲಭ)

5.ಒಗ್ಗಟ್ಟಿನಲ್ಲಿ ಬಲವಿದೆ.
6.ಹೊಲ ಉಳಲು ರೈತನು ಹೆಂಡತಿಯೊಂದಿಗೆ ಬಂದನು .
7. ಬೇವಿನ ಮರವನ್ನು ಜನರು ಅಪ್ಪನಮರ ಎಂದು ಕರೆಯುತ್ತಿದ್ದರು .
8. ಊರಿನ ಜನರು ಅಮ್ಮನ ಮರ ಮತ್ತು ಅಮ್ಮನ ಕಲ್ಲಿನ ತಂಟೆಗೆ ಹೋಗುತ್ತಿರಲಿಲ್ಲ.

III. 9. ಹೊಂದಿಸಿ ಬರೆಯಿರಿ. (ಸುಲಭ)

ಎ. ಜಗಳ	-	ಸಜಾತಿ ಒತ್ತಕ್ಷರ ಪದ.
ಬಿ. ಕಲ್ಲು	-	ಭವಿಷ್ಯತ್ ಕಾಲ
ಸಿ. ಒಟ್ಟಾಗಿ ಬಾಳಿದರೆ	-	ಕಲಹ
ಡಿ. ನಾಳೆ	-	ಸುಖವಾಗಿ ಇರಬಹುದು

IV. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ. (ಸುಲಭ)

10. ಬೇವಿನ ಮರವನ್ನು ಜನ ....ಎಂದು ಕರೆಯುತ್ತಿದ್ದರು.
11.ನಾವಿಬ್ಬರೂ ಒಬ್ಬರಿಂದ ಒಬ್ಬರು________ಜನರು ನಮ್ಮಿಬ್ಬರನ್ನು ನಾಶ ಮಾಡುತ್ತಾರೆ.
12. ಇದು ಅಮ್ಮನ ಮರ _______ಬೇಡ ಎಂದು ಹೊರಟು ಹೋದರು.
13. ಹೊಡೆಯುವವರು ಬಂದು ಇದು ಅಮ್ಮನ ಕಲ್ಲು___________ಬೇಡ ಎಂದು ಅವರು ಹೊರಟು ಹೋದರು.
14. ಎಲ್ಲರೂ ಒಟ್ಟಿಗೆ ಬಾಳಿದರೆ ಎಲ್ಲರೂ_________ಇರಬಹುದು.

V. ಒಂದು ಪದ/ವಾಕ್ಯದಲ್ಲಿ ಉತ್ತರಿಸಿ. (ಸುಲಭ)

15. ಜನರು ಬೇವಿನ ಮರವನ್ನು ಯಾವ ಹೆಸರಿನಿಂದ ಕರೆಯುತ್ತಿದ್ದರು?
16. ಕಲ್ಲು ಮತ್ತು ಮರದ ಬಗ್ಗೆ ಭಯ ಭಕ್ತಿ ಯಾರಿಗೆ ಉಂಟಾಯಿತು?
17. ಬೇವಿನ ಮರದ ಕೆಳಗೆ ಏನು ಬಂದು ನಿಂತುಕೊಂಡಿತು?
18. ಹೊಲವನ್ನು ಉಳಲು ಬಳಸುವ ಸಾಧನ ಯಾವುದು?
19. ಬೇವಿನ ಮರವು ಬೇಗ ಬಾ ಎಂದು ಯಾರನ್ನು ಕರೆಯಿತು?
20. ಮರ ಕಡಿಯುವವರು ಮರಕಡಿಯಲು ತಂದಿದ್ದ ಸಾಧನ ಯಾವುದು?
21. ಗುಂಡನೆಯ ಕಲ್ಲು ಎಲ್ಲಿತ್ತು?
22. ಕಲ್ಲು ಕೋಪದಿಂದ ಏನು ಮಾಡಿತು?

23.ಮರ ಕಡಿಯುವವರು ಏನೆಂದು ಹೇಳಿ ಹೊರಟು ಹೋದರು?
24. ಕಲ್ಲು ಹೊಡೆಯುವವರು ಏನೆಂದು ಹೇಳಿ ಹೊರಟು ಹೋದರು?
25. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ಅಕ್ಷರಗಳಿವೆ?

V. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸು. (ಸಾಧಾರಣ)

26. ಒಟ್ಟಿಗೆ ಬಾಳುವ ಆಪಾಠದಲ್ಲಿ ಬರುವ ಯಾವುದಾದರೂ ನಾಲ್ಕು ಪಾತ್ರಗಳನ್ನು -ಪಟ್ಟಿ ಮಾಡಿ.
27.ರೈತನು ಬೇವಿನ ಮರ ಕಡಿದು ಯಾವ ಉಪಕರಣಗಳನ್ನು ತಯಾರಿಸಲು ತಿಳಿಸಿದನು?
28.ಕಲ್ಲು ಮತ್ತು ಮರ ಏಕೆ ನಡುಗಲು ಆರಂಭಿಸಿದವು?
29.ಕಲಹ ಪದ ಬಳಸಿ ಎರಡು ಸ್ವಂತ ವಾಕ್ಯ ರಚಿಸಿ.
30. ಜಂಬದಿಂದ ಬೇವಿನ ಮರ ಅಮ್ಮನ ಕಲ್ಲಿಗೆ ಏನೆಂದು ಹೇಳಿತು?
31. ಜಂಬದಿಂದ ಅಮ್ಮನ ಕಲ್ಲು ಬೇವಿನ ಮರಕ್ಕೆ ಏನೆಂದು ಹೇಳಿತು?
32. ಬೇರೆ ಬೇರೆಯಾಗಿದ್ದ ಬೇವಿನ ಮರ ಮತ್ತು ಕಲ್ಲನ್ನು ನೋಡಿ ರೈತನು ತನ್ನ ಮಕ್ಕಳಿಗೆ ಏನು ಹೇಳಿದನು?
33. ಬೇವಿನ ಮರ ಮತ್ತು ಅಮ್ಮನ ಕಲ್ಲು ಮತ್ತೆ ಹೇಗೆ ಸ್ನೇಹಿತರಾದವು?
34. ವರ್ಣಮಾಲೆಯಲ್ಲಿ ಎಷ್ಟು ವಿಧಗಳಿವೆ. ಅವು ಯಾವುವು?
35. ಅನುಸ್ವಾರ ಇರುವಂತಹ ಐದು ಪದಗಳನ್ನು ಬರೆಯಿರಿ.
36. ಗುಂಡನೆಯ ಕಲ್ಲು ಬೆಳ್ಳಗಿರಲು ಕಾರಣ ತಿಳಿಸಿ.

VI. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.(ಕಠಿಣ)

37. ರೈತನ ಸ್ಥಿತಿಗತಿ ಕುರಿತು ಟಿಪ್ಪಣಿ ಬರೆಯಿರಿ.
38. ಒಟ್ಟಿಗೆ ಬಾಳುವ ಆನಂದ .ಪಾಠದ ಒಳನೋಟವನ್ನು ನಿಮ್ಮ ಮಾತುಗಳಲ್ಲಿ ವ್ಯಕ್ತ ಪಡಿಸಿ

ಘಟಕ -2 ನದಿಯ ಅಳಲು

ಕಲಿಕಾ ಫಲ15: ಸಂಭವಿಸುವ ವಿವಿಧ ಘಟನೆಗಳ ಅಂಶಗಳ ಬಗ್ಗೆ ಗಮನಹರಿಸುತ್ತಾ ಅವುಗಳ ಬಗ್ಗೆ ಮೌಖಿಕವಾಗಿ ಪ್ರತಿಕ್ರಿಯೆ ನೀಡುತ್ತಾರೆ/ಪ್ರತಿಸ್ಪಂದಿಸುತ್ತಾರೆ

ಕಲಿಕಾ ಫಲ15: ತಮ್ಮ ಅಸು ಪಾಸಿನಲ್ಲಿ ಸಂಭವಿಸುವ ವಿವಿಧ ಘಟನೆಗಳನ್ನು ಸಂಕ್ಷಿಪ್ತವಾಗಿ ಅವುಗಳ ಬಗ್ಗೆ ತಮ್ಮ ಪ್ರತಿಕ್ರಿಯೆಯನ್ನು ಬರವಣಿಗೆ ರೂಪದಲ್ಲಿ ನೀಡುತ್ತಾರೆ.

I. ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದುದ್ದನ್ನು ಆರಿಸಿ ಬರೆಯಿರಿ. (ಸುಲಭ)

1. ಮಲಿನ ಪದದ ಅರ್ಥ -------

a) **ಹೊಳಕು** b) **ಭಯ** c) **ಧೈರ್ಯ** d) **ಅನಾಹುತ**

2.ಸಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆ ------

a) **ಅಕ್ಕ** b) **ಉಜ್ವಲ** c) **ಪತ್ರಿಕೆ** d) **ಛತ್ರ**

3. ಭಕ್ತ ಪದದಲ್ಲಿರುವ ಅಕ್ಷರಗಳನ್ನು ಬಿಡಿಸಿ ಬರೆದಾಗ ------

a) **ಭ** + **ಕ್** + **ತ್** + **ಅ** b) **ಭ್** + **ಕ್** + **ತ** c) **ಭ್** + **ಕ್** + **ತ್** + **ಅ** **c) ಭ್ +ಅ+ಕ್+ತ್+ಅ**

4. ನೀರಿನ ಸಂರಕ್ಷಣೆ ನಮ್ಮೆಲ್ಲರ -------- **ವಾಕ್ಯ ಪೂರ್ಣಗೊಳಿಸಿ**

a) **ಭವಣೆ** b) **ಹೊಣೆ** c) **ಮನ್ನಣೆ** d) **ಕರುಣೆ**

5.ಜಲದೇವತೆ ಮಾಲಿನ್ಯಗೊಂಡರೆ -------- **ಎಂಬ ಪಟ್ಟ ಧರಿಸುವ ಕಾಲ ದೂರವಿಲ್ಲ**.

a) **ವಿಷಕನ್ಯೆ** b) **ಮತ್ಸ್ಯಕನ್ಯೆ** c) **ಕನ್ಯೆ** d) **ಪವಿತ್ರಕನ್ಯೆ**

II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ: (ಸುಲಭ)

6. ನೋವು ತಾಳಲಾರದೆ ಮಕ್ಕಳು ಏನು ಮಾಡಿದರು?

7.ದಾರೀಹೋಕರು ಮಕ್ಕಳನ್ನು ಎಲ್ಲಿಗೆ ಸೇರಿಸಿದರು?

8.ಯಾವುದಾದರೂ ಎರಡು ನೀರಿನ ಮೂಲಗಳನ್ನು ತಿಳಿಸಿ.

9. ಮಕ್ಕಳಿಗೆ ಯಾವುದರ ಸೋಂಕು ತಗಲಿತು?

10. ಮಕ್ಕಳು ಯಾರನ್ನು ನೋಡಿ ಅಸಹ್ಯವಾಗುತ್ತದೆ ಎಂದರು?

III. ಗುಂಪಿಗೆ ಸೇರದ ಪದ ಗುರುತಿಸಿ ಬರೆಯಿರಿ: (ಸುಲಭ)

11. ಸಂಕುಲ, ಸಮೂಹ, ಗುಂಪು,ನವೆ
12. ಮೀನು, ಕಪ್ಪೆ, ಆಮೆ, ಹಸು
13. ಸಕ್ಕರೆ, ಅಕ್ಷರ, ದುಡ್ಡು, ಪುಸ್ತಕ
14. ಬಾವಿ, ಕೆರೆ, ನದಿ, ಬೆಟ್ಟ

IV. ಈ ವಾಕ್ಯವನ್ನು ಯಾರು ಯಾರಿಗೆ ಹೇಳಿದರು? (ಸಾಧಾರಣ)

3×2=6

15.ಏಕೆ? ನಾನು ನಿಮಗೇನು ಮಾಡಿರುವೆ? ನೀವೇಕೆ ಅಸಹ್ಯಪಟ್ಟಿಕೊಳ್ಳುತ್ತಿದ್ದೀರಿ.

16. ತಾಯಿ ನಾವೆಲ್ಲರೂ ನಿನ್ನ ಮಾಲಿನ್ಯ ತಡೆಯಲು ಶ್ರಮಿಸುತ್ತೇವೆ.

17. ಅವರ ಜೀವಕ್ಕೆ ಏನು ಅಪಾಯವಿಲ್ಲ ತಾನೇ?

V. ಕೆಳಗೆ ಕೊಟ್ಟಿರುವ ಸಂಯುಕ್ತಾಕ್ಷರಗಳನ್ನು ಬಳಸಿ ಪದಗಳನ್ನು ರಚಿಸು. (ಸುಲಭ)

ಉದಾಹರಣೆ : ಅಕ್ಕ

18.ಕ್ಕ,

19. ಪ್ತ,

20. ಸ್ವ,

21. ರ‍್ರ

22. ಜ್ಜ

23. ಗ್ಗ,

24.. ಡ್ಡ,

25. ಣ್ಣ,

26. ನ್ನ,

VII. ಅರ್ಥಪೂರ್ಣವಾದ ವಾಕ್ಯ ರಚಿಸು. (ಸಾಧಾರಣ)

27. ಮಕ್ಕಳು/ ಸ್ನಾನ /ಮಾಡಿದರು/ ನದಿಯಲ್ಲಿ.

28. ಹ ರಿಯುತ್ತದೆ /ನದಿ /ಶುದ್ಧವಾಗಿ.

29. ಜಲದೇವತೆ /ಪ್ರತ್ಯಕ್ಷಳಾದಳು / ನದಿಯಿಂದ

VIII. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸು. (ಕಠಿಣ)

30. ನದಿಗಳ ಮಾಲಿನ್ಯದ ದುಷ್ಪರಿಣಾಮಗಳನ್ನು ನಿನ್ನದೇ ಆದ ವಾಕ್ಯದಲ್ಲಿ ಬರೆಯಿರಿ.

31. ನಿನ್ನ ಸುತ್ತಲಿನ ನೀರಿನ ಮೂಲಗಳು ಯಾವ ರೀತಿ ಮಾಲಿನ್ಯಕ್ಕೆ ಒಳಗಾಗುತ್ತಿವೆ ಎಂಬುದನ್ನು ತಿಳಿಸಿ.

32. ನೀರಿನ ಉಪಯೋಗಗಳನ್ನು ಪಟ್ಟಿ ಮಾಡಿ.

IX.

33. ಚಿತ್ರವನ್ನು ನೋಡಿ ಪ್ರಬಂಧ ಬರೆಯಿರಿ: (ಕಠಿಣ)



X.

34. ಅಕ್ಷರ ಹುಡುಕಿ ಪದ ರಚಿಸಿ. (ಸಾಧಾರಣ)

ಮಾ	ಆ	ಕ	ವೈ	ವಿ	ಆ	ದಿ	ತ
ಧ್ಯ	ರು	ಲಿ	ಲು	ಸ್ಪ	ತ್ರೆ	ಕೆ	ಹು
ಷ	ಕ	ಷಿ	ರೋ	ನ್ಯ	ನ್ಯೆ	ರಿ	ನಾ
ಆ	ತ	ಪಾ	ಗ್ಯ	ಯ	ನ	ತು	ಆ

ಘಟಕ -3 ನಮ್ಮ ಮಾತು ಕೇಳಿ

ಕಲಿಕಾ ಫಲ-5 ವಿವಿಧ ಪರಿಸ್ಥಿತಿ ಮತ್ತು ಉದ್ದೇಶಗಳಿಗಾಗಿ ಬೋರ್ಡ್ ಮೇಲೆ ಬರೆದ ಸೂಚನೆ ಕಾರ್ಯಕ್ರಮದ ವರದಿ ಪತ್ರ ಮುಂತಾದವುಗಳನ್ನು ತಿಳಿದುಕೊಳ್ಳುವ ಉದ್ದೇಶದಿಂದ ಓದಿ ನಕಲು ಮಾಡುತ್ತಾರೆ.

I. ಬಿಟ್ಟ ಸ್ಥಳವನ್ನು ಸರಿಯಾದ ಉತ್ತರದಿಂದ ಆರಿಸಿ ಭರ್ತಿ ಮಾಡಿ. (ಸುಲಭ)

1) .... ಗೆ ಉತ್ತಮ ನಾಯಕತ್ವದ ಗುಣ ಹೊಂದಿತ್ತು.(ನರಿ, ಜಿಂಕೆ, ಕೋತಿ ,ಆನೆ)
2) ನೀರು ಒಂದು......... ಸಂಪತ್ತು. (ಅಮೂಲ್ಯ,ಚಿಕ್ಕ,ದೊಡ್ಡ,ಸರಳ)
3) ಮದ್ದು ಗುಂಡು ಸಿಡಿಸಬೇಡಿ .... ಯನ್ನು ಕೆಡಿಸಬೇಡಿ.
(ಪರಿಸರ, ಶಾಂತಿ, ಸುಖ, ಕಾಡು,)
4) ದಯೆ ಇರಲಿ .... ಪ್ರಾಣಿಗಳಲ್ಲಿ (ಒಂದು, ಸಕಲ, ಸುಂದರ, ಕರುಣೆ)

II. ಯೋಚಿಸಿ ಒಂದು ಪದದಲ್ಲಿ ಉತ್ತರಿಸಿ. (ಸುಲಭ)

5) ಕೋವಿಗಳಲ್ಲಿ ತುಂಬುವ ಸ್ಫೋಟಕ ಪುಡಿ.
6) ವಿವರ ಬರೆದು ಹಾಕುವ ಹಲಗೆ.
7) ದೀಪಾವಳಿ ಹಬ್ಬದಲ್ಲಿ ಹಾಗೂ ಉತ್ಸವದಿಗಳಲ್ಲಿ ಹಾರಿಸುವ ಸಿಡಿ ಮದ್ದು.

III. ಈ ಮಾತನ್ನುಯಾರು ಯಾರಿಗೆ ಹೇಳಿದರು. (ಸುಲಭ)

8) ನಮ್ಮನ್ನು ಹೆಚ್ಚು ಹೆಚ್ಚು ದುಡಿಸಿಕೊಳ್ಳುತ್ತೀರಿ.
9) ನಾವು ರೈತರಿಗೂ ನಿಮಗೂ ಮಿತ್ರರು.
10) ನಾವು ನಿಮ್ಮೊಂದಿಗೆ ಇದ್ದೇವೆ ನಮ್ಮನ್ನು ಮುದ್ದಿಸಿರಿ.
11)ನಮ್ಮ ಹೃದಯವೇ ಸಿಡಿದು ಹೋದಂತಾಗುತ್ತದೆ.

IV. ಈ ಕೆಳಗೆ ಸೂಚಿಸಿರುವ ಸ್ಥಳಗಳಲ್ಲಿ ನೀವು ನೋಡಿದ ಸೂಚನಾ ಫಲಕಗಳ ಮೇಲಿರುವ ಬರಹಗಳನ್ನು ಬರೆ. (ಸುಲಭ)

ಉದಾಹರಣೆಗೆ :ಆಸ್ಪತ್ರೆ- ನಿಶ್ಯಬ್ದ ವಾಗಿರಿ.
12) ಶಾಲೆ
13) ಶೌಚಾಲಯ
14) ಉದ್ಯಾನವನ

VIII. ಎರಡು ಮೂರು ವಾಕ್ಯದಲ್ಲಿ ಉತ್ತರ ಬರೆ. (ಸಾಧಾರಣ)

15) ಪ್ರಾಣಿಗಳನ್ನು ನಾವು ಏಕೆ ಪ್ರೀತಿಸಬೇಕು?
16) ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಎರೆಹುಳುವಿಗೆ ಹೇಗೆ ಸಹಾಯ ಮಾಡುವಿರಿ?

IX. ಸಮನಾರ್ಥಕ ಪದಗಳನ್ನು ಬರೆ. (ಸಾಧಾರಣ)

17) ಅಧಿಪತಿ-....... ....
18) ಮಂಗ-.......... ....
19) ಕಾಡು-........ ....

X. ಈ ಕೆಳಗಿನ ಭಿತ್ತಿ ಪತ್ರವನ್ನು ವೀಕ್ಷಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (ಕಠಿಣ)



20) ಈ ಭಿತ್ತಿ ಪತ್ರ ಯಾವ ಇಲಾಖೆಗೆ ಸಂಬಂಧಿಸಿದೆ?
21)ಒಣ ಕಸವನ್ನು ಯಾವ ಬಣ್ಣದ ಬುಟ್ಟಿಗೆ ಹಾಕಬೇಕು?
22) ಹಸಿ ಕಸವನ್ನು ಯಾವ ಬಣ್ಣದ ಕಸದ ಬುಟ್ಟಿಗೆ ಹಾಕಬೇಕು?
23) ಈ ಭಿತ್ತಿ ಪತ್ರದಲ್ಲಿರುವ ಘೋಷಣಾ ವಾಕ್ಯವನ್ನು ಬರೆ?

ಘಟಕ 4 - ಜೀವದ ಮೌಲ್ಯ

ಕಲಿಕಾಫಲ-6 ಬೇರೆ ಬೇರೆ ಪರಿಸರ ಮತ್ತು ಉದ್ದೇಶಗಳಿಗಾಗಿ (ಸೂಚನಾ ಫಲಕದಲ್ಲಿ ಹಾಕಿರುವ ಸೂಚನೆ ಕಾರ್ಯಕ್ರಮಗಳ ಪಟ್ಟಿ ಜ್ಞಾನ ಪಡೆದುಕೊಳ್ಳಲು) ಓದುತ್ತಾರೆ ಮತ್ತು ಬರೆಯುತ್ತಾರೆ.

I. ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದುದ್ದನ್ನು ಆರಿಸಿ ಬರೆಯಿರಿ. . (ಸುಲಭ)

1. ಡಾಕ್ಟರ್ ಮಾರ್ಲಿನ್ ರವರು ಗುಣವಾಗದ ಕಾಯಿಲೆಗೆ ಚಿಕಿತ್ಸೆ ನೀಡುವುದನ್ನು____________ ಎಂದು ಭಾವಿಸಿದ್ದರು.
   ಅ) ಸಹಾನುಭೂತಿ ಆ) ಕರುಣೆ ಇ) ವಿವೇಕ ಈ) ಅವಿವೇಕ
2. ಡಾಕ್ಟರ್ ಮಿಲ್ಲರ್ ಸುಪ್ರಸಿದ್ಧ ವೈದ್ಯರಾಗಿದ್ದರು. ಗೆರೆ ಎಳೆದ ಪದ
   ಅ) ಅಂಕಿತನಾಮ ಆ) ಅನ್ವರ್ಥನಾಮ ಇ) ರೂಢನಾಮ ಈ) ಸರ್ವನಾಮ
3. ಪ್ರಸವ ಈ ಪದದ ಅರ್ಥ.............
   ಅ)ಪ್ರವಾಹ ಆ) ಸಮಾಧಾನ ಇ) ಹೆರಿಗೆ ಈ) ಉಪಚಾರ
4. ಬಾರ್ಬರಾ ಕೆಳಗಿನ ಯಾವ ಸಮಸ್ಯೆಯಿಂದ ಬಳಲುತ್ತಿದಳು.
   ಅ) ಕುತ್ತಿಗೆ ಸೆಳೆತ ಕೈ ಕಾಲು ನೋವು ಆ) ಕಿಡ್ನಿ ವೈಫಲ್ಯ
   ಇ) ಹೃದಯಿ ಸಂಬಂಧಿ ಕಾಯಿಲೆ ಈ) ಉಸಿರಾಟ ಸಮಸ್ಯೆ

I. ಬಿಟ್ಟ ಸ್ಥಳ ತುಂಬಿರಿ. (ಸುಲಭ)

(ಎಲ್. ಆರ್. ನಾಯ್ಕ, ಅಂಕಿತನಾಮ, ಕಂಠ, ಅಣಕಿಸಿ, ಅಡ್ಡ ಹೆಸರಿನಲ್ಲಿ)

5. ಇತರ ಮಕ್ಕಳು________________ಗೇಲಿ ಮಾಡುವರು.
6. ಡಾಕ್ಟರ್ ತೇಡ್ಡಿಯಸ್ ಮಾರ್ಲಿನನ ___________ ಬಿಗಿದು ಬಂತು.
7. ಗುರುತಿಗಾಗಿ ಇಟ್ಟುಕೊಂಡ ಹೆಸರುಗಳನ್ನು_____________________ಎನ್ನುವರು.
8. ಜೀವದ ಮೌಲ್ಯ ಕನ್ನಡಕ್ಕೆ ಭಾಷಾಂತರಿಸಿದವರು__________________________.

IV. ಸೂಚನೆಯಂತೆ ಬರೆಯಿರಿ. (ಸುಲಭ)

9. ಆರೈಕೆ (ಪದದ ಅರ್ಥ ಬರೆ)
10. ನದಿ ಈ ಪದ ರೂಢನಾಮ ಪದಕ್ಕೆ ಉದಾಹರಣೆಯಾಗಿದೆ. (ಸರಿ ತಪ್ಪು ತಿಳಿಸಿ)
11. ಹೂವನ್ನು ಕೀಳಬೇಡಿ (ಈ ಸೂಚನಾ ಫಲಕ ಇರುವ ಸ್ಥಳ)
12. ಕಣ್ಣು ತೆರೆಸು (ಸ್ವಂತ ವಾಕ್ಯ ರಚಿಸಿರಿ)

V. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ: (ಸುಲಭ)

13. ಮಾರ್ಲಿನನು ಮೊಮ್ಮಗಳಿಗೆ ಕಂಡು ಬಂದ ಕಾಯಿಲೆ ಯಾವುದು?
14. ಮಾರ್ಲಿನನನ್ನು ಭೇಟಿಯಾದ ಪ್ರವೀಣರಲ್ಲೊಬ್ಬ ಯಾವ ಸಲಹೆಯನ್ನು ಕೊಟ್ಟನು?
15. ಕೊನೆಯಲ್ಲಿ ಮಾರ್ಲಿನನು ಮಿಲ್ಲರ್‌ನಿಗೆ ಯಾವ ರೀತಿ ಕೃತಜ್ಞತೆ ಹೇಳಿದನು?

VI.ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ. (ಸಾಧಾರಣ)

16. ನಾಮಪದ ಎಂದರೇನು? ಉದಾಹರಣೆ ಕೊಡಿ.
17. ಮಾರ್ಲಿನನ ಕಂಠ ಬಿಗಿದು ಬರಲು ಕಾರಣವೇನು?
18. ಡಾಕ್ಟರ್ ತೇಡ್ಡಿಯಸ್ ಮಾರ್ಲಿನನು ವೈದ್ಯಕೀಯ ವಿದ್ಯಾರ್ಥಿಯಾಗಿದ್ದಾಗ ಯಾವುದನ್ನು ಅವಿವೇಕ ಎಂದು ಭಾವಿಸಿದ್ದನು?
19. ಮಗುವಿಗೆ ಉಸಿರಾಡುವಂತೆ ಸಹಕರಿಸಿದಾಗ ಮಾರ್ಲಿನನ ಮನಸ್ಸಿನಲ್ಲಿ ಬಂದ ಆಲೋಚನೆಗಳೇನು?
20. ವಿವಿಧ ಸ್ಥಳಗಳಲ್ಲಿ ನೀನು ನೋಡಿರುವ ನಾಲ್ಕು ಸೂಚನಾ ಫಲಕಗಳನ್ನು ಬರೆ.
21. ಮಾರ್ಲಿನನ ಭೇಟಿಯಾದ ಪ್ರವೀಣರಲೊಬ್ಬ ಯಾವ ಸಲಹೆಯನ್ನು ಕೊಟ್ಟನು?
22. ಪೋಲಿಯೋ ತರಹವೇ ಮಕ್ಕಳನ್ನು ಬಾಧಿಸುವ ಇತರೆ ಕಾಯಿಲೆಗಳನ್ನು ಪಟ್ಟಿ ಮಾಡು.
23. ಕೆಳಗಿನ ಪಠ್ಯಾಂಶವನ್ನು ಓದಿ ರೂಢನಾಮ, ಅಂಕಿತನಾಮ ಹಾಗೂ ಅನ್ವರ್ಥನಾಮಗಳಾಗಿ ವಿಂಗಡಿಸಿ ಬರೆ.

ಒಂದು ದಿನ ಶಿಕ್ಷಕರು ವಿದ್ಯಾರ್ಥಿಗಳನ್ನು ಕರೆದುಕೊಂಡು ರಾಮಪಟ್ಟಣದಲ್ಲಿ ನಡೆಯುವ ಸಂತೆಗೆ ಹೊರಟರು . ರಾಮಪಟ್ಟಣಕ್ಕೆ ಹೋಗುವ ಬಸ್ಸನ್ನು ಹತ್ತಿ ಪ್ರಯಾಣಿಸುವಾಗ ಬೆಟ್ಟ, ನದಿ,ಕೆರೆ,ನೋಡುತ್ತಾ ಸಂತೆ ನಡೆಯುವ ಜಾಗವನ್ನು ತಲುಪಿದರು. ಅಲ್ಲಿ ಬಗೆ ಬಗೆಯ ಅಂಗಡಿಗಳನ್ನುನೋಡಿ ಮಕ್ಕಳಿಗೆ ಸಂತೋಷವಾಯಿತು. ಎಲ್ಲಾ ಮಕ್ಕಳು ವ್ಯಾಪಾರಿಗಳೊಂದಿಗೆ ವ್ಯಾಪಾರವನ್ನುಮಾಡಿದರು. ಸೋನು ಬಳೆಗಾರನಿಂದ ಬಳೆಗಳನ್ನು ತೊಡಿಸಿಕೊಂಡಳು. ರಾಜು ಆಟಿಕೆ ಸಾಮಾನು ತೆಗೆದುಕೊಂಡನು.

VII ನಾಲ್ಕು-ಐದು ವಾಕ್ಯಗಳಲ್ಲಿ ಉತ್ತರಿಸಿ. (ಕಠಿಣ)

24. ಜೀವದ ಮೌಲ್ಯ ಪಾಠದಲ್ಲಿ ನಿನಗೆ ಇಷ್ಟವಾದ ಅಂಶಗಳು ಮೌಲ್ಯಗಳ ಕುರಿತು ಬರೆ.

ಈ ಪೋಸ್ಟರ್ ಗಮನಿಸಿ ಓದಿ ಪ್ರಶ್ನೆಗಳಿಗೆ ಉತ್ತರಿಸಿ.



25. ಈ ಪೋಸ್ಟರ್ ಯಾವ ಕಾರ್ಯಕ್ರಮಕ್ಕೆ ಸಂಬಂಧಿಸಿದ್ದಾಗಿದೆ?

26. ಈ ಪೋಸ್ಟರ್ ಅನ್ನು ಯಾವ ಇಲಾಖೆಯವರು ಪ್ರಕಟಿಸಿದ್ದಾರೆ?

27.ಎಷ್ಟು ವರ್ಷದ ಒಳಗಿನ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸಬೇಕು?

28.ಈ ಕಾರ್ಯಕ್ರಮ ನಡೆಯುವ ದಿನಾಂಕ ಬರೆ.

ಗದ್ಯಭಾಗ 5- ಪಂಜರಶಾಲೆ

ಕಲಿಕಾಫಲ -1 ಭಾಷೆಯ ಸೂಕ್ಷ್ಮಾಂಶಗಳ ಬಗ್ಗೆ ಗಮನಹರಿಸಿ ತಮ್ಮ ಭಾಷೆಯನ್ನು ತಾವೇ ರಚಿಸಿ ನಿರರ್ಗಳವಾಗಿ ಮಾತನಾಡುತ್ತಾರೆ.

ಕಲಿಕಾಫಲ-11 ಭಾಷಾ ಸೂಕ್ಷ್ಮಾಂಶಗಳ ಮೇಲೆ ಗಮನಹರಿಸಿ ತಮ್ಮ ಭಾಷೆಯ ರಚನೆ ಮಾಡಿಕೊಳ್ಳುತ್ತಾರೆ ಮತ್ತು ಅದನ್ನು ತಮ್ಮ ಬರವಣಿಗೆಯಲ್ಲಿ ಜಾರಿಗೆ ತರುತ್ತಾರೆ.

I. ಬಿಟ್ಟ ಸ್ಥಳ ತುಂಬಿ (ಸುಲಭ)

1. ಬನ್ನಿ ಬನ್ನಿ___________ ತಿನ್ನಿ ಬೇಗ ಹಾರಿ ಬನ್ನಿ
2. ತಾನು ಸುಸಂಸ್ಕೃತವಾಗಿ ಕಾಡಿನ ಉಳಿದ ___________ಗಳನ್ನು ಸಭ್ಯ ಮಾಡಲಿ
3. ಒಂದು ಪಕ್ಷಿಯ ______________ದಲ್ಲೂ ರಾಜನ ಆಸಕ್ತಿ ಎಷ್ಟಿದೆ ಎನ್ನುವುದು.
4. ಮಹಾರಾಜ ಅಳಿಯ____________ದೇಶದಲ್ಲಿ ಪ್ರಾಣಿಶಾಸ್ತ್ರ ಪಕ್ಷಿಶಾಸ್ತ್ರದಲ್ಲಿ ಪಾರಂಗತರಾಗಿದ್ದರು.

II. 5. ಹೊಂದಿಸಿ ಬರೆ (ಸುಲಭ)

1. ಖಗ	ಗಿಳಿ
2. ಮಧುಫಲ	ಪಕ್ಷಿ
3. ರಕ್ಷಕರು	ಸಿಹಿಯಾದಹಣ್ಣು
4. ಶುಕ	ಕಾಪಾಡುವವರು

III. ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆ(ಸುಲಭ)

6. ರಾಮನ ದೆಸೆಯಿಂದ ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ
   1.ಪ್ರಥಮ. 2. ಸಪ್ತಮಿ
   3.ತೃತೀಯ. 4. ಪಂಚಮಿ
7. ಬೆಟ್ಟವನ್ನು ಈ ಪದದಲ್ಲಿರುವ ನಾಮಪ್ರಕೃತಿ
   1. ಬೆಟ್ಟ. 2. ಬೆಟ್ಟದ
   3. ಬೆಟ್ಟವನ್ನು. 4. ಬೆಟ್ಟದಲ್ಲಿ
8. ಮನೆ+ಅಲ್ಲಿ ಈ ಪದವನ್ನುಕೂಡಿಸಿ ಬರೆದಾಗ
   1. ಮನೆಯಲ್ಲಿ. 2. ಮನೆವಲ್ಲಿ
   3. ಮನೆಯನ್ನು. 4. ಮನೆಅಲ್ಲಿ
9. ನಾನು ಹಣ್ಣನ್ನು ತಿಂದೆನು. ಈ ವಾಕ್ಯದ ಬಹುವಚನ ರೂಪ.
   1. ನಾನು ಹಣ್ಣನ್ನು ತಿಂದೆವು
   2. ನಾನು ಹಣ್ಣು ತಿಂದೆ
   3. ನಾವು ಹಣ್ಣು ತಿನ್ನುತ್ತೇವೆ
   4. ನಾವು ಹಣ್ಣನ್ನು ತಿನ್ನುತ್ತೇವೆ.

IV. ಒಂದುವಾಕ್ಯದಲ್ಲಿಉತ್ತರಿಸು. (ಸುಲಭ)

10. ಗಿಳಿಮರಿಯು ಏನನ್ನು ತಿನ್ನಲು ತನ್ನ ಬಳಗವನ್ನು ಕರೆಯಿತು?
11. ರಾಜನು ಗಿಳಿಮರಿಯನ್ನು ಯಾವ ಶಾಲೆಗೆ ಸೇರಿಸಲು ಆದೇಶ ಮಾಡಿದನು?
12. ರಾಜನು ಯಾರನ್ನು ಶಿಕ್ಷಣ ಮಂತ್ರಿಯನ್ನಾಗಿ ನೇಮಿಸಿದನು?
13. ಮೃಗ ಪದದ ಅರ್ಥ ಬರೆ.

V. ಈ ಕೆಳಗಿನ ವಾಕ್ಯಗಳನ್ನು ಸರಿಪಡಿಸಿ ಬರೆ. (ಸಾಧಾರಣ)

14. ಅಂಸ ಕೊಳದಲ್ಲಿ ಈಜುತ್ತಿದೆ.
15. ಸಂಕದ ನಾದ ಕೇಳಲು ಇಂಪು.
16. ನಕ್ಷತ್ರಗಳು ಹಿರುಳಿನಲ್ಲಿ ಹೊಳೆಯುತ್ತಿವೆ.
17. ಹಾಲು ಮಾರಿ ದನ ಸಂಪಾದಿಸಿನು.

VI. ಎರಡು ಮೂರು ವಾಕ್ಯದಲ್ಲಿ ಉತ್ತರಿಸು. (ಸಾಧಾರಣ)

18. ಗಿಳಿ ಮರಿಯ ಬಗೆಗೆ ಮಂತ್ರಿಯು ರಾಜನಿಗೆ ಏನು ಹೇಳಿದನು?

19. ಗಿಳಿ ಮರಿಯು ಏನೇನು ಕಲಿಯಬೇಕು ಎಂದು ರಾಜನು ಹೇಳುತ್ತಾನೆ?

20. ಗಿಳಿಮರಿಗೆ ಸುಶಿಕ್ಷಿತ ಶಿಕ್ಷಣ ನೀಡಲು ರಾಜನ ಅಳಿಯ ತೆಗೆದುಕೊಂಡು ಕ್ರಮಗಳೇನು?

VII.

21. ಈ ಕೆಳಗಿನ ಗದ್ಯ ಭಾಗವನ್ನು ಓದಿಕೊಂಡು ಸೂಕ್ತ ಲೇಖನಚಿಹ್ನೆಗಳನ್ನು ಬರೆ

ಯಾರಾದರೂ ಯಾರಿಗಾದರೂ ಯಾವ ವಿಷಯವನ್ನಾದರೂ ತಿಳಿಸಲು ಹೇಳಿದ್ದರೆ ಅವರಿಗೆ ಆ ವಿಷಯವನ್ನು ಯಥಾವತ್ತಾಗಿ ತಿಳಿಸಿಬಿಡುತ್ತಾಳೆ ಮಲಜ್ಜಿ ಪತ್ರಿಕೆ ಪತ್ರಗಳನ್ನು ಸಂಬಂಧಿಸಿದವರಿಗೆ ತಪ್ಪದೆ ತಲುಪಿಸುತ್ತಾಳೆ ಯಾರು ಎಲ್ಲಿಗೆ ಹೇಗೆ ಹೋಗಿದ್ದಾರೆ ಯಾವಾಗ ಬರುತ್ತಾರೆ ಎಲ್ಲವೂ ತಿಳಿದಿರುತ್ತದೆ ಮಲ್ಲಜ್ಜಿಗೆ (ಸಾಧಾರಣ)

VIII.

22. ಈ ಕೆಳಗಿನ ಸೂಚನೆಯಂತೆ ಉತ್ತರಿಸು.

ನೀನು ಪಂಜರ ಪಕ್ಷಿಯ ಸ್ಥಾನದಲ್ಲಿದ್ದರೆ ನಿನ್ನ ಮನಸ್ಸಿನ ಭಾವನೆಯನ್ನು ವ್ಯಕ್ತಪಡಿಸು. (ಕಠಿಣ)

ಗದ್ಯಭಾಗ 6: ಮಲ್ಲ ಜ್ಜಿಯ ಮಳಿಗೆ

ಕಲಿಕಾ ಫಲ -03 ಸ್ವಯಿಚ್ಛೆಯಿಂದ ಅಥವಾ ಶಿಕ್ಷಕರಿಂದ ನಿರ್ಧರಿಸಿದ ಚಟುವಟಿಕೆಗಳಲ್ಲಿ ಬರವಣಿಗೆ ಪ್ರಕ್ರಿಯೆಗಳ ಬಗ್ಗೆ ತಿಳಿದು ತಮ್ಮ ಬರವಣಿಗೆಯನ್ನು ಸಂಶೋಧಿಸುತ್ತಾರೆ ಮತ್ತು ಬರವಣಿಗೆಯ ಉದ್ದೇಶ ಮತ್ತು ಓದುಗನಿಗೆ ಅನುಸಾರವಾಗಿ ತಮ್ಮ ಬರವಣಿಗೆಯಲ್ಲಿ ಪರಿವರ್ತನೆ ಮಾಡುತ್ತಾರೆ.

I. 1. ಹೊಂದಿಸಿ ಬರೆಯಿರಿ. (ಸುಲಭ)

a.ತಂದೆಗೆ	ಮಾತೃಶ್ರೀ
b. ತಾಯಿಗೆ	ಚಿರಂಜೀವಿ
c.ಗುರುಗಳಿಗೆ	ತೀರ್ಥರೂಪ
d.ಗೆಳೆಯ	ಮಾತೃಶ್ರೀ ಸಮಾನ
e.ಚಿಕ್ಕಪ್ಪ	ಆತ್ಮೀಯ
f.ದೊಡ್ಡಮ್ಮ	ತಿರ್ಥರೂಪ ಸಮಾನ
g.ಕಿರಿಯರಿಗೆ	ಪೂಜ್ಯ

II. ಕೆಳಗಿನವುಗಳಿಗೆ ಸೂಚನೆಯಂತೆ ಉತ್ತರಿಸು. (ಸುಲಭ)

2. "ಗೀತಾ ಹಣ್ಣನ್ನು ತಿನ್ನುತ್ತಿದ್ದಾಳೆ". ಈ ವಾಕ್ಯವನ್ನು ಭೂತಕಾಲಕ್ಕೆ ಪರಿವರ್ತಿಸಿ ಬರೆಯಿರಿ.
3. ಈ ಪದದಲ್ಲಿನ ಧಾತುವನ್ನು ಬರೆಯಿರಿ: ಹೋಗುತ್ತಿದ್ದಾಳೆ
4. ಈ ಪದದಲ್ಲಿನ ನಾಮ ಪ್ರಕೃತಿಯನ್ನು ಬರೆಯಿರಿ: ಕಲ್ಲನ್ನು
5. ಈ ಪದಕ್ಕೆ ಸಮನಾರ್ಥಕ ಪದಗಳನ್ನು ಬರೆಯಿರಿ: ತುತರ್ು
6. ಈ ವಾಕ್ಯವನ್ನು ಏಕವಚನಕ್ಕೆ ಬದಲಾಯಿಸಿ ಬರೆಯಿರಿ: ಜಾನ್ ಗೆಳೆಯರ ಜೊತೆ ಆಟ ಆಡುತ್ತಿದ್ದನು.

III.ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಸರಿಯಾದ ಆಯ್ಕೆಯನ್ನು ಆರಿಸಿ(ಸುಲಭ)

7. ಬಂದರು ಈ ಪದದ ಸರಿಯಾದ ರೂಪ

ಅ)ಬನ್ ದರು ಆ)ಬಮ್ ದರು ಇ)ಬದನ್ ರು ಈ)ಬರಮ್ ರು

8. ರೈತ ಹಾಕುತ್ತಿದ್ದ ಮೇವನ್ನು ಹಸುಗಳು ಪ್ರತಿದಿನವೂ ತಿನ್ನುತ್ತಿದ್ದ. ಈ ವಾಕ್ಯದ ಸರಿಯಾದ ರೂಪ

ಅ) ರೈತ ಹಾಕುತ್ತಿದ್ದ ಮೇವನ್ನು ಹಸುಗಳು ಪ್ರತಿದಿನವೂ ತಿನ್ನುತ್ತಿರಲಿಲ್ಲ.
ಆ) ರೈತ ಹಾಕುತ್ತಿದ್ದ ಮೇವನ್ನು ಹಸುಗಳು ಪ್ರತಿದಿನವೂ ತಿನ್ನುತ್ತಿದ್ದವು.
ಇ) ಹಸುಗಳು ಹಾಕಿದ ಮೇವನ್ನು ರೈತ ಪ್ರತಿದಿನ ತಿನ್ನುತ್ತಿದ್ದ.
ಈ)ಹಸುಗಳು ಮತ್ತು ರೈತ ಪ್ರತಿದಿನ ಮೇವು ತಿನ್ನುತ್ತಿದ್ದರು.

9. ರಾಮನಿಂದ ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ ಗುರುತಿಸಿ

ಅ) ಪ್ರಥಮ ಆ)ತೃತೀಯ ಇ)ಸಪ್ತಮಿ ಈ) ಷಷ್ಠಿ

10. <u>ಶಾಲೆಯಲ್ಲಿ</u> ಹಬ್ಬದ ವಾತಾವರಣ ಉಂಟಾಗಿತ್ತು ಅಡಿಗೆರೆ ಎಳೆದ ಪದದ ವಿಭಕ್ತಿ ಪ್ರತ್ಯಯವನ್ನು ಗುರುತಿಸಿ.

ಅ)ದೆಸೆಯಿಂದ ಆ)ಆ ಇ)ಅಲ್ಲಿ ಈ) ಅನ್ನು

11.ತಿನ್ನು ಎಂಬ ಪದದ ಮಧ್ಯಮ ಪುರುಷ ಭವಿಷ್ಯತ್ಕಾಲ ಬಹುವಚನ ಧಾತುವನ್ನು ಗುರುತಿಸು.

ಅ) ತಿನ್ನುವಿರಿ ಆ) ತಿನ್ನುವೆ ಇ)ತಿನ್ನುತ್ತೀರಿ ಈ)ತಿಂದಿರಿ

IV. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. (ಸುಲಭ)

12.ಮಲ್ಲಜ್ಜಿಯ ಕೋರ್ಟಿನಲ್ಲಿ ವಕೀಲರ ಶುಲ್ಕ ಎಷ್ಟು?
13.ಸೃಜನನಿಗೆ ಮಲ್ಲಜ್ಜಿಯ ಮಳಿಗೆ ಯಾವ ಲೋಕದಂತೆ ತೋರಿದೆ ?

V.ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (ಸಾಧಾರಣ)

14.ಪತ್ರಗಳ ವಿಧಗಳನ್ನು ಹೆಸರಿಸಿ.
15.ಮಲ್ಲಜ್ಜಿಯ ಮಳಿಗೆಯಲ್ಲಿ ದೊರೆಯುವ ವಸ್ತುಗಳು ಯಾವುವು?
16.ಮಲ್ಲಜ್ಜಿಯ ನ್ಯಾಯಾಲಯ ಕುರಿತು ವಿವರಿಸಿ.

VI.ಕೆಳಗಿನ ಪತ್ರಗಳನ್ನು ಬರೆಯಿರಿ. (ಕಠಿಣ)

17ನಿಮ್ಮ ತಂದೆಯವರಿಗೆ ನಿನ್ನ ಶಾಲೆಯ ವಿಶೇಷತೆಗಳನ್ನು ತಿಳಿಸಿ ಒಂದು ಪತ್ರವನ್ನು ಬರೆಯಿರಿ.
18.ನಿಮ್ಮ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ನಿಮ್ಮ ಊರಿನಲ್ಲಿ ಆಗಿರುವ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿಕೊಡುವಂತೆ ಒಂದು ಮನವಿ ಪತ್ರವನ್ನು ಬರೆಯಿರಿ.

ಗದ್ಯಭಾಗ 7: ಧೀರಸೇನಾನಿ

ಕಲಿಕಾಫಲ – 12 ಭಾಷಾ ವ್ಯಾಕರಣದ ಅಂಗಗಳನ್ನು (ಉದಾ: ಕಾರಕ ಚಿಹ್ನೆಗಳು, ಕ್ರಿಯಾ, ಕಾಲ, ವಿರುದ್ಧ ಪದ ಮುಂತಾದವು) ಗುರುತಿಸುತ್ತಾರೆ. ಸೂಕ್ತವಾಗಿ ಬರೆಯುತ್ತಾರೆ.

I. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ (ಸುಲಭ)

1. ಗೋಪಾಲರಾಯರ ತಂದೆ ________________
2. ಗೋಪಾಲರಾಯರು ಶಿಕ್ಷಣ ಪಡೆದದ್ದು ______________
3. ಸೈನಿಕ ಪದದ ಅರ್ಥ___________________
4. ಭಾರತ ಸರ್ಕಾರವು ಬೇವೂರರಿಗೆ ನೀಡಿದ ಪ್ರಶಸ್ತಿ ________________
5. ಬೇವೂರರ ತತ್ವ ____________________

II. 6. ಹೊಂದಿಸಿ ಬರೆ: (ಸುಲಭ)

	ಅ	ಆ
a.	ಉತ್ತುಂಗ	ಹುಟ್ಟು
b.	ಜನ್ಮತಾಳು	ಒಳ್ಳೆಯತನ
c.	ಸಜ್ಜನಿಕೆ	ಒಳ್ಳೆಯದು
d.	ಲೇಸು	ಹಳ್ಳಿ
e.	ಗ್ರಾಮ	ಶ್ರೇಷ್ಠ

III. ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆ.(ಸುಲಭ)

7. ಬೇವೂರರ ತಾಯಿಯ ಹೆಸರು
   1. ಸೀತಾ 2. ಚೆನ್ನಮ್ಮ 3. ರುಕ್ಮಿಣಿಬಾಯಿ 4. ಸಿದ್ದಮ್ಮ
8. ಬೇವೂರರು ವಿದ್ಯಾರ್ಥಿ ಜೀವನದಲ್ಲಿ ಪಡೆದ ಪ್ರಶಸ್ತಿ
   1. ಗೌರವ ಖಡ್ಗ 2. ವೀರಸೈನಿಕ 3. ಚಿನ್ನದಪದಕ 4. ದೇಶಪ್ರೇಮಿ
9. ಬೇವೂರರು ಸೇನಾ ತುಕಡಿಯ ಮುಖ್ಯಸ್ಥರಾಗಿ ಈ ದೇಶದ ವಿರುದ್ಧ ಹೋರಾಡಿದರು
   1. ಚೀನಾ 2. ಪಾಕಿಸ್ಥಾನ 3. ಅಮೆರಿಕಾ 4.ಜಪಾನ್
10. ಬೇವೂರರ ಧರ್ಮಪತ್ನಿ ಹೆಸರು
   1. ರಾಧಿಕಾಬಾಯಿ 2. ತುಳಸಿಬಾಯಿ 3. ಮಂಜುಳಾ 4. ಗೀತಾಬಾಯಿ
11. ಜಿ.ಜಿ. ಬೇವೂರರು ದಂಡನಾಯಕರಾಗಿದ್ದುದು
   1. ಎಂಟನೆಯ 2. ಹತ್ತನೆಯ 3. ಒಂಬತ್ತನೆಯ 4.ನಾಲ್ಕನೆಯ

IV. ಒಂದು ವಾಕ್ಯದಲ್ಲಿ ಉತ್ತರಿಸು. (ಸುಲಭ)

12. ಬೇವೂರರು ಯಾವಾಗ ಜನಿಸಿದರು?
13. ಗೋಪಾಲರಾಯರ ಸ್ವಂತ ಊರು ಯಾವುದು?
14. ಬೇವೂರರನ್ನು ಬಿಗಿದಪ್ಪಿ ಪ್ರಶಂಸಿದವರು ಯಾರು?
15. ಗೋಪಾಲರಾಯರು ಸೈನಿಕ ಶಿಕ್ಷಣ ಪಡೆದದ್ದು ಎಲ್ಲಿ?
16. ಬೇವೂರುರು ಇಹಲೋಕ ತ್ಯಜಿಸಿದ್ದು ಯಾವಾಗ?

V. ಎರಡು – ಮೂರು ವಾಕ್ಯದಲ್ಲಿ ಉತ್ತರಿಸು ;- (ಸಾಧಾರಣ)

17. ಬೇವೂರರ ಪ್ರಾಥಮಿಕ ಶಿಕ್ಷಣದ ಕುರಿತು ಬರೆ
18. ಬೇವೂರರ ನೇತೃತ್ವದ ಸೈನಿಕ ತುಕಡಿಯ ಸಾಹಸವನ್ನು ವಿವರಿಸಿ
19. ಬೇವೂರರ ಸಜ್ಜನಿಕೆಯನ್ನು ಉದಾಹರಣೆಯೊಂದಿಗೆ ವಿವರಿಸಿ.

VI. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸು (ಸಾಧಾರಣ)

20. ನಾನೊಬ್ಬ ಸೈನಿಕ ನನಗೇಕೆ ರಕ್ಷಣೆಈ ವಾಕ್ಯದಲ್ಲಿ ಲೇಖನ ಚಿಹ್ನೆ ಹಾಕಿಪೂರ್ಣಗೊಳಿಸು.

21.“ಸೈನಿಕ ಶತ್ರು ದೇಶದ ವಿರುದ್ಧ ಹೋರಾಡಿದನು”. ಈ ವಾಕ್ಯವನ್ನು ಬಹುವಚನದಲ್ಲಿ ಬರೆ.

22.“ಹುಡುಗರು ಹಣ್ಣುಗಳನ್ನು ತಿಂದರು. ”ಈ ವಾಕ್ಯವನ್ನು ಭವಿಷ್ಯತ್ ಕಾಲದಲ್ಲಿ ಬರೆ.

23.“ಸೀತಾಳು ಮರದಲ್ಲಿದ್ದ ಹಣ್ಣುಗಳನ್ನು ಬೀಳಿಸಿದಳು.” ಈ ವಾಕ್ಯದಲ್ಲಿರುವ ಕ್ರಿಯಾಪದವನ್ನು ಗುರುತಿಸು.

VII.

24. ನಮ್ಮ ದೇಶದ ಮೇಲೆ ಶತ್ರು ದೇಶ ದಾಳಿ ಮಾಡಿದಾಗ ನೀನು ಒಬ್ಬ ಯೋಧನಾಗಿ ದೇಶಕ್ಕೆ ಹೇಗೆ ಸೇವೆ ಸಲ್ಲಿಸಲು ಬಯಸುವೆ ಎಂಬುದನ್ನು ನಿನ್ನ ಮಾತುಗಳಲ್ಲಿ ಬರೆ. (ಕಠಿಣ)

VIII.

25.ಸೂಕ್ತಲೇಖನ ಚಿಹ್ನೆಗಳನ್ನು ಬಳಸಿ ಕೆಳಗಿನ ಗದ್ಯ ಭಾಗವನ್ನು ನಕಲು ಮಾಡು. (ಕಠಿಣ)

ಮಕ್ಕಳು: ಯಾರಿವಳು ಎಷ್ಟು ಅಸಹ್ಯವಾಗಿದ್ದಾಳೆ
ಜಲದೇವತೆ: ನಾನು ಜಲದೇವತೆ ಮಕ್ಕಳೇ
ಮಕ್ಕಳು: ಜಲ ದೇವತೆ ಹೀಗಿರುತ್ತಾಳೆ. ನಿನ್ನನ್ನು ನೋಡಿದರೆ ನಮಗೆ ಅಸಹ್ಯವಾಗುತ್ತದೆ
ಜಲದೇವತೆ: ಏಕೆ ನಾನು ನಿನಗೆ ಏನು ಮಾಡಿರುವೆ ನೀವೇಕೆ ಅಸಹ್ಯಪಟ್ಟುಕೊಳ್ಳುತ್ತಿದ್ದೀರಿ? ನನ್ನಿಂದ ನೀವು ಹಲವು ಪ್ರಯೋಜನ ಪಡೆದಿಲ್ಲವೇ?

ಗದ್ಯಭಾಗ 8: ಸಂಗೊಳ್ಳಿರಾಯಣ್ಣ

ಕಲಿಕಾ ಫಲ-12 ಭಾಷಾ ವ್ಯಾಕರಣದ ಅಂಗಗಳನ್ನು (ಉದಾ: ಕಾರಕ ಚಿಹ್ನೆಗಳು ,ಕ್ರಿಯಾ, ಕಾಲ, ವಿರುದ್ದ ಪದ ಮುಂತಾದವು) ಗುರುತಿಸುತ್ತಾರೆ. ಸೂಕ್ತವಾಗಿ ಬರೆಯುತ್ತಾರೆ.

I. ಖಾಲಿ ಜಾಗದಲ್ಲಿ ಸೂಕ್ತ ಉತ್ತರವನ್ನು ಬರೆ. (ಸುಲಭ)

1.ರಾಯಣ್ಣ——----ಯುದ್ದ ತಂತ್ರದಲ್ಲಿ ಪಳಗಿದ್ದನು

2. ರಾಯಣ್ಣ ಸ್ವಾಮಿ ಕಾರ್ಯಕ್ಕೆ ಜೀವತೆತ್ತ. ಒಬ್ಬ——-----

II. ಈ ಕೆಳಗಿನ ಪ್ರಶ್ನೆಗೆ ನೀಡಿರುವ ಆಯ್ಕೆಗಳಲ್ಲಿ ಸೂಕ್ತ ಆಯ್ಕೆಯನ್ನು ಆರಿಸಿ ಬರೆ. (ಸುಲಭ)

3. ರಾಯಣ್ಣನನ್ನು ಗಲ್ಲಿಗೇರಿಸಿದ ಸ್ಥಳವೆಂದರೆ.

ಅ) ನಂದಗಡ. ಆ) ಸಂಪಗಾವ ಇ) ಖಾನಾಪುರ ಈ) ಸಂಗೊಳ್ಳಿ

III. 4. ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಸೂಚನೆಯಂತೆ ಉತ್ತರಿಸಿ. (ಸುಲಭ)

4. ಆಹೋರಾತ್ರಿ ಈ ಪದವನ್ನು ಸ್ವಂತ ವಾಕ್ಯದಲ್ಲಿ ಬಳಸಿ
5. ಎರಗು ಪದದ ಸಮನಾರ್ಥಕ ಪದ.
6. ಅನಿರೀಕ್ಷಿತ ಪದದ ವಿರುದ್ಧಾರ್ಥಕ ಪದ
7. ಪಡೆ ಪದದ ನಾನಾರ್ಥಕ ಪದ

IV. ಹೊಂದಿಸಿ ಬರೆ. (ಸುಲಭ)

ಎ. ಚಿಣಗಿ ಕೋವಾಡ	ತಾಲೂಕು
ಬಿ. ನಂದಗಡ	ಮೇಜರ್ ಪಿಕ್ಕರಿಂಗ್
ಸಿ. ಸಂಪಂಗಾವ	ಯುದ್ದ
ಡಿ. ಖಾನಾಪುರ	ಸಮಾಧಿ

V. ಸಂದರ್ಭ ಸಹಿತ ವಿವರಿಸಿ. (ಸಾಧಾರಣ)

8. ಆತ ಬಯಸಿದ್ದಲ್ಲೇ ಸಮಾಧಿ ಮಾಡಲಾಯಿತು.
9. ಜನರ ಪಾಲಿಗೆ ವೀರಗುಡಿಯ ರಾಯಣ್ಣನ ಗದ್ದುಗೆಯಾಗಿದೆ.

VI. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ (ಸಾಧಾರಣ)

10. ರಾಯಣ್ಣ ಬ್ರಿಟಿಷ್ ಆಡಳಿತದ ವಿರುದ್ದ ತನ್ನ ಪ್ರತಿಭಟನೆಯನ್ನು ತೋರಿದ ಬಗೆ ಹೇಗೆ?

VII. ಈ ಪ್ರಶ್ನೆಗಳಿಗೆ ನಾಲ್ಕು ಅಥವಾ ಐದು ವಾಕ್ಯಗಳಲ್ಲಿ ಉತ್ತರಿಸಿ. (ಕಠಿಣ)

11. ರಾಯಣ್ಣನಲ್ಲಿ ಸಹಜವಾಗಿಯೇ ಯೋಧನಾಗುವ ಲಕ್ಷಣಗಳೆಲ್ಲವೂ ರಕ್ತಗತವಾಗಿದ್ದವು ಎಂಬುದನ್ನು ನಿರೂಪಿಸಿ.
12. ಬ್ರಿಟಿಷ್ ಸರ್ಕಾರ ರಾಯಣ್ಣನ ಮನೆತನಕ್ಕೆ ಸೇರಿದ ಭೂಮಿಯನ್ನು ವಶಪಡಿಸಿಕೊಳ್ಳಲು ಕಾರಣವೇನು?
13. ರಾಯಣ್ಣ ಬ್ರಿಟಿಷರ ವಿರುದ್ದ ಬಂಡಾಯವೇಳಲು ಕಾರಣವೇನು?

ಪದ್ಯಭಾಗ 1: ಗಿಡಮರ

ಕಲಿಕಾಫಲ-1 ಕೇಳಿದ/ಓದಿದ ಸಾಹಿತ್ಯ (ಹಾಸ್ಯ, ಸಾಹಸ, ಸಾಮಾಜಿಕ ಮುಂತಾದ ಕಥೆ, ಕವಿತೆ, ವಿಷಯ ವಸ್ತು, ಘಟನೆಯ ಚಿತ್ರಗಳು ಮತ್ತು ಪಾತ್ರಗಳು, ಶಿರೋನಾಮೆ ಮುಂತಾದವುಗಳ ಬಗ್ಗೆ ಮಾತನಾಡುತ್ತಾರೆ, ಪ್ರಶ್ನಿಸುತ್ತಾರೆ, ಸ್ವತಃ ಟಿಪ್ಪಣಿ ಬರೆಯುತ್ತಾರೆ. ತಮ್ಮ ಅಭಿಪ್ರಾಯ ಮತ್ತುತರ್ಕ ನೀಡುತ್ತಾರೆ ಮತ್ತು ಒಂದು ನಿರ್ಣಯಕ್ಕೆ ಬರುತ್ತಾರೆ.

ಕಲಿಕಾಫಲ-8 ಆಲಿಸಿದ ಓದಿದ ಸಾಹಿತ್ಯಗಳ (ಹಾಸ್ಯ ಸಾಹಸ ಸಾಮಾಜಿಕ ಮುಂತಾದ ವಿಷಯಗಳನ್ನು ಆಧರಿಸಿದ ಕಥೆ ಕವಿತೆ ಮುಂತಾದವುಗಳು) ವಿಷಯ ವಸ್ತು ಘಟನೆಗಳು ಚಿತ್ರಗಳು ಮತ್ತು ಪಾತ್ರಗಳು ಶಿರೋನಾಮೆಗಳ ಬಗ್ಗೆ ಮಾತನಾಡುತ್ತಾರೆ ,ಪ್ರಶ್ನಿಸುತ್ತಾರೆ ಸ್ವತಃ ಟಿಪ್ಪಣಿ ನೀಡುತ್ತಾರೆ ತಮ್ಮ ಮಾತಿಗೆ ತರ್ಕ ನೀಡುತ್ತಾರೆ ತಾರ್ಕಿಕವಾಗಿ ಚಿಂತಿಸಿ ಚರ್ಚಿಸಿ ನಿರ್ಣಯಕ್ಕೆ ಬರುತ್ತಾರೆ.

I. **ಸರಿ ತಪ್ಪು ಗುರುತಿಸಿ ಬರೆ. (ಸುಲಭ)**

1. ಗಿಡಮರ ಪಧ್ಯವನ್ನು ಬರೆದವರು ಕುವೆಂಪು.
2. ಅನುದಿನ ಪದದ ಸಮಾನಾರ್ಥಕ ಪದ ದಿನನಿತ್ಯ.
3. ಸತ್ಯಾನಂದ ಪಾತ್ರೋಟರವರ ಕಾವ್ಯದ ಧ್ವನಿಸುರುಳಿ ಪಿಸು ಮಾತು.
4. ಗಿಡ ಮರಗಳಲ್ಲಿ ಭೇದವಿದೆ.
5. ಮನುಷ್ಯನು ಪ್ರಕೃತಿಯ ಒಂದು ಭಾಗ.

II. **ಬಿಟ್ಟ ಸ್ಥಳವನ್ನು ಸರಿಯಾದ ಉತ್ತರದಿಂದ ಪೂರ್ಣಗೊಳಿಸು. (ಸುಲಭ)**

6. ಮರಗಿಡಗಳನ್ನು ಪೋಷಿಸಬೇಕಾದವರು ______________________________ .
7. ಸತ್ಯಾನಂದ ಪಾತ್ರೋಟ ಜನಿಸಿದ ಊರು ______________________________.
8. ಗಿಡ-ಮರ ಕವನವನ್ನು ____________________ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.
9. ಮನ ಪದದ ಸಮಾನಾರ್ಥಕ ಪದ ______________________.
10. ಒಟ್ಟಾಗಿ ಎಲ್ಲಾ ಬೆರಳುಗಳನ್ನು ಬಳಸುವುದು ____________________ ಅನ್ನು ಸೂಚಿಸುತ್ತದೆ.

III.

11 ಹೊಂದಿಸಿ ಬರೆ. (ಸುಲಭ)

ಅ	ಬ
ಎ) ಬೊಡ್ಡೆ	ಕಪ್ಪಾದ ಬಣ್ಣ
ಬಿ) ತರತರ	ಮರದ ಕಾಂಡ ಭಾಗ
ಸಿ) ಕರಿದು	ನಾಶ ಹೊಂದಿದ ಊರು
ಡಿ) ಹಾಳು ಕೊಂಪೆ	ವಿಧ ವಿಧವಾದ

IV. **ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. (ಸುಲಭ)**

12. ಗಿಡ ಮರ ಪದ್ಯವನ್ನು ಬರೆದವರು ಯಾರು?

13. ಸತ್ಯಾನಂದ ಪಾತ್ರೋಟರವರು ಯಾವ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು?

14. ಸತ್ಯಾನಂದ ಪಾತ್ರೋಟರವರು ರಚಿಸಿದ ಪ್ರಬಂಧ ಸಂಕಲನದ ಹೆಸರೇನು?

15.ಸತ್ಯಾನಂದ ಪಾತ್ರೋಟರವರ ಕಾವ್ಯದ ಧ್ವನಿ ಸುರುಳಿಯ ಹೆಸರೇನು?

16 ರೆಂಬೆ ಕೊಂಬೆ ಚಿಗುರುವಾಗ ಕಂಡು ಬರುವ ಚೇತನ ಯಾವುದು ಎಂದು ಕವಿ ಹೇಳಿದ್ದಾರೆ?
17 ಸತ್ಯಾನಂದ ಪಾತ್ರೋಟರವರಿಗೆ ಲಭಿಸಿರುವ ಪ್ರಶಸ್ತಿ ಯಾವುದು?
18 ಪುಲ್ಲಿಂಗಕ್ಕೆ ಉದಾಹರಣೆ ಕೊಡಿ .
19 ಸ್ತ್ರೀಲಿಂಗಕ್ಕೆ ಉದಾಹರಣೆ ಕೊಡಿ.
20 ನಪುಂಸಕ ಲಿಂಗಕ್ಕೆ ಉದಾಹರಣೆ ಕೊಡಿ.

V. ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ. (ಸಾಧಾರಣ)

21 ಬೊಡ್ಡೆ ________________________________

____

____

____________________________ ಗಿಡಮರ.

22 ಮನುಷ್ಯನಲ್ಲಿ ________________________

____

____

____________________________ ಇವನ ಮನ.

VI ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (ಸಾಧಾರಣ)

23.ಸತ್ಯಾನಂದ ಪಾತ್ರೋಟರವರು ರಚಿಸಿದ ನಾಟಕಗಳು ಯಾವುವು?
24.ಸತ್ಯಾನಂದ ಪಾತ್ರೋಟರವರ ಕವನ ಸಂಕಲನಗಳು ಯಾವುದು?
25. ಮರದ ಉಪಯೋಗವೇನು?
26. ಪ್ರಕೃತಿಯಲ್ಲಿರುವ ಗಿಡ-ಮರಗಳ ಸ್ವರೂಪದ ಬಗ್ಗೆ ತಿಳಿಸಿ.
27. ಮನುಷ್ಯನ ಬದುಕು ಯಾವಾಗ ಸಾರ್ಥಕವಾಗುತ್ತದೆ?

VII 28. ಗಿಡ ಮರ ಪದ್ಯದ ಸಾರಾಂಶ ಬರೆಯಿರಿ. (ಕಠಿಣ)

VIII 29. ಈ ಕೆಳಗಿನ ಗಿಡ ಮತ್ತು ಮರವನ್ನು ಗಮನಿಸಿ ಎರಡು ಹೋಲಿಕೆ ಹಾಗು ಎರಡು ವ್ಯತ್ಯಾಸಗಳನ್ನು ಬರೆಯಿರಿ: (ಕಠಿಣ)



ಪದ್ಯಭಾಗ-2 ಸ್ವಾತಂತ್ರ್ಯದ ಹಣತೆ

ಕಲಿಕಾಫಲ-1 ಕೇಳಿದ/ಓದಿದ ಸಾಹಿತ್ಯ (ಹಾಸ್ಯ, ಸಾಹಸ, ಸಾಮಾಜಿಕ ಮುಂತಾದ ಕಥೆ, ಕವಿತೆ, ವಿಷಯ ವಸ್ತು, ಘಟನೆಯ ಚಿತ್ರಗಳು ಮತ್ತು ಪಾತ್ರಗಳು, ಶಿರೋನಾಮೆ ಮುಂತಾದವುಗಳ ಬಗ್ಗೆ ಮಾತನಾಡುತ್ತಾರೆ, ಪ್ರಶ್ನಿಸುತ್ತಾರೆ, ಸ್ವತಃ ಟಿಪ್ಪಣಿ ಬರೆಯುತ್ತಾರೆ. ತಮ್ಮ ಅಭಿಪ್ರಾಯ ಮತ್ತು ತರ್ಕ ನೀಡುತ್ತಾರೆ ಮತ್ತು ಒಂದು ನಿರ್ಣಯಕ್ಕೆ ಬರುತ್ತಾರೆ.

ಕಲಿಕಾಫಲ-8 ಆಲಿಸಿದ ಓದಿದ ಸಾಹಿತ್ಯಗಳ (ಹಾಸ್ಯ ಸಾಹಸ ಸಾಮಾಜಿಕ ಮುಂತಾದ ವಿಷಯಗಳನ್ನು ಆಧರಿಸಿದ ಕಥೆ ಕವಿತೆ ಮುಂತಾದವುಗಳು) ವಿಷಯ ವಸ್ತು ಘಟನೆಗಳು ಚಿತ್ರಗಳು ಮತ್ತು ಪಾತ್ರಗಳು ಶಿರೋನಾಮೆಗಳ ಬಗ್ಗೆ ಮಾತನಾಡುತ್ತಾರೆ ಪ್ರಶ್ನಿಸುತ್ತಾರೆ ಸ್ವತಃ ಟಿಪ್ಪಣಿ ನೀಡುತ್ತಾರೆ ತಮ್ಮ ಮಾತಿಗೆ ತರ್ಕ ನೀಡುತ್ತಾರೆ ತಾರ್ಕಿಕವಾಗಿ ಚಿಂತಿಸಿ ಚರ್ಚಿಸಿ ನಿರ್ಣಯಕ್ಕೆ ಬರುತ್ತಾರೆ.

I. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ. (ಸುಲಭ)

1. ದುಡಿಮೆ ಪದದ ಪರ್ಯಾಯ ಪದ.
2. ಮುಡಿ ಪದದ ಅರ್ಥ ________
3. ಮುಕ್ತಿ ಪದದ ಪ್ರಾಸಪದ_______
4. ಸ್ವಾತಂತ್ರ್ಯ ಇಲ್ಲದವರಿಗೆ ಕರೆಯುವ ಬಗೆ_______

II. ಒಂದು ಅಂಕದ ಪ್ರಶ್ನೆಗಳು (ಸುಲಭ)

5. ನಿಮಗೆ ತಿಳಿದಿರುವ ಇಬ್ಬರು ಸ್ವತಂತ್ರ ಹೋರಾಟಗಾರರನ್ನು ಹೆಸರಿಸಿ.
6. ಸ್ವಾತಂತ್ರ್ಯ ವನ್ನು ಗಳಿಸಿಕೊಳ್ಳಲು ನಾವು ಏನು ಮಾಡಬೇಕು?
7. ಈ ಪದ್ಯದ ಆಶಯವೇನು?
8. ನಾವು ಯಾರಿಗೆ ಗೌರವವನ್ನು ಸಲ್ಲಿಸಬೇಕು?

III. ಎರಡು ಅಂಕದ ಪ್ರಶ್ನೆಗಳು (ಸಾಧಾರಣ)

9. ಪದ್ಯದ ಮೊದಲನೇ ಮೂರು ಸಾಲುಗಳ ಅರ್ಥವೇನು?
10. ನಮಗೆ ಸಿಕ್ಕಿರುವ ಸ್ವಾತಂತ್ರ್ಯವನ್ನು ನಾವು ಹೇಗೆ ಕಾಪಾಡಿಕೊಳ್ಳಬೇಕು?

IV. ಮೂರು ಅಂಕದ ಪ್ರಶ್ನೆಗಳು (ಕಠಿಣ)

11. ಕವಿ ನಿಸಾರ್ ಅಹಮದ್ ರವರ ಕಿರುಪರಿಚಯವನ್ನುಬರೆಯಿರಿ.
12. ಸ್ವಾತಂತ್ರ್ಯದ ಹಣತೆ ಪದ್ಯದ ತಾತ್ಪರ್ಯವನ್ನು ನಿನ್ನ ಮಾತಿನಲ್ಲಿ ಬರೆ.

V. ನಾಲ್ಕು ಅಂಕದ ಪ್ರಶ್ನೆಗಳು (ಕಠಿಣ)

13. ನನ್ನ ದೇಶ ನನ್ನ ಹೆಮ್ಮೆ ವಿಷಯದ ಕುರಿತು ಮುಕ್ತವಾಗಿ ಮಾತನಾಡು.

ಪದ್ಯಭಾಗ -3 ವಚನಗಳು

ಕಲಿಕಾಫಲ-8 ಸ್ತರಕ್ಕನುಸಾರವಾಗಿ ಬೇರೆ ಬೇರೆ ವಿಷಯಗಳು ,ವೃತ್ತಿಗಳು, ಕಲೆಗಳು ಮುಂತಾದವುಗಳಲ್ಲಿ ಉದಾ: ಗಣಿತ ,ವಿಜ್ಞಾನ, ಸಾಮಾಜಿಕ ಅಧ್ಯಯನ ,ನೃತ್ಯ ಕಲೆ ಚಿಕಿತ್ಸೆ ಮುಂತಾದವು) ಬಳಸಿರುವ ಶಬ್ದಗಳ ಬಗ್ಗೆ ತಿಳಿಯುತ್ತಾರೆ. ಸಂದರ್ಭ ಮತ್ತು ಪರಿಸ್ಥಿತಿಗನುಗುಣವಾಗಿ ತಮ್ಮ ಬರವಣಿಗೆಯಲ್ಲಿ ಬಳಸುತ್ತಾರೆ.

I. ಸರಿಯಾದ ಉತ್ತರವನ್ನು ಆಯ್ಕೆಮಾಡಿ ಬಿಟ್ಟ ಸ್ಥಳವನ್ನು ಪೂರ್ಣಗೊಳಿಸು. (ಸುಲಭ)

1. ನಮ್ಮ ಕೂಡಲ ಸಂಗಮ ದೇವನೊಲಿಸುವ ಪರಿ ಈ ಅಂಕಿತನಾಮ ಈ ವಚನಕಾರರದ್ದು______________
   1. ಅಂಬಿಗರಚೌಡಯ 2. ಸರ್ವಜ್ಞ 3. ಬಸವಣ್ಣ 4. ಜೇಡರದಾಸಿಮಯ್ಯ

2.ಬಡತನಕ್ಕೆ ಇದರ ಚಿಂತೆ___________
   1. ಉಂಬುವ 2. ಉಡುವ 3. ಇಡುವ 4. ಬದುಕಿನ

3. ಕನ್ನಡದ ಮೊದಲ ಕವಿಯತ್ರಿ ಎನಿಸಿಕೊಂಡವರು_______________
   1.ಆಯ್ದಕ್ಕಿಲಕ್ಕಮ್ಮ 2. ಅಕ್ಕಮಹಾದೇವಿ 3. ಅಕ್ಕಮ್ಮ 4. ರೆಮವ್ವ

4. ನಡೆಯಿಲ್ಲದ ನುಡಿ ಇದಕ್ಕೆ ಹಾನಿ_____________
   1. ಅನ್ನ 2. ಶೃಂಗಾರ 3. ಭಕ್ತಿ 4. ಅರಿವೆಗೆ

5. ಗರ್ವ ಪದದ ಅರ್ಥ ಇದಾಗಿದೆ. ____________
   1. ಸೊಕ್ಕು 2. ಸುಳ್ಳು 3. ರೀತಿ 4. ಹಾನಿ

6. ಆಡು + ಇಸು ಇದನ್ನು ಕೂಡಿಸಿ ಬರೆಯುವಾಗ ________
   1. ಹಾಡಿಸು 2. ಆಡಿಸು 3. ಆಡಿಸುವ 4. ಆಡುಸು

7. ಬಹಿರಂಗ ಶುದ್ದಿಗಿಂತ ಈ ಶುದ್ದಿ ಬಹಳ ಮುಖ್ಯ_______________
   1. ಮನಸಿನ 2. ಹೊರಗಿನ 3. ಆತ್ಮದ 4. ಅಂತರಂಗ

8. ಎರಡು ಅಕ್ಷರಗಳು ಯಾವ ಕಾಲ ವಿಳಂಬ ಇಲ್ಲದೆ ಪರಸ್ಪರ ಸೇರುವುದನ್ನು ಹೀಗೆ ಹೇಳುವರು______________
   1. ಬಂಧಿ 2. ಸಂಧಿ 3. ಸಮಾಸ 4. ವಚನ

9. ಉಂಬುವ ಶಬ್ದದ ಗ್ರಾಂಥಿಕ ರೂಪ ಇದಾಗಿದೆ _______________
   1. ಊದುವ 2. ಉಳುವ 3. ಉಣ್ಣುವ 4. ಉಡುವುದು

10. ಆಯ್ದಕ್ಕಿ ಲಕ್ಕಮನವರ ಅಂಕಿತನಾಮ ಇದಾಗಿದೆ. ______________
   1. ಗುಹೇಶ್ವರ 2. ಶರಣೆಶ್ವರ 3. ಚನ್ನಾಮಲ್ಲಿಕಾರ್ಜುನ 4. ಅಮರೇಶ್ವರ

11. ದೇವರಿಗೆ ಈ ಪದವನ್ನು ಬಿಡಿಸಿ ಬರೆದಾಗ ಹೀಗಾಗುತ್ತದೆ. _______________
   1. ದೇವರು + ಇಗೆ 2. ದೇವರ +ಇಗೆ 3. ದೇವರಿನ +ಇಗೆ 4. ದೇವರನ್ನು + ಇಗೆ

12. ಬದುಕಾದರೆ ಕೇಡಿನ ಚಿಂತೆ, ಕೇಡಾದರೆ ಇದರ ಚಿಂತೆ.
   1. ಉಡುವ 2. ಹೆಂಡಿರ 3. ಮರಣ 4.ಬದುಕಿನ

II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಬರೆ. (ಸಾಧಾರಣ)

13. ಬಸವಣ್ಣನವರ ಜನ್ಮ ಸ್ಥಳ ಯಾವುದು?
14. ಸಮಾಧಾನಿಯಾಗಿರುವುದು ಹೇಗೆ?
15. ಸೇವೆಯನ್ನು ಮಹಾದಂಡನಾಯಕರಾಗಿ ಸಲ್ಲಿಸಿದ್ದಾರೆ. ಈ ವಾಕ್ಯವನ್ನುಸರಿಯಾದಕ್ರಮದಲ್ಲಿಬರೆ.
16. ಹಳಿ ಪದದ ಅರ್ಥವೇನು?

III. ಈ ಕೆಳಗಿನವ ವಚನ ಭಾಗವನ್ನು ಪೂರ್ಣಗೊಳಿಸು. (ಕಠಿಣ)

17. ಬಡತನಕ್ಕೆ ________ ________

____________ _________

____

_______________________ಮರಣದ ಚಿಂತೆ

ಇಂತೀ ________________

____

______________ ನಿಜಶರಣ.

IV. ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯದಲ್ಲಿ ಉತ್ತರ ಬರೆ. (ಸಾಧಾರಣ)

18. ಸಂಧಿ ಎಂದರೇನು? ಒಂದು ಉದಾಹರಣೆ ಕೊಡಿ.
19. "ದೃಢವಿಲ್ಲದ ಭಕ್ತಿ ಒಡೆದ ಕುಂಭದಲಿ ಸುಜಲವ ತುಂಬಿದಂತೆ "
    ಈ ವಾಕ್ಯದ ಭಾವಾರ್ಥ ಬರೆ.
20. ಮನುಷ್ಯನಿಗಿರುವವಿವಿಧಪ್ರಕಾರದಚಿಂತೆಗಳಾವುವು?

V. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯದಲ್ಲಿ ಉತ್ತರಬರೆ. (ಕಠಿಣ)

21. ಬಸವಣ್ಣನವರ ಪ್ರಕಾರ 'ಅಂತರಂಗಶುದ್ಧಿ ' ಮತ್ತು ' ಬಹಿರಂಗಶುದ್ಧಿ' ಯನ್ನು ಹೊಂದುವುದು ಹೇಗೆ?
22. 'ಹೊಗಳಿಕೆಗೆ ಹಿಗ್ಗಬಾರದು ತೆಗಳಿಕೆಗೆ ಕುಗ್ಗಬಾರದು'ಈ ಗಾದೆ ಮಾತನ್ನುವಿಸ್ತರಿಸಿಬರೆ.

VI. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಬರೆ. (ಕಠಿಣ)

23. ನೀನು ಓದಿ ಸಂಗ್ರಹಿಸಿರುವ ಯಾವುದಾದರು ಒಂದು ವಚನವನ್ನುಬರೆ.
24. ಕೆಳಗೆ ಕೊಟ್ಟಿರುವ ವಚನಕಾರರಲ್ಲಿಒಬ್ಬರ ಬಗ್ಗೆ ಜೀವನ ಚರಿತ್ರೆ ಬರೆ.

1. 
2. 
3. 
4. 

ಪದ್ಯಭಾಗ 4 :- ಕನ್ನಡಕನ್ನಡಬರ್‍ರಿನಮ್ಮಸಂಗಡ

ಕಲಿಕಾಫಲ7:- ತಮ್ಮಪಠ್ಯಪುಸ್ತಕದಹೊರತಾಗಿಬೇರೆವಿಷಯಸಾಮಗ್ರಿಗಳನ್ನು (ಸಮಾಚಾರಪತ್ರಿಕೆ,ಬಾಲಪತ್ರಿಕೆಇತ್ಯಾದಿ)ಓದಿತಿಳಿಯುತ್ತಾರೆಮತ್ತುಅವುಗಳಬಗ್ಗೆಮಾತನಾಡುತ್ತಾರೆ ಮತ್ತುಚರ್ಚಿಸುತ್ತಾರೆ.

I. ಸೂಕ್ತ ಉತ್ತರ ಆರಿಸಿ ಬರೆ. (ಸುಲಭ)

1. ಆಸರ ಪದದ ಅರ್ಥ________________
   ಅ) ಆಶ್ರಯ ಬ) ಸೂರ್ಯ ಕ) ಬಾಯಾರಿಕೆ ಡ) ಆಹಾರ
2. ಚಂದ್ರಶೇಖರ ಪಾಟೀಲರ ಕಾವ್ಯನಾಮ ________________
3. ಕನ್ನಡವೇ ಸತ್ಯ; ಕನ್ನಡವೇ _____________
   ಅ) ಸ್ವರ್ಗ ಬ) ನಿತ್ಯ ಕ) ಮಿತ್ಯ ಡ) ಕಲ್ಪವೃಕ್ಷ
4. ನಮ್ಮೆಲ್ಲರ ಪದವನ್ನು ಬಿಡಿಸಿ ಬರೆದಾಗ_____________
   ಅ) ನಮ್ + ಎಲ್ಲರ ಬ) ನಮ್ಮೆ + ಲ್ಲರ ಕ) ನಮ್ಮಯ + ಎಲ್ಲರ ಡ) ನಮ್ಮ + ಎಲ್ಲರ

II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸು. (ಸುಲಭ)

5. ನಮ್ಮ ನಾಡು ಯಾವುದು?
6. ನಮ್ಮ ನುಡಿ ಯಾವುದು?
7. ಕನ್ನಡಎಂತಹಭಾಷೆಯಾಗಬೇಕು?
8. ಕವಿಎಂತಹನಾಡನ್ನುಕಟ್ಟಲುಬಯಸುತ್ತಾರೆ?
9.ಅರಿವುಹೇಗೆಬರುತ್ತದೆ?
10. ಪ್ರೀತಿಯ ಬೆಳದಿಂಗಳುಎಲ್ಲಿ ತುಂಬಿತುಳುಕಬೇಕು?

III. ಈ ಕೆಳಗಿನ ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸು. (ಸಾಧಾರಣ)

11. 'ನೇಸರ' ಪದದ ಸಮನಾರ್ಥಕ ಪದಗಳನ್ನು ಬರೆ.
12. ಈ ಪದ್ಯದಲ್ಲಿ ಬರುವ ಪ್ರಾಸಪದಗಳನ್ನು ಬರೆ.
13. ಕನ್ನಡ ನಾಡು ನುಡಿಯನ್ನು ಕುರಿತು ನಾಲ್ಕು ಸಾಲುಗಳ ಕವನ ರಚಿಸು.
14. ಆಶಯ + ಆಗಿದೆ ಇದರಲ್ಲಿ ಪೂರ್ವಪದ ಮತ್ತು ಉತ್ತರಪದ ಗುರುತಿಸಿ ಬರೆ.

IV. ಈ ಕೆಳಗಿನ ಪ್ರಶ್ನೆಗಳಿಗೆ 4-5 ವಾಕ್ಯಗಳಲ್ಲಿ ಉತ್ತರಿಸು. (ಕಠಿಣ)

15. ಕವಿಯ ಆಶಯದಂತೆ ಕನ್ನಡ ನಾಡನ್ನು ಕಟ್ಟುವ ಬಗೆಯನ್ನು ನಿನ್ನ ಮಾತಿನಲ್ಲಿ ವ್ಯಕ್ತಪಡಿಸು.
16. ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡದ ಹೆಮ್ಮೆಯ ಕವಿಗಳ ಹೆಸರನ್ನು ಬರೆ.
17. ನಮ್ಮ ಕನ್ನಡ ನಾಡು ನುಡಿಯ ಗರಿಮೆಯನ್ನು ನಿನ್ನ ಮಾತುಗಳಲ್ಲಿ ವರ್ಣಿಸು.
18. ಕೆಳಗೆ ನೀಡಿರುವ ಉದಾಹರಣೆಯಂತೆ ಕನ್ನಡದಯಾವುದಾದರೂ 4 ಮೊದಲುಗಳನ್ನು ಬರೆ.

ಉದಾ: ಕನ್ನಡದ ಪ್ರಥಮ ಶಾಸನ ಹಲ್ಮಿಡಿ ಶಾಸನ.

ಪದ್ಯಭಾಗ 5: ಕರಡಿಕುಣಿತ

ಕಲಿಕಾ ಫಲ-12 ವಿವಿಧ ರೀತಿಯ ವಿಷಯ ಸಾಮಗ್ರಿಗಳಲ್ಲಿ (ವೃತ್ತ ಪತ್ರಿಕೆ, ಬಾಲಪತ್ರಿಕೆ ,ಮಕ್ಕಳ ಸಾಹಿತ್ಯ, ಪೋಸ್ಟರ್ ಇತ್ಯಾದಿ) ಕಂಡುಬರುವ ಸಂವೇದನಾಶೀಲ ಅಂಶಗಳನ್ನು ಗುರುತಿಸಿ ತನ್ನ ಮಾತಿನಲ್ಲಿ ಬರಹದಲ್ಲಿ ವ್ಯಕ್ತಪಡಿಸುತ್ತಾರೆ.

I. ಸೂಕ್ತ ಉತ್ತರ ಆರಿಸಿ ಬರೆ. (ಸುಲಭ)

1. ಸಂಧಿಆಗುವಾಗಒಂದುಅಕ್ಷರದಸ್ಥಾನದಲ್ಲಿಬೇರೊಂದುಅಕ್ಷರಬಂದರೆಅದನ್ನು ______ ಎನ್ನುವರು.
   1ಆಗಮ ಸಂಧಿ   2 ಆದೇಶಸಂಧಿ
   3ಲೋಪ ಸಂಧಿ   4ಕನ್ನಡ ಸಂಧಿ
2. ದ.ರಾ. ಬೇಂದ್ರೆಅವರಕಾವ್ಯನಾಮ_________
   1 ಅಂಬಿಕಾತನಯದತ್ತ   2 ಚೆನ್ನಮಲ್ಲಿಕಾರ್ಜುನ
   3 ಪುರಂದರ ವಿಠಲ   4 ಹಯವದನ
3. ಜಾಂಬುನದಿಯದಂಡೆಯಮೇಲೆಕರಡಿಯುತಿಂದಹಣ್ಣು ________________________
   1 ನೇರಳೆಹಣ್ಣು   2 ಮಾವಿನಹಣ್ಣು
   3 ಹಲಸಿನಹಣ್ಣು   4 ಸೀಬೆಹಣ್ಣು
4. ಮೇಲೆ + ಇಟ್ಟು =ಮೇಲಿಟ್ಟು ಈ ಸಂದಿಕಾರ್ಯದಲ್ಲಿಲೋಪವಾಗಿರುವಸ್ವರ_____________
   1. ಎ   2.ಇ
   3. ಒ   4.ಈ

II. ಆವರಣದಲ್ಲಿ ಸೂಚಿಸಿದಂತೆ ಬರೆ. (ಸುಲಭ)

5. "ಕೋಡಗ" (ಪದದ ಅರ್ಥ ಬರೆ)
6. 'ಧಣಿಯರ ಮನಿ ಮುಂದ ಕಾವಲು ಮಾಡಣ ಧಣಿ ದಾನ ಕೊಡುವನು ಅಂದಾನ' (ಅಕ್ಷರ ದೋಷ ಸರಿ ಪಡಿಸಿ ಬರೆ.)
7. ಲೋಪಸಂಧಿ, ಆಗಮಸಂಧಿ, ಆದೇಶಸಂಧಿ, ಸವರ್ಣದೀರ್ಘಸಂಧಿ (ಗುಂಪಿಗೆ ಸೇರದ ಪದ ಬರೆ.)
8. "ಊರೆಲ್ಲ" (ಪದ ಬಿಡಿಸಿ ಸಂಧಿಯ ಹೆಸರು ತಿಳಿಸಿ.)
9. ಕಣ್ಣು + ಕಾವಲು = _____ (ಪದವನ್ನುಕೂಡಿಸಿ ಬರೆಯಿರಿ.)
10. "ಪರಮಾರ್ಥ" (ಪದವನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ)
11. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.
    ತ್ರೇತಾಯುಗ: ರಾಮ :: ದ್ವಾಪರಯುಗ:__________

III. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. (ಸುಲಭ)

12. ಕರಡಿಯು ಯಾರು ಯಾರನ್ನ ಕಂಡಿದೆ?
13. ನೇರಲ ಹಣ್ಣಿನ ಮರ ಎಲ್ಲಿದೆ?
14. ಮಕ್ಕಳ ಕೊರಳಿಗೆ ಏನನ್ನು ಕಟ್ಟುತ್ತೇನೆ ಎಂದು ಕೂಗುತ್ತಿದ್ದಾನೆ?
15. ದಾನ ನೀಡುವವರಿಗೆ ಕರಡಿಯು ಏನೆಂದು ಹಾರೈಸುತ್ತದೆ?
16. ದ ರಾ ಬೇಂದ್ರೆ ಯಾವ ಕವನ ಸಂಕಲನಕ್ಕೆ ಭಾರತೀಯ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ?
17. ದ ರಾ ಬೇಂದ್ರೆಯವರ ಪ್ರಕಾರ ಈ ಪದ್ಯದ ತತ್ತ್ವವೇನು?
18. "ಪ್ರಾಣಿಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ". ಈ ಸೂಕ್ತಿಯನ್ನುಎಲ್ಲಿ ಗಮನಿಸಿರುವೆ?

IV. 2-3 ವಾಕ್ಯಗಳಲ್ಲಿಉತ್ತರಿಸು. (ಸಾಧಾರಣ)

19. ಕರಡಿಗೆಇಷ್ಟವಾದಆಹಾರಪದಾರ್ಥಗಳನ್ನುಪಟ್ಟಿಮಾಡು.

20. “ಕರಡಿ ಕುಣಿತಕ್ಕಿಂತ ನರರ ಬುದ್ಧಿಯ ಕುಣಿತ ಮಿಗಿಲಹುದು”. ಈ ಸಾಲಿನ ಬಗ್ಗೆ ನಿನ್ನ ಅನಿಸಿಕೆ ಬರೆ.

21. ಕನ್ನಡ ಸಂಧಿ ಎಂದರೇನು? ಕನ್ನಡ ಸಂಧಿಗಳನ್ನು ಹೆಸರಿಸಿ?

22. ದಾ.ರ. ಬೇಂದ್ರೆಯವರಿಗೆ ದೊರೆತಿರುವ ಪ್ರಶಸ್ತಿಗಳನ್ನು ಪಟ್ಟಿ ಮಾಡು.

V. 4-5 ವಾಕ್ಯಗಳಲ್ಲಿ ಉತ್ತರಿಸಿ. (ಕಠಿಣ)

23. ಬಂದಾರೆ ಬರೆವ್ವ, ಕಂದನ ತರ್ರೆವ್ವ,
ಅಂಜೀಕಿ ಗಿಂಜಿಕಿ ಕೊಂದಾನ.
ರೋಮ ರೋಮಗಳಲ್ಲಿ ಭೀಮ ರಕ್ಷಿಯ ಬಲ
ಕೊರಳಾಗ ಕಟ್ಟಿರಿ ಒಂದಾನ. ಈ ಪದ್ಯ ಭಾಗದ ಸಾರಂಶ ಬರೆಯಿರಿ

24. ಕೆಳಗಿನ ಚಿತ್ರದ ಬಗ್ಗೆ ನಿನ್ನ ಅನಿಸಿಕೆ ಬರೆ.



ಪದ್ಯಭಾಗ 6: ಮಗುವಿನ ಮೊರೆ

ಕಲಿಕಾ ಫಲ-2 ತಮ್ಮ ಅಸುಪಾಸಿನಲ್ಲಿ ಸಂಭವಿಸುವ ವಿವಿಧ ಘಟನೆಗಳ ಅಂಶಗಳ ಬಗ್ಗೆ ಗಮನಹರಿಸುತ್ತಾ ಅವುಗಳ ಬಗ್ಗೆ ಮೌಖಿಕವಾಗಿ ಪ್ರತಿಕ್ರಿಯೆ ನೀಡುತ್ತಾರೆ/ಪ್ರತಿಸ್ಪಂದಿಸುತ್ತಾರೆ.

I. 1. ಹೊಂದಿಸಿ ಬರೆ(ಸುಲಭ)

ಎ. ಉರಿಯಲಿಲ್ಲ ಆರಲಿಲ್ಲ	ಬಾಳ ನಾವೆ
ಬಿ. ಬತ್ತಲಿಲ್ಲ ತುಂಬಲಿಲ್ಲ	ಬಾಳ ಹೂವು
ಸಿ. ಅರಳಲಿಲ್ಲ ಉರುಳಲಿಲ್ಲ	ಬಾಳಹೊರತೆ
ಡಿ. ಮುಳುಗಲಿಲ್ಲ ತೇಲಲಿಲ್ಲ	ಬಾಳ ಹಣತೆ

II. ಮಾದರಿಯಂತೆ ಬರೆ. (ಸುಲಭ)

ತಿನ್ನು -ತಿನ್ನುತ್ತಾನೆ
2. ಬರೆ -
3. ಓಡು-
4. ಆಡು-

III. ಅರ್ಥ ತಿಳಿಸು (ಸುಲಭ)

5.ಒರತೆ
6.ಹಣತೆ

IV. ಕೆಳಗಿನ ವಾಕ್ಯದಲ್ಲಿ ಕ್ರಿಯಾಪದವನ್ನು ಗುರುತಿಸಿರಿ (ಸುಲಭ)

7.ಎತ್ತುಗಳು ಗದ್ದೆಯಲ್ಲಿ ನೇಗಿಲನ್ನು ಎಳೆಯುವುವು
8.ರೈತನು ಗದ್ದೆಯಲ್ಲಿ ದುಡಿಯುವನು

V. ಪದ್ಯ ಪೂರ್ಣಗೊಳಿಸು (ಸಾಧಾರಣ)

9. ಉರಿಯಲಿಲ್ಲ - - - - - -
- - - - - - - -
- - - - - - - -
- - - - - - - - - ಹೇ ವಿಭೋ.

VI. ಒಂದು ವಾಕ್ಯದಲ್ಲಿ ಉತ್ತರಿಸು. (ಸಾಧಾರಣ)

10.ಯಾವುದು ಉರಿಯಲಿಲ್ಲ ಆರಲಿಲ್ಲ?
11.ಯಾವುದು ಬತ್ತಲಿಲ್ಲ ತುಂಬಲಿಲ್ಲ?
12.ಯಾವುದು ಮುಳುಗಲಿಲ್ಲ ತೇಲಲಿಲ್ಲ?
13.ಯಾವುದು ಅರಳಲಿಲ್ಲ ಉರಳಲ್ಲಿಲ್ಲ?
14.ನಾವು ಏನೆಂದು ಹಾಡಿಕೊಳ್ಳಬೇಕು?
15.ಮಗುವಿನ ಮೊರೆ ಈ ಪದ್ಯವನ್ನು ಬರೆದ ಕವಿಯ ಹೆಸರು ಏನು?

VII. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸು. (ಸಾದಾರಣ)

16. ನಿನಗೆ ತಿಳಿದಿರುವ ಗಾದೆ ಮಾತುಗಳನ್ನು ಪಟ್ಟಿಮಾಡು.

17. ಆರಕ್ಕೆ ಏರಲಿಲ್ಲ ಮೂರಕ್ಕೆ ಇಳಿಯಲಿಲ್ಲ ಈ ಗಾದೆ ಮಾತಿನ ಒಳ ಅರ್ಥವನ್ನು ಸಂಕ್ಷಿಪ್ತವಾಗಿ ವಿವರಿಸಿ.
18. ನೀನು ಬೆಳೆದು ದೊಡ್ಡವನಾದ ನಂತರ ಏನಾಗಬೇಕೆಂದು ಬಯಸುವೆ? ಏಕೆ?
19. ನಿನ್ನ ಕುಟುಂಬದಲ್ಲಿ ಅಥವಾ ನೆರೆಯವರಲ್ಲಿ ನಿನಗೆ ಇಷ್ಟವಾದ ವ್ಯಕ್ತಿ ಯಾರು? ನಿನಗೆ ಅವರು ಏಕೆ ಇಷ್ಟ ಆಗುತ್ತಾರೆ?
20.ಜಗತ್ ಪ್ರಸಿದ್ಧವಾದ ಯಾವುದಾದರೂ ಎರಡು ವ್ಯಕ್ತಿಗಳ ಹೆಸರು ಬರೆ.
21.ಯಾವುದಾದರೂ ಶ್ರೇಷ್ಠ ವ್ಯಕ್ತಿಗಳ ಜೀವನ ಚರಿತ್ರೆಯನ್ನು ಓದಿ ನಿನಗೆ ಇಷ್ಟವಾದ ಅಂಶಗಳನ್ನು ಪಟ್ಟಿ ಮಾಡು.

VIII. **22. ಯಾವುದು ಉರಿಯಲಿಲ್ಲ ಆರಲಿಲ್ಲ, ಬತ್ತಲಿಲ್ಲ ತುಂಬಲಿಲ್ಲ, ಮುಳುಗಲಿಲ್ಲ ತೇಲಲಿಲ್ಲ, ಅರಳಲಿಲ್ಲ ಉರಳಲ್ಲಿಲ್ಲ, ಇದರ ಒಳ ಅರ್ಥವೇನು? (ಕಠಿಣ)**

23. ಮಗುವಿನ ಮೊರೆ ಈ ಪದ್ಯದ ಸಾರಾಂಶವನ್ನು ಸಂಕ್ಷಿಪ್ತವಾಗಿ ತಿಳಿಸಿ. (ಕಠಿಣ)

ಪದ್ಯಭಾಗ 7: ಮೂಡಲಮನೆ

ಕಲಿಕಾ ಫಲ-2 ಅಪರಿಚಿತ ಶಬ್ದಗಳ ಅರ್ಥವನ್ನು ಶಬ್ದಕೋಶಗಳಲ್ಲಿ ಹುಡುಕುತ್ತಾರೆ.

I. ಈ ಕೆಳಗೆ ನೀಡಿರುವ ಆಯ್ಕೆಗಳಲ್ಲಿ ಸೂಕ್ತ ಆಯ್ಕೆಯನ್ನು ಆಯ್ದು ಬರೆ. (ಸುಲಭ)

1. ಮೂಡಲ ಮನೆ ಕವನವನ್ನು ---------ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.
ಅ) ಚಕೋರಿ. ಆ) ಸಂಗ್ಯಾ ಬಾಳ್ಯಾ ಇ)ಎಲ್ಲಿದೆ ಶಿವಪುರ ಈ) ಸಿಂಗಾರವ್ವ

II. ಹೇಳಿಕೆಗಳನ್ನು ಗಮನಿಸಿ ಒಂದೇ ವಾಕ್ಯದಲ್ಲಿ ಉತ್ತರ ಬರೆ. (ಸುಲಭ)

2 ಚರ್ಮದಿಂದ ತಯಾರಿಸಿದ ಗೊಂಬೆಗಳನ್ನು ಬಳಸಿ ಆಡುವ ಆಟ.
3. ಒಂದು ಪ್ರದೇಶದಿಂದ ಮತ್ತೊಂದು ಕಡೆಗೆ ಹೋಗಿ ನೆಲೆಸುವುದು.

III. ಈ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆ. (ಸುಲಭ)

4. 'ಮ್ಯಾಲ' ಪದದ ಗ್ರಾಂಥಿಕ ರೂಪ
5. ನೆರಳು ಪದದ ವಿರುದ್ಧಾರ್ಥಕ ಪದ
6. 'ತಪ' ಪದದ ಸಮನಾರ್ಥಕ ಪದ
7 ಗೂಡಿನಾಗೆ <u>ಮಲಗ್ಯಾವೆ</u> ಮರಿಹಕ್ಕಿ. ಈ ವಾಕ್ಯದಲ್ಲಿ ಅಡಿಗೆರೆ ಎಳೆದಿರುವ ಪದವು ಯಾವ ಕಾಲವನ್ನು ಸೂಚಿಸುತ್ತದೆ.
8.ಈ ಪದ್ಯದಲ್ಲಿನ ಪ್ರಾಸ ಪದಗಳನ್ನು ಪಟ್ಟಿ ಮಾಡು.

IV. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆ. (ಸುಲಭ)

9. ಮರಿ ಹಕ್ಕಿ ಎಲ್ಲಿ ಮಲಗಿದೆ?
10. ಹಸಿರು ಎಲ್ಲಿ ಚಿಗುರುತ್ತದೆ?
11. ಕರುಳ ಬಳ್ಳಿಯ ಕಥೆಯನ್ನು ಯಾವುದು ಹೇಳುತ್ತದೆ?

V. ಈ ಪ್ರಶ್ನೆಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆ.

12. ಈ ಕವನದಲ್ಲಿ ಕವಿಯು ಕರಗ ಕುಣಿಯುವುದನ್ನು ಯಾವುದಕ್ಕೆ ಹೋಲಿಸಿದ್ದಾರೆ. **(ಸಾಧಾರಣ)**

ಪದ್ಯಭಾಗ 8: ಭುವನೇಶ್ವರಿ

ಕಲಿಕಾಫಲ- 03 ಸ್ವಯಿಚ್ಛೆಯಿಂದ ಅಥವಾ ಶಿಕ್ಷಕರಿಂದ ನಿರ್ಧರಿಸಿದ ಚಟುವಟಿಕೆಗಳಲ್ಲಿ ಬರವಣಿಗೆ ಪ್ರಕ್ರಿಯೆಗಳ ಬಗ್ಗೆ ತಿಳಿದು ತಮ್ಮ ಬರವಣಿಗೆಯನ್ನು ಸಂಶೋಧಿಸುತ್ತಾರೆ ಮತ್ತು ಬರವಣಿಗೆಯ ಉದ್ದೇಶ ಮತ್ತು ಓದುಗನಿಗೆ ಅನುಸಾರವಾಗಿ ತಮ್ಮ ಬರವಣಿಗೆಯಲ್ಲಿ ಪರಿವರ್ತನೆ ಮಾಡುತ್ತಾರೆ.

I. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ. (ಸುಲಭ)

1) ________ಕಿಲಕಿಲ ನಕ್ಕಿತು ಈ ಕೆಳಗಿನವುಗಳಲ್ಲಿ ಸರಿಯಾದ ಪದ ಬಳಸಿ ವಾಕ್ಯವನ್ನು ಪೂರ್ಣಗೊಳಿಸಿ.
a) ಮಕ್ಕಳು b) ಅಕ್ಕ
c) ಮಗು d) ತಮ್ಮಂದಿರು

2) "ಕನ್ನಡ ಬೆಳೆಸಿ ಕನ್ನಡ ಉಳಿಸಿ "ಈ ವಾಕ್ಯಕ್ಕೆ ಸಂಬಂಧಿಸದೆಇರುವ ಘೋಷಣಾ ವಾಕ್ಯವನ್ನು ಗುರುತಿಸಿ ಬರೆಯಿರಿ.
a) "ಕನ್ನಡ ಗೆಲ್ಲಲಿ ಕನ್ನಡ ಬಾಳಲಿ" b) "ಕನ್ನಡ ಕಲಿಯಿರಿ ಕನ್ನಡ ಪೋಷಿಸಿ"
c) "ಕಾಡಿದ್ದರೆ ನಾಡು ನಾಡಿದ್ದರೆ ನಾವು" d") ಕನ್ನಡವೇ ಸತ್ಯ ಕನ್ನಡವೇ ನಿತ್ಯ"

3) ಕೆಳಗಿನ ವಾಕ್ಯಗಳಲ್ಲಿ ಸೂಕ್ತ ಅಂತರವಿರುವ ವಾಕ್ಯವನ್ನು ಗುರುತಿಸಿ ಬರೆಯಿರಿ.
a) ನಮ್ಮ ನಾಡ ಹಬ್ಬ ದಸರಾ b) ಕರ್ನಾಟಕ ಶಿಲ್ಪಕಲೆಗಳ ಬೀಡು
c) ಸ್ವರಗಳಲ್ಲಿ ಎರಡು ವಿಧ d) ಬಸವಣ್ಣನ ಜನ್ಮಸ್ಥಳ ಬಾಗೇವಾಡಿ

4) ಕದಂಬರ ರಾಜಧಾನಿ ಬನವಾಸಿ ಈ ವಾಕ್ಯದಲ್ಲಿ ಅನುಸ್ವಾರವಿರುವ ಪದ ಬರೆಯಿರಿ
a) ಬನವಾಸಿ b) ಕದಂಬ
c) ವಿಜಯನಗರ d) ಕಿತ್ತೂರು

5) ತಾಯಿ ತನ್ನೂರು ಸ್ವರ್ಗಕ್ಕಿಂತಲೂ ಮಿಗಿಲು ಈ ವಾಕ್ಯದಲ್ಲಿರುವ ವಿಜಾತಿ ಒತ್ತಕ್ಷರ ಗುರುತಿಸಿ ಬರೆಯಿರಿ.
a) ನ್ನ b) ಮ್ಮ
C)ಅತ್ತೆ d) ಸ್ವ

6) ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಡಿದಳು ಈ ವಾಕ್ಯಕ್ಕೆ ಕೆಳಗಿನ ಪದಗಳಲ್ಲಿ ಸೂಕ್ತವಾದ ಪದ ಆರಿಸಿ ಬರೆಯಿರಿ.
a) ಹೋರಾಡಿದನು b) ಹೋರಾಡಿದಳು
c) ಹೋರಾಡುವರು d) ಹೋರಾಡಿತು

II. ಆವರಣದಲ್ಲಿ ಸೂಚಿಸಿದಂತೆ ಬರೆಯಿರಿ (ಸುಲಭ)

7.ಕದಂಬ, ಮಯೂರ, ವೀರಪುರುಷ ಅವಳು ಬನವಾಸಿಯಲ್ಲಿ ಆಳಿದಳು. ಈ ವಾಕ್ಯವನ್ನು ಸರಿಪಡಿಸಿ ಬರೆಯಿರಿ.
8. 'ಬೆಳೆ' ಪದದ ನಾನಾರ್ಥಗಳನ್ನು ಬರೆಯಿರಿ
9. ನೆಲದಲ್ಲಿ / ಕನ್ನಡ/ "ಕನ್ನಡನ್ನಡಗೆಲ್ಲಲಿ/ ಕನ್ನಡಬಾಳಲಿ/"ನಮ್ಮೀ. ಅರ್ಥಪೂರ್ಣವಾಕ್ಯರಚಿಸಿ.
10. ಆಳಿದನು _ಈ ಪದವನ್ನು ಭವಿಷ್ಯತ್ಕಾಲಕ್ಕೆ ಬದಲಾಯಿಸಿ ಬರೆಯಿರಿ.
11. ಪುಸ್ತಕ _ಈ ಪದದ ಬಹುವಚನ ರೂಪ ಬರೆಯಿರಿ.
12. ಹೋರಾಡುತ್ತಾನೆ_ ಈ ಪದವನ್ನು ಭೂತಕಾಲಕ್ಕೆ ಬದಲಾಯಿಸಿ ಬರೆಯಿರಿ.

13. ಮನೆ +ಅನ್ನು=ಈ ವಾಕ್ಯವನ್ನು ಕೂಡಿಸಿ ಬರೆಯಿರಿ.

III. ಬಿಟ್ಟ ಸ್ಥಳಗಳನ್ನು ಆವರಣದಲ್ಲಿರುವ ಸೂಕ್ತ ಪದದಿಂದ ಭರ್ತಿ ಮಾಡಿರಿ. (ಸುಲಭ)

14.ಕನ್ನಡನಾಡಿನ ___ ಗಂಗಮನೆತನ.(ಹೆಮ್ಮೆ/ ಎಮ್ಮೆ)
15.1947ರಲ್ಲಿ ಸ್ವಾತಂತ್ರ್ಯ ಭಾರತದ ಬಾವುಟ ___ (ಹಾರಿತು/ಆರಿತು)
161973 ರಲ್ಲಿ ___ತುಂಬಲು ಮೈಸೂರು ಕರ್ನಾಟಕವಾಯಿತು. (ಭಾವನೆ/ಬಾವನೆ)
17.ಚಾಲುಕ್ಯರು ಬಾದಾಮಿಯಲ್ಲಿ ___ ನಡೆಸಿದರು. (ಆಳ್ವಿಕೆ/ಅಳಿಕೆ)
18.ರವಿಕನ್ನಡ ___ದಲ್ಲಿ ನೂರಕ್ಕೆ ನೂರು ಅಂಕ ಗಳಿಸಿದನು. (ವಿಷಯ/ವಿಸಯ)

IV. 19. ಹೊಂದಿಸಿ ಬರೆಯಿರಿ. (ಸಾಧಾರಣ)

ಎ) ಭಾವಸೂಚಕಚಿಹ್ನೆ	?
ಬಿ) ಪೂರ್ಣವಿರಾಮಚಿಹ್ನೆ	!
ಸಿ) ಉದ್ಧರಣಚಿಹ್ನೆ	.
ಡಿ) ಅಲ್ಪವಿರಾಮಚಿಹ್ನೆ	" "
ಇ) ಪ್ರಶ್ನಾರ್ಥಕಚಿಹ್ನೆ	,
ಎಫ್) ಸಮನಾರ್ಥಕಚಿಹ್ನೆ	:-
ಜಿ) ವಿವರಣಾಚಿಹ್ನೆ	=

V. ಸಹ ಸಂಬಂಧ ಹೊಂದಿಸಿ ಬರೆಯಿರಿ. (ಸುಲಭ)

20 ಹಣತೆ : ದೀಪ ::ಧರೆ :
21 ತಂದೆ : ತೀರ್ಥರೂಪ :: ತಾಯಿ:
22. ರಾಮಾಯಣದರ್ಶನಂ: ಕುವೆಂಪು :: ಭುವನೇಶ್ವರಿ:
23. ಅಂತ್ಯ; ಆರಂಭ :: ಸ್ವಾತಂತ್ರ:
24. ಕರಿಮೆ : ಉರಿಮೆ :: ಘೋಷಿಸು:

VI. ಈ ಕೆಳಗಿನ ಪದಗಳ ಧಾತು ರೂಪ ಬರೆಯಿರಿ. (ಸುಲಭ)

25 ಮೊಳೆಯಿತು
26. ಗೆದ್ದಿತು
27. ಮಾಡಿದಳು
28. ಬಂದಿತು
29. ಬರೆದನು

VII. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ. (ಸಾಧಾರಣ)

30. ಭುವನೇಶ್ವರಿ ಪದ್ಯದ ರಚನಕಾರರು ಯಾರು?
31. ಯಾವ ನಾಡಿನ ಸೊಬಗನ್ನು ಮಕ್ಕಳು ಹೆಮ್ಮೆಯಿಂದ ಕೇಳಬೇಕು?
32. ಮೈಸೂರಿನ ಹುಲಿ ಎಂದು ಯಾರನ್ನು ಕರೆಯುತ್ತಾರೆ?
33. ಕಿತ್ತೂರಿನ ರಾಣಿ ಚೆನ್ನಮ್ಮ ಯಾರ ವಿರುದ್ಧ ಹೋರಾಡಿದಳು?
34. ಯಾರು ಅಂತಃಕಲಹದಿ ಬಿಳಿಯರು ಭಾರತವನ್ನು ನುಂಗಿದರು?
35. ಕನ್ನಡ ಮಾತೆಯ ನಿಜಗರಿಮೆ ಯಾವುದು?
36.ಲೋಕವೇ ಬೆರಗಾಗುವ ಸಿರಿ ಸಂಪದ ಯಾರ ಸಾಮ್ರಾಜ್ಯದಲ್ಲಿ ಮೆರೆಯುತ್ತದೆ?
37. ಗಾಂಧಿ ತತ್ವದಲ್ಲಿ ಪ್ರಾರಂಭಗೊಂಡ ಯಾವುದಾದರೂ ಒಂದು ಚಳುವಳಿಯನ್ನು ಹೆಸರಿಸಿ.
38. ಭಾರತ ಸ್ವಾತಂತ್ರ್ಯಗೊಂಡ ವರ್ಷ ಯಾವುದು?
39. 1973 ಕ್ಕಿಂತ ಮುಂಚೆ ಕರ್ನಾಟಕವನ್ನು ಏನೆಂದು ಕರೆಯುತ್ತಿದ್ದರು?
40. ಕನ್ನಡದ ಮೊದಲ ಶಾಸನ ಯಾವುದು?
41. ಹೊಯ್ಸಳರ ರಾಜ್ಯಧಾನಿ ಯಾವುದು?
42.ಕನ್ನಡದ ಮೊದಲ ರಾಜಮನೆತನ ಯಾವುದು?
43. ಜ್ಞಾನಪೀಠ ಪ್ರಶಸ್ತಿಯನ್ನು ಪಡೆದ ಮೊಟ್ಟ ಮೊದಲಿಗರು ಯಾರು?

VIII. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಸಾಧಾರಣ)

44) ಯಾರ ಸಿರಿಪಂತದಲ್ಲಿ ನಡೆಯಬೇಕು?
45) ಗಾಂಧೀಜಿಯವರ ಮಾರ್ಗದಲ್ಲಿ ಯಾವ ಚಳುವಳಿಗಳು ಮೊಳೆತವು?
46) ವಿಜಯನಗರ ಸಾಮ್ರಾಜ್ಯದ ಸ್ಥಾಪಕರು ಯಾರು? ಯಾರ ಸಹಾಯದಿಂದ ಸ್ಥಾಪಿಸಿದರು.

IX. 47) ಈ ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣಗೊಳಿಸು. (ಸಾಧಾರಣ)

ಭುವನೇಶ್ವರಿ ಪದ ಪೂಜಿಸಿ ಹೇಳುವೆ ಸಿರಿಗನ್ನಡ ಹೊರ ಚರಿತೆಯನ್ನು।

____

ಗೆದ್ದು ಪಲ್ಲವರ ಕದಂಬ ಮಯೂರ ಮೆರೆದನು ಹೊರ ಬನವಾಸಿಯಲ್ಲಿ।

X. 48) ಸೂಕ್ತಲೇಖನ ಚಿಹ್ನೆಯೊಂದಿಗೆ ನಕಲು ಮಾಡು. (ಕಠಿಣ)

ಕನ್ನಡ ನಾಡು ನುಡಿಯ ಬಗ್ಗೆ ಗೆಳೆಯರಲ್ಲಿ ಪ್ರೀತಿ ಮತ್ತು ಅಭಿಮಾನವನ್ನು ಮೂಡಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ನಮ್ಮ ನಾಡಿನ ಇತಿಹಾಸ ಆಳಿದ ಪರಾಕ್ರಮಿಗಳು ನಾಡನ್ನುಕಟ್ಟಲು ಶ್ರಮಿಸಿದ ನೇತಾರರು ಇಲ್ಲಿನ ಶಿಲ್ಪಕಲೆ ಸಂಸ್ಕೃತಿ ಮುಂತಾದ ಪರಂಪರೆಯನ್ನು ಅದರ ಶ್ರೀಮಂತಿಕೆಯನ್ನು ಮಕ್ಕಳಿಗೆ ಅರ್ಥಮಾಡಿಸುವ ಮೂಲಕ ಅವರೆಲ್ಲರಲ್ಲೂ ನಾವು ಎಂತಹ ಪರಂಪರೆಯ ವಾರಸುದಾರರಾಗಿದ್ದೇವೆಂಬ ಬಗ್ಗೆ ಹೆಮ್ಮೆಮೂಡಿಸುವ ಆಶಯವನ್ನು ಕವಿಯು ಹೊಂದಿದ್ದಾರೆ

XI. 49) ಧ್ವನಿ ವ್ಯತ್ಯಾಸ ಗುರುತಿಸಿ ಈ ಕೆಳಗಿನ ಕಥೆಯ ಸಾಲುಗಳನ್ನು ಪೂರ್ಣಗೊಳಿಸಿ. (ಕಠಿಣ)

ಬೇಡನು ಬೀಸಿದ _ಗೆ_ ಯೊಂದು__ ಕಾಳುಗಳ _ಗೆ_ ಬಂದುಸಿಲುಕಿಕೊಂಡಿತು. __ ದಿಂದಗಾಬರಿಗೊಂಡ __ ಯನ್ನುರಕ್ಷಿಸಲು___ ಗಳುಸಹಾಯಮಾಡಿದವು. ಒಗ್ಗಟ್ಟಿನ __ ತಪ್ಪಿಸಿಕೊಂಡಹಕ್ಕಿಯು___ ದಿಂದ___ ಗೂಡುಸೇರಿತು

(ಹಕ್ಕಿ, ಹಾರಿ, ಪಕ್ಷಿ, ಪಕ್ಷಿಗಳು, ಭಯ, ಆಶೆ, ಆಸೆ, ಅಕ್ಕಿ, ಬಲ, ಭಯ, ಸಂತೋಷ, ಬಲೆ, ಬಳೆ, ಹಕ್ಕಿ, ಸಂತೋಸ)


XII. 50) ಈ ಕೆಳಗಿನ ಸುಳಿವು ಪದಗಳನ್ನು ಬಳಸಿಕೊಂಡು ಪುಟ್ಟ ಕವನವನ್ನು ರಚಿಸು. (ಕಠಿಣ)

(ಕನ್ನಡ, ಸುಂದರ, ನಾಡು, ಕರುನಾಡು, ಭವ್ಯ, ಪರಂಪರೆ, ಶಿಲ್ಪಕಲೆ, ಕರ್ನಾಟಕ, ಚೆಲುವ)

XIII. ಈ ಕೆಳಗಿನ ಮಹಾನ್ ವ್ಯಕ್ತಿಗಳನ್ನು ಕುರಿತು ನಿಮ್ಮ ಮಾತುಗಳಲ್ಲಿ ನಾಲ್ಕೈದು ವಾಕ್ಯಗಳನ್ನು ಬರೆಯಿರಿ. (ಕಠಿಣ)

51) ಮಹಾತ್ಮ ಗಾಂಧೀಜಿ
52) ಕಿತ್ತೂರು ರಾಣಿಚೆ ನ್ನಮ್ಮ





ಪೂರಕಪಾಠ 1 ಕಾಮನಬಿಲ್ಲು(ಪದ್ಯ)

ಕಲಿಕಾಫಲ: ವಿವಿಧ ಪರಿಸ್ಥಿತಿ ಮತ್ತು ಉದ್ದೇಶಗಳಿಗೆ(ಕಥೆ, ಕವಿತೆ, ಪ್ರಬಂಧ) ಮುಂತಾದವುಗಳನ್ನು ಅನುಸಾರವಾಗಿ ಬರೆಯುತ್ತಾರೆ.

I. ಬಿಟ್ಟ ಸ್ಥಳವನ್ನು ಸೂಕ್ತ ಪದದಿಂದ ಆರಿಸಿ ಬರೆಯಿರಿ. (ಸುಲಭ)

1.ನಮ್ಮವನು ಪದ ಬಿಡಿಸಿ ಬರೆದಾಗ............................
(ನಮ್ಮ+ಅವನು, ನಮ್ಮವ+ಅವನು, ನಮ್ಮ+ಅನು)

2. ಪಡುವಣ ಎಂದರೆ....................................
(ಪಶ್ಚಿಮ, ಉತ್ತರ, ದಕ್ಷಿಣ, ಪೂರ್ವ)

3. “ರಮೇಶನು ಶಾಲೆಗೆ ಹೋದನು”. ಈ ವಾಕ್ಯವನ್ನು ಭವಿಷ್ಯತ್ಕಾಲಕ್ಕೆ ಪರಿವರ್ತಿಸಿದಾಗ...............................
(ರಮೇಶ ಶಾಲೆಗೆ ಹೋದನು, ರಮೇಶ ಶಾಲೆಗೆ ಹೋಗುವನು, ರಮೇಶ ಶಾಲೆಗೆ ಹೋಗುತ್ತಾನೆ,)

4.ಕಿತ್ತಳೆ, ಕೇಸರಿ, ಹಳದಿ, ಕೆಂಪು, ನೀಲಿ ಕಂದು, ನೇರಳೆ ಇವು..........................ನಲ್ಲಿರುವ ಬಣ್ಣಗಳು
(ಗಾಳಿಪಟ, ನೇಸರ, ಕಾಮನಬಿಲ್ಲು, ಮರಗಿಡ)

II.

5. ಸೂಕ್ತ ಗಾದೆಗಳೊಂದಿಗೆ ಹೊಂದಿಸಿ ಬರಿ. (ಸುಲಭ)

ಅ) ಅತಿ ಆಸೆ	ಮಹರಾಯ
ಆ) ಅಲ್ಪ ವಿದ್ಯೆ	ಗತಿ ಗೇಡು
ಇ) ಕೈ ಸುಟ್ಟುಕೊಂಡ ಮೇಲೆ	ಮಹಾ ಗರ್ವಿ
ಈ) ಮಾಡಿದ್ದುಣ್ಣೋ	ಬದ್ದಿಬಂತು

III.

6. ಕೊಟ್ಟಿರುವ ಪದಗಳನ್ನು, ರೂಢನಾಮ, ಅಂಕಿತನಾಮ ಅನ್ವರ್ಥನಾಮಗಳಾಗಿ ವಿಂಗಡಿಸಿ.
ನದಿ, ವ್ಯಾಪಾರಿ, ಪೂಜಾರಿ, ಹೆಂಗಸು, ಮಮತ, ಮೇರಿ ದೇಶ, ಬ್ರಹ್ಮಪುತ್ರ, ಶಿಕ್ಷಕಿ (ಸಾಧಾರಣ)

IV.ನೀಡಿರುವ ಸುಳಿವು ಪದಗಳನ್ನು ಬಳಸಿ ಕವಿತೆಯನ್ನು ಪೂರ್ಣಗೊಳಿಸಿ. (ಸಾಧಾರಣ)

(ಮಡಿಕೆಯನ್ನು, ಹೋಯಿತು, ಬೇಳೆಬೆಲ್ಲ, ಪಾಯಸವನ್ನು, ಕುಡಿಯಿತು)

7. ಕೋತಿಯೊಂದು ಬಂದಿತು

.... ತಂದಿತು

ಅಂಗಡಿಗೆ.......................

...........................ತಂದಿತು.

.... ಮಾಡಿತು

ಹೊಟ್ಟೆಬಿರಿಯೆ ....

V. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (ಸಾಧಾರಣ)

8.ಕಾಮನ ಬಿಲ್ಲು ಯಾವಾಗ ಮೂಡುತ್ತದೆ? ಕಾಮನಬಿಲ್ಲುಪದ್ಯಬರೆದಕವಿಯಾರು?

9. ಕಾಮನ ಬಿಲ್ಲಿನಲ್ಲಿರುವ ಬಣ್ಣಗಳಲ್ಲಿ ನಿನಗೆ ಇಷ್ಟವಾದ ಬಣ್ಣ ಯಾವುದು? ಏಕೆ?

VI.

10. ನಿಮ್ಮ ಊರಿನಲ್ಲಿರುವ ಅಂಗಡಿ/ ಮಾಲ್/ ಮಳಿಗೆಗಳಲ್ಲಿ ದೊರೆಯುವ ವಸ್ತುಗಳನ್ನು ಪಟ್ಟಿ ಮಾಡಿ. (ಸಾಧಾರಣ)

VII. ಈ ಪದ್ಯದ ಮುಂದಿನ ಸಾಲನ್ನು ಬರೆಯಿರಿ. (ಸಾಧಾರಣ)

11.ರವಿಯದೊ ಹೊರಟನು...........................
.... ಸೇರಲಿಕೆ
ಸಂಜೆಯ ಹೊತ್ತಿನ........................
.... ಹೊನಲು

VIII.

12.. ಈ ಚಿತ್ರಕ್ಕೆ ಸಂಬಂಧಿಸಿದಂತೆ ಮೂರು ನಾಲ್ಕು ವಾಕ್ಯಗಳನ್ನು ಬರೆ. (ಕಠಿಣ) 1*4=4



ಪೂರಕಪಾಠ:ನಾನು ಮತ್ತು ಹುಂಚಿಮರ

ಕಲಿಕಾ ಫಲ -13 ವಿಭಿನ್ನ ಉದ್ದೇಶಗಳಿಗಾಗಿ ಬರೆಯುತ್ತಿರುವ ತಮ್ಮ ಬರವಣಿಗೆಯಲ್ಲಿ ಉದಾಹರಣೆ ಪೂರ್ಣವಿರಾಮ ಅಲ್ಪವಿರಾಮ ಪ್ರಶ್ನಾರ್ಥಕ ಚಿಹ್ನೆ ಭಾವ ಸೂಚಕ ಉದ್ಧರಣ ಚಿನ್ಹೆಗಳನ್ನು ಸೂಕ್ಷ್ಮವಾಗಿ ಬಳಸುತ್ತಾರೆ.

ಕಲಿಕಾ ಫಲ-16 ಉದ್ದೇಶ ಮತ್ತು ಸಂದರ್ಭಕ್ಕನುಗುಣವಾಗಿ ಶಬ್ದಗಳನ್ನು ವಾಕ್ಯಗಳನ್ನು ವಿರಾಮ ಚಿಹ್ನೆಗಳಲ್ಲಿ ಸೂಕ್ತವಾಗಿ ಬಳಸುತ್ತಾರೆ.

I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (ಸುಲಭ)

1. ನಾನು ದಾರಿಯಲ್ಲಿ ನಡೆದು ಹೋಗುತ್ತಿದ್ದೆ. ಈ ವಾಕ್ಯದಲ್ಲಿರುವ ಲೇಖನ ಚಿಹ್ನೆ----------
   1. ಪ್ರಶ್ನಾರ್ಥಕ ಚಿಹ್ನೆ. 2. ಅಲ್ಪ ವಿರಾಮ ಚಿಹ್ನೆ
   3. ಉದ್ಧರಣ ಚಿಹ್ನೆ. 4. ಪೂರ್ಣವಿರಾಮ ಚಿಹ್ನೆ
2. ಆಹಾ.... ಹುಂಚಿ ಹೂವು! ಈ ವಾಕ್ಯದಲ್ಲಿ ಹುಂಚಿ ಹೂವು ಪದದ ನಂತರ ಬರುವ ಲೇಖನ ಚಿಹ್ನೆ______
   1. ಅಲ್ಪ ವಿರಾಮ ಚಿಹ್ನೆ. 2. ಭಾವ ಸೂಚಕ ಚಿಹ್ನೆ
   3. ಪೂರ್ಣ ವಿರಾಮ ಚಿಹ್ನೆ 4. ಅರ್ಧ ವಿರಾಮ ಚಿಹ್ನೆ
3. ನಾನು ಹೊಂಚು ಆರಿಸಿದರೆ ಜನ ಏನೆಂದಾರು? ಲೇಖನ ಚಿಹ್ನೆಯ ಸರಿಯಾದ ರೂಪ______
   1.ಪ್ರಶಾರ್ಥಕ ಚಿಹ್ನೆ 2. ಪ್ರಶಾದಕ ಚಿಹ್ನೆ
   3. ಪ್ರನ್ಯಾರ್ಥಕ ಚಿಹ್ನೆ 4. ಪ್ರಶ್ನಾರ್ಥಕ ಚಿಹ್ನೆ
4. "ಲೇ.....ಲೇ.....ಕಲ್ಲು ಹೊಡೆಬ್ಯಾಡ್ರಿ! ಯಾರ ತಲೆ ಒಡಿಬೇಕಂತ ಮಾಡಿದ್ದೀರಿ?"ಇಲ್ಲಿರುವ ಲೇಖನ ಚಿಹ್ನೆಗಳು____
   1. ಪ್ರಶ್ನಾರ್ಥಕ ಚಿಹ್ನೆ, ಅಲ್ಪವಿರಾಮ ಚಿಹ್ನೆ, ಭಾವ ಸೂಚಕ ಚಿಹ್ನೆ, ಉದ್ಧರಣ ಚಿಹ್ನೆ
   2. ಭಾವ ಸೂಚಕ ಚಿಹ್ನೆ, ಅಲ್ಪವಿರಾಮ ಚಿಹ್ನೆ ಪ್ರಶ್ನಾರ್ಥಕ ಚಿಹ್ನೆ, ಉದ್ಧರಣ ಚಿಹ್ನೆ.
   3. ಉದ್ಧರಣ ಚಿಹ್ನೆ, ಅಲ್ಪ ವಿರಾಮ ಚಿಹ್ನೆ, ಭಾವ ಸೂಚಕ ಚಿಹ್ನೆ, ಪ್ರಶ್ನಾರ್ಥಕ ಚಿಹ್ನೆ.
   4. ಅಲ್ಪ ವಿರಾಮ ಚಿಹ್ನೆ, ಭಾವ ಸೂಚಕ ಚಿಹ್ನೆ, ಉದ್ಧರಣ ಚಿಹ್ನೆ, ಪ್ರಶ್ನಾರ್ಥಕ ಚಿಹ್ನೆ
5. ಮನುಷ್ಯರು ಯಾಕೆ ಹೀಗೆ ಮಾಡುತ್ತಾರೆ. ಈ ವಾಕ್ಯಕ್ಕೆ ಸೇರಿಸಬೇಕಾದ ಲೇಖನ ಚಿಹ್ನೆ--------
   1. ಅಲ್ಪವಿರಾಮ ಚಿಹ್ನೆ. 2. ಪೂರ್ಣವಿರಾಮ ಚಿಹ್ನೆ
   3. ಪ್ರಶ್ನಾರ್ಥಕ ಚಿಹ್ನೆ 4. ಭಾವಸೂಚಕ ಚಿಹ್ನೆ

II. ವಿರುದ್ಧ ಪದಗಳನ್ನು ಬರೆಯಿರಿ (ಸುಲಭ)

6. ದೂರ
7. ಕೆಳಗೆ
8. ಆಸೆ
9. ದೊಡ್ಡ
10. ಪ್ರೀತಿ

III. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. (ಸುಲಭ)

11. ನೆಲದ ತುಂಬಾ ಯಾವ ಹೂಗಳ ರಾಶಿ ಬಿದ್ದಿತ್ತು?
12. ಡೋರೆ ಹುಣಸೆ ಹಣ್ಣಿನ ರುಚಿಯನ್ನು ಯಾವ ಹಣ್ಣಿಗೆ ಹೋಲಿಸಿದ್ದಾರೆ?
13. ಹುಣಸೆ ಮರದ ಹತ್ತಿರ ಯಾವ ಯಾವ ಪಕ್ಷಿಗಳು ಕಾಣಿಸಿಕೊಂಡವು?
14. ನಾನು ಮತ್ತು ಹುಣಸೆ ಮರದ ಕೃತಿಕಾರರ ಹೆಸರೇನು?
15. ಹುಂಚಿಮರದಲ್ಲಿ ಯಾರು ವಾಸವಾಗಿದ್ದರೆಂದು ಕಡಿದು ಹಾಕಿದರು?

IV. ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ. (ಸಾಧಾರಣ)

16. ಲೇಖಕರು ಹುಂಚಿ ಹೂವು ಆರಿಸಲು ಹೋದಾಗ ಮನಸ್ಸಿನಲ್ಲಿ ಮೂಡಿದ ಭಾವನೆಗಳೇನು?

17. ಹುಂಚಿ ಮರದ ಗಾಳಿಯನ್ನು ಸೇವಿಸಲು ಕೃತಿಕಾರರು ಬಂದಾಗ ಉಂಟಾದ ಅನುಭವಗಳನ್ನು ಬರೆಯಿರಿ.

18. ಲೇಖಕರಿಗೆ ಹುಂಚಿ ಮರದೊಂದಿಗಿನ ಸಂಬಂಧವನ್ನು ಮರುಕಳಿಸಿದ ನೆನಪುಗಳಾವುವು?

19. ಹುಂಚಿ ಮರವನ್ನು ಏಕೆ ಕಡಿದರು?

V. ನಾಲ್ಕು ಐದು ವಾಕ್ಯದಲ್ಲಿ ಉತ್ತರಿಸಿ. (ಕಠಿಣ)

20. ನಿಮ್ಮ ಅನುಭವದಲ್ಲಿ ನಾನು ಮತ್ತು ಹಂಚಿಮರದ ಬಗ್ಗೆ ತಿಳಿಸಿ.

VI. ಕೆಳಗಿನ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆಯನ್ನು ಹಾಕಿರಿ. (ಸಾಧಾರಣ)

21. ಏ ತಮ್ಮ ಇಲ್ಲಿ ಹುಂಚಿಮರ ಇತ್ತಲ್ಲ ಏನಾಯ್ತು

22. ಆಂ ಆಂ ಕಡಿದರೆ ಯಾಕೆ ಯಾಕೆ

23. ಮೇಲೆ ಬಿಸಿಲು ಕೆಳಗೆ ಬೋಳು ನೆಲ

24. ಬೂಟು ಕಟ್ ಕಟ್ ಊರುತ್ತಾ ಮುಂದೆ ಸಾಗಿದೆ

25. ಅದೆಂದರೆ ಹುಂಚು ತಿನ್ನುವುದು

VII.

26.ಈ ಹಣ್ಣಿನ ಬಗ್ಗೆ ಬರೆಯಿರಿ. (ಕಠಿಣ)



27.ಈ ಚಿತ್ರವನ್ನು ಗಮನಿಸಿ. ಸೂಕ್ತಲೇಖನ ಚಿಹ್ನೆಗಳೊಂದಿಗೆ ವಾಕ್ಯವನ್ನು ಬರೆಯಿರಿ. (ಕಠಿಣ)



ಪೂರಕಪಾಠ 3: ನನ್ನರಟ್ಟೆಯಬಲ (ಪದ್ಯ)

ಕಲಿಕಾಫಲ: ಬೇರೆ ವಸ್ತು ವಿಷಯಗಳನ್ನು ತನ್ನದೇ ರೀತಿಯಲ್ಲಿ ಮತ್ತು ಭಾಷೆಯಲ್ಲಿ ಹೇಳುತ್ತಾ ತನ್ನದೇ ಸ್ವಂತದ ಜ್ಞಾನ ಕಟ್ಟಿಕೊಳ್ಳುವುದು.

I. ಬಿಟ್ಟ ಪದ ತುಂಬಿಸಿ. (ಸುಲಭ)

1. ಹಗಲು ಪದದ ವಿರುದ್ಧಾರ್ಥಕ ಪದ...............
2. ಪ್ರಾಮಾಣಿಕ ಪದದ ವಿಭಕ್ತಿ ಹೆಸರು...............

II. 3. ಹೊಂದಿಸಿ ಬರೆ. (ಸುಲಭ)

ಎ. ಹಂಬಲ - ಕೆಲಸ
ಬಿ. ಬಾನು - ಸೂರ್ಯ
ಸಿ. ಕಾಯಕ - ಕನಸು
ಡಿ. ಭಾನು - ಆಕಾಶ

III. ಏಕವಚನ ಬಹುವಚನ ಬರೆ. (ಸುಲಭ)

4. ಮಗು-
5.ಪುಸ್ತಕ-
6.ತಾಯಿ

IV. ಆರಿಸಿ ಬರೆಯಿರಿ. (ಸುಲಭ)

7. ರಟ್ಟೆಯ ಬಲವನ್ನು ನಂಬಿದವನು............................
   1. ರೈತ 2. ವೈದ್ಯ 3. ಶಿಕ್ಷಕ 4. ಸೈನಿಕ
8. ರೈತನ ನಿರಂತರ ಛಲ..
   1. ದುಡಿಯುವುದು 2. ಉಣ್ಣುವುದು 3. ಉಳುವುದು 4.ಕುಳಿತುಕೊಳ್ಳುವುದು
9. ನೆಲಕ್ಕೆ ಗೆಯ್ಯುವ ಕರ್ಮ, ನನ್ನ ಜೀವನ...
   1. ಮರ್ಮ 2.ಕರ್ಮ 3. ಧರ್ಮ 4. ಚರ್ಮ

V. ಆವರಣದಲ್ಲಿ ನೀಡಿರುವ ಸರಿಯಾದ ಪದವನ್ನು ಆಯ್ಕೆ ಮಾಡಿ ಪದ್ಯವನ್ನು

ಪೂರ್ಣಗೊಳಿಸು. (ಸಾಧಾರಣ)

10. ನೆಲಕೆ........................ಕರ್ಮ
ನನ್ನ.......................................
........................ಕಾಯಕ ತಪಸ್ಸು
ಮಣ್ಣ.........................ನನ್ನ ಸಿರಿಯಾಗಲಿ
(ಜೀವನ ಧರ್ಮ, ಕಣ ಕಣ, ಗೆಯ್ಯುವ, ಅಖಂಡ)

VI. ಸುಳಿವು ಪದ ಬಳಸಿ ವಾಕ್ಯ ಪೂರ್ಣಗೊಳಿಸು. (ಸಾಧಾರಣ)

11. ಪಿಂಕಿ ಒಬ್ಬ ತುಂಟ......................(ಹುಡುಗಿ/ಹುಡುಗ) .... ಪ್ರತಿ ನಿತ್ಯ ಹೂ ಮಾರುವ ಕೆಲಸಮಾಡುತ್ತಿದ್ದಳು. ಪಿಂಕಿ ಒಂದು ದಿನ ಹೂ ಮಾರಲು.......................... (ಹೋಗಿದ್ದನು/ಹೋಗಿದ್ದಳು.) ಹೂ ಮಾರಿ ಬಂದ ಹಣ ಎಣಿಸಲು ಮರದ ಕೆಳಗೆ.................... (ಕುಳಿತಳು/ಕುಳಿತನು). ಮರದ ಕೆಳಗೆ ಕುಳಿತು ಹಾವು .... (ಬಂದರು/ ಬಂದಿದೆ) ಎಂದು ಕೂಗಿದಳು. ಆಗ ಅಲ್ಲಿಯೆ ಗದ್ದೆ ಕೆಲಸ ಮಾಡುತ್ತಿದ್ದ ಜನರು ಓಡಿ.................................(ಬಂದರು/ ಬಂದಳು)

IV. ನೀಡಿರುವ ಚಿಹ್ನೆ ಬಳಸಿ ವಾಕ್ಯ ರಚಿಸು. (ಸಾಧಾರಣ)

13. ? - ....

14. ! -..

15.. -..

V. ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. (ಸಾಧಾರಣ)

16. ಅನ್ನದಾತರಿಗೆ ಸಂಬಂಧಿಸಿದ ಪದಗಳನ್ನು ಬರೆ.

17. ರೈತರು ಬಳಸುವ ಉಪಕರಣಗಳ ಹೆಸರನ್ನು ಬರೆಯಿರಿ.

18. ರೈತನು ಯಾವುದು ಸಿರಿಯಾಗಲಿ ಎನ್ನುತ್ತಾನೆ?

ಪೂರಕಪಾಠ (ಪದ್ಯ) 4: ಹಿನ್ನುಡಿ

I. ಬಿಟ್ಟಸ್ಥಳಗಳನ್ನುತುಂಬಿರಿ. (ಸುಲಭ)

1 ನಿನ್ನ ಸೇವೆಗೆ ನೀನೆ ------------------ಹೂವ

2."ಪೊಡವಿ' ಪದದ ಅರ್ಥ --------------------

3.ಹಿನ್ನುಡಿ ಪದ್ಯ ಬರೆದ ಕವಿ -------------------

4.ಹಕ್ಕಿ ಪದದ ಬಹುವಚನ ರೂಪ ----------------

II. 5. ಪ್ರಾಸ ಪದಗಳನ್ನುಹೊಂದಿಸಿರಿ (ಸುಲಭ)

ಎ. ಕವನ - ಹೂವ

ಬಿ. ಗೀತಾ - ಕಂಬ

ಸಿ. ಬಿಂಬ - ತನನ

ಡಿ. ದೇವ -ಸಂಗೀತ

III.ಈ ಕೆಳಗಿನಪ್ರಶ್ನೆಗಳಿಗೆಒಂದುವಾಕ್ಯದಲ್ಲಿಉತ್ತರಿಸಿ. (ಸುಲಭ)

6. ಕನ್ನಡಿಯ ಬಿಂಬ ಯಾವುದು?
7. ಹಕ್ಕಿಗಳ ಇಂಚರ ಹೇಗಿದೆ?
8. 'ನಾಲ್ದೆಸೆ' ಪದದ ಅರ್ಥವೇನು?
9. ದೇವರ ಕೃಪೆ ಯಾವುದಕ್ಕಿದೆ?

IV. ಈ ಕೆಳಗಿನವುಗಳನ್ನು ಉತ್ತರಬರೆ. (ಸಾಧಾರಣ)

10.' ಚುಕ್ಕಿಗಳು' ಪದದ ಏಕವಚನ ರೂಪ ಬರೆ.
11. ಪವನ ಪದಕ್ಕೆ ಎರಡು ಸಮನಾರ್ಥಕ ಪದ ಬರೆಯಿರಿ.
12. ಹಿನ್ನುಡಿ + ಇರಲು ಇದನ್ನು ಕೂಡಿಸಿ ಬರೆದಾಗ.
13. ದೇವಾ ಪದದ ಸ್ತ್ರೀಲಿಂಗ ರೂಪ ಬರೆ.
14. ನನ್ನ ಭಾವದ .... ದೇವಾ ಈ ಸಾಲುಗಳನ್ನು ಪೂರ್ಣಗೊಳಿಸಿ.

V. ಈ ಕೆಳಗಿನ ಪ್ರ ಶ್ನೆಗಳಿಗೆ ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿ (ಸಾಧಾರಣ)

15.. ಪ್ರಕೃತಿಯ ಯಾವ ಯಾವ ಸಂಗತಿಗಳು ದೇವರ ಸಂಗೀತವಾಗಿವೆ?
16.ಯಾವ ಜಂಬ ತನಗೆ ಬೇಡ ಎಂದು ಕವಿ ಹೇಳುತ್ತಾರೆ?
17.ಕನ್ನಡ ನುಡಿಗೆ ಯಾವ ಹಿನ್ನಡೆಯಿದೆ?
18.ಕವನ ಯಾವ ರೀತಿಯಲ್ಲಿದೆ?
19.ನುಡಿ ಗುಡಿಯ ಕಂಬ ಯಾವುದು?

VI. ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. (ಕಠಿಣ)

20. ಹಿನ್ನುಡಿ ಕವಿತೆಯ ಭಾವವನ್ನುವಿವರಿಸಿ.
21.ಈ ಪದ್ಯದಲ್ಲಿ ಕನ್ನಡ ಮನೆಯ ಮಹತ್ವ ಬರೆಯಿರಿ.

ಪೂರಕಪಾಠ 4: ಮೆಚ್ಚಿನಗೊಂಬೆ (ಗದ್ಯ)

I. ಕೆಳಗಿನಪ್ರಶ್ನೆಗಳಿಗೆಒಂದುವಾಕ್ಯದಲ್ಲಿಉತ್ತರಿಸಿ. (ಸುಲಭ)

1. ಗೊಂಬೆಗಳು ಯಾರಿಗೆಲ್ಲಇಷ್ಟವಾಗುತ್ತವೆ?
2. ನಮ್ಮ ನಾಡ ಹಬ್ಬಯಾವುದು?
3. ಜಾತ್ರೆ ಮತ್ತುಉತ್ಸವಗಳಲ್ಲಿ ಮುಖ್ಯ ಆಕರ್ಷಣೆ ಯಾವುದು?
4. ನಿನ್ನ ಬಳಿ ಯಾವ ಯಾವ ಗೊಂಬೆಗಳಿವೆ?
5. ನಿನ್ನ ದಿನ ಬಳಕೆಯ ವಸ್ತುಗಳಲ್ಲಿರುವ ಗೊಂಬೆಯ ರೂಪಗಳು ಯಾವುವು?

II. ಆವರಣದಲ್ಲಿ ಸೂಚಿಸಿದಂತೆ ಬರೆ. (ಸುಲಭ)

6. ಮಕ್ಕಳ ಕೈಯಲ್ಲಿ ಗೊಂಬೆಗಳಿಗೆ ಜೀವ ಬರುತ್ತದೆ ಈ ವಾಕ್ಯವನ್ನು ವಚನ ಬದಲಾಯಿಸಿ ಬರೆಯಿರಿ.
7. ಮರ ಮಣ್ಣು ಪ್ಲಾಸ್ಟಿಕ್ ಬಟ್ಟೆ ಹತ್ತಿ ಬಿದಿರು ಕಾಗದಗಳಿಂದ ಗೊಂಬೆಗಳನ್ನು ತಯಾರಿಸುತ್ತಾರೆ. ಈ ಮೇಲ್ಕಂಡ ವಾಕ್ಯಕ್ಕೆ ಸೂಕ್ತಲೇಖನ ಚಿಹ್ನೆಯನ್ನು ಹಾಕಿ.

III. 2-3 ವಾಕ್ಯಗಳಲ್ಲಿಉತ್ತರಿಸು. (ಸಾಧಾರಣ)

8. ಮಕ್ಕಳ ಕೈಯಲ್ಲಿ ಗೊಂಬೆ ಸಿಕ್ಕರೆ ಏನು ಮಾಡುತ್ತಾರೆ?
9. ಯಾವ ಯಾವ ರೂಪದ ಗೊಂಬೆಗಳನ್ನು ನೋಡಬಹುದು?
10. ನಿಮ್ಮೂರ ಜಾತ್ರೆ ಅಥವಾ ಉತ್ಸವಗಳಲ್ಲಿ ನೀನು ನೋಡಿರುವ ವಿವಿಧ ಗೊಂಬೆಗಳನ್ನು ಪಟ್ಟಿಮಾಡು.
11. ಗೊಂಬೆಗಳನ್ನು ನೋಡಿದಾಗ ನಿನಗಾಗುವ ಅನುಭವಗಳನ್ನು ವ್ಯಕ್ತಪಡಿಸು.
12. ನಿಮ್ಮ ಮನೆಯಲ್ಲಿ ಗೊಂಬೆಗಳನ್ನು ಅಲಂಕರಿಸುವ ಸಂದರ್ಭಗಳಾವುವು?
13. ಆಟ ಆಡಲು ಬಳಸುವ ವಿವಿಧ ರೀತಿಯ ಗೊಂಬೆಗಳಾವುವು?
14. ನೀನು ಇಷ್ಟಪಡುವ ಗೊಂಬೆಗೆ ಏನಾದರೂ ತೊಂದರೆಯಾದರೆ ನೀನು ಏನು ಮಾಡುವೆ?
15. ಗೊಂಬೆಗಳನ್ನು ನೀನು ಎಲ್ಲೆಲ್ಲಿ ನೋಡಿರುವೆ?

IV. 4-5 ವಾಕ್ಯಗಳಲ್ಲಿಉತ್ತರಿಸಿ (ಕಠಿಣ)

16. ನಿನ್ನ ನೆಚ್ಚಿನ ಗೊಂಬೆಯ ಬಗ್ಗೆ ನಾಲ್ಕರಿಂದ ಐದು ವಾಕ್ಯಗಳಲ್ಲಿ ಬರೆ.
17. ಗೊಂಬೆಯ ಕುರಿತಾಗಿರುವ ಯಾವುದಾದರೂ ಒಂದು ಹಾಡನ್ನು ಹೇಳು?
18. ನಿನಗಿಷ್ಟವಾದ ಗೊಂಬೆಯ ಚಿತ್ರ ಬರೆದು ಬಣ್ಣ ತುಂಬು.
19. ಜೋಕರ್ ಗೊಂಬೆಯ ಬಗ್ಗೆ ನಿನ್ನ ಮಾತುಗಳಲ್ಲಿ ಬರೆ.

ಉತ್ತರಸೂಚಿ

ಗದ್ಯಭಾಗ -1 ಒಟ್ಟಿಗೆಬಾಳುವಆನಂದ

I

1. ಅ
2. ಜೋಡುನುಡಿ
3. ಉದ್ಧರಣಚಿಹ್ನೆ.
4. ಸ್ತ್ರೀಲಿಂಗ

II

5. ಸರಿ.
6. ತಪ್ಪು.
7. ತಪ್ಪು.
8. ಸರಿ.

III. 9.

ಎ,ಜಗಳ- ಕಲಹ
ಬಿ.ಕಲ್ಲು - ಸಜಾತಿಒತ್ತಕ್ಷರಪದ.
ಸಿ.ಒಟ್ಟಾಗಿ ಬಾಳಿದರೆ - ಸುಖವಾಗಿಇರಬಹುದು.
ಡಿ.ನಾಳೆ- ಭವಿಷ್ಯತ್ಕಾಲ

IV

10. ಅಮ್ಮನ ಮರ ಎಂದು ಕರೆಯುತ್ತಿದ್ದರು.
11. ದೂರವಾಗಿದ್ದರೆ.
12. ಕಡಿಯುವುದು
13. ಹೊಡೆಯುವುದು
14. ಸುಖವಾಗಿ
15. ಅಮ್ಮನ ಮರ.
16. ಜನರಿಗೆ
17. ಅಮ್ಮನ ಕಲ್ಲು
18. ನೇಗಿಲು
19. ಅಮ್ಮನಕಲ್ಲನ್ನು
20. ಗರಗಸ
21. ರೈತನ ಹೊಲದಲ್ಲಿ
22. ಕಲ್ಲು ಕೋಪದಿಂದ ಉರುಳಿ ಬೇವಿನ ಮರದಿಂದ ದೂರ ಉರುಳಿತು.
23. ಇದು ಅಮ್ಮನ ಮರ ಕಡಿಯುವುದು ಬೇಡ ಎಂದು ಹೇಳಿದರು.
24. ಇದು ಅಮ್ಮನ ಕಲ್ಲು ಹೊಡೆಯುವುದು ಬೇಡ.
25. 49 ಅಕ್ಷರಗಳಿವೆ

V.

26. ರೈತ, ಮರ ಕಡಿಯುವವರು, ಅಮ್ಮನ ಮರ, ಅಮ್ಮನ ಕಲ್ಲು, ರೈತನ ಮಕ್ಕಳು.
27. ರೈತನು ಬೇವಿನ ಮರ ಕಡಿದು ನೇಗಿಲು ಹಾಗೂ ಚಕ್ರ ಮಾಡಲು ತಿಳಿಸಿದನು.
28. ಅಮ್ಮನ ಮರ ಮತ್ತು ಅಮ್ಮನ ಕಲ್ಲು ಮೊದಲಿನಂತೆ ಒಂದೇಕಡೆ ಇರದೆ ದೂರದೂರ ಇದ್ದುದರಿಂದ ರೈತನು ತನ್ನ ಮಕ್ಕಳಿಗೆ ಮರವನ್ನು ಕಡಿದು ನೇಗಿಲು ಚಕ್ರಮಾಡಿಸಿ ,ಕಲ್ಲ ಒಡೆಸಿ, ನೇಗಿಲುಕಟ್ಟಿ ಉಳಲು ಬರುತ್ತದೆ ಎಂದುಹೇಳಿದ್ದರಿಂದ ನಡುಗಲು ಪ್ರಾರಂಭಿಸಿದವು.
29. ಕಲಹ:ಆಟದ ಬೊಂಬೆಗಾಗಿ ಅಣ್ಣ ಮತ್ತು ತಂಗಿ ಕಲಹ ಮಾಡಿಕೊಂಡರು.
    ಕಲಹ:ಗೆಳೆಯರ ಜೊತೆ ಆಟ ಆಡುವಾಗ ಕಲಹ ಮಾಡಿಕೊಳ್ಳಬಾರದು.

30. ನಾನು ಅಮ್ಮನ ಮರ ನೀನು ನನ್ನ ಕೆಳಗಿರುವುದರಿಂದ ನಿನ್ನನ್ನು ಅಮ್ಮನ ಕಲ್ಲು ಎಂದು ಜನ ಕರೆಯುತ್ತಾರೆ ಎಂದು ಹೇಳಿತು.
31. ನಾನು ಅಮ್ಮನ ಕಲ್ಲು ನನ್ನ ಪಕ್ಕದಲ್ಲಿ ನೀನಿರುವುದರಿಂದ ನಿನ್ನನ್ನು ಅಮ್ಮನ ಮರ ಎಂದು ಕರೆಯುತ್ತಾರೆ ಎಂದು ಹೇಳಿತು.
32. ಬೇರೆ ಬೇರೆಯಾಗಿದ್ದ ಅಮ್ಮನ ಕಲ್ಲು ಹಾಗೂ ಬೇವಿನ ಮರವನ್ನು ನೋಡಿ ರೈತನು ಮರವನ್ನು ನಾಳೆ ಕಡಿಸಿ ನೇಗಿಲು ಮತ್ತು ಚಕ್ರ ಮಾಡಿಸಿ ಕಲ್ಲನ್ನು ನಾಳೆ ಕಲ್ಲು ಹೊಡೆಯುವರಿಂದ ಒಡೆಸಿದರೆ ನೇಗಿಲು ಕಟ್ಟಿ ಉಳಲು ಬರುತ್ತದೆ ಎಂದು ಹೇಳಿದ.
33. ಒಬ್ಬರು ಇನ್ನೊಬ್ಬರಿಂದ ಸುಖವಾಗಿರುವುದು ಎಂದು ತಿಳಿದು ಬೇವಿನ ಮರ ಮತ್ತು ಕಲ್ಲು ಮತ್ತೆ ಸ್ನೇಹಿತರಾದವು.
34. ವರ್ಣಮಾಲೆಯಲ್ಲಿ ಮೂರು ವಿಧ ಸ್ವರಗಳು ವ್ಯಂಜನಗಳು ಹಾಗೂ ಯೋಗವಾಹಕಗಳು
35. ಅಂದ, ಮಂದಾರ, ಕಂಗಳು, ಮಂಗ, ಸುಂದರ.
36. ಮರದ ಮೇಲೆ ಕುಳಿತಿದ್ದ ಹಕ್ಕಿಗಳ ಹಿಕ್ಕೆ ಕಲ್ಲಿನ ಮೇಲೆ ಬಿದ್ದು ಬಿದ್ದು ಆ ಕಲ್ಲು ಬೆಳ್ಳಗಾಯಿತು.

VI.

37. ರೈತ ದೇಶದ ಬೆನ್ನೆಲುಬು, ನೇಗಿಲಯೋಗಿ, ಬಹುಜನರ ಆಶ್ರಯದಾತ, ಕಷ್ಟಗಳನ್ನು ಮೆಟ್ಟಿನಿಂತು, ಮಳೆಯನ್ನೇ ತನ್ನ ಬದುಕಿನ ಆಸರೆಯಾಗಿ ನಂಬಿ, ಕಷ್ಟಪಟ್ಟು ದುಡಿದು ಬದುಕನ್ನು ಸಾಗಿಸುತ್ತಿದ್ದಾನೆ. ಆತನು ಬೆಳೆದ ಬೆಳೆಗೆ ಸೂಕ್ತ ಬೆಲೆ ಇಲ್ಲದೆ ಕಂಗಾಲಾಗಿದ್ದಾನೆ. ಆದ್ದರಿಂದ ಸರ್ಕಾರಗಳು ರೈತನ ನೆರವಿಗೆ ಸದಾಕಾಲ ನಿಲ್ಲಬೇಕಾಗುತ್ತದೆ.

38. ಒಗ್ಗಟ್ಟು, ಹೊಂದಾಣಿಕೆ, ತಾಳ್ಮೆ, ನಿರಹಂಕಾರ, ಸಹಾನುಭೂತಿ ಇನ್ನು ಮುಂತಾದ ಒಳನೋಟವನ್ನು ಈ ಪಾಠವು ಹೊಂದಿದ್ದು, ಇವುಗಳನ್ನುಅರ್ಥೈಸಿಕೊಂಡು ನಾವು ಬದುಕುಸಾಗಿಸಬೇಕು

ಗದ್ಯಭಾಗ -2 ನದಿಯಅಳಲು

I

1. ಕೊಳಕು
2. ಅಕ್ಕ
3. ಭ್+ಅ+ಕ್+ತ್+ಅ
4. ಹೊಣೆ
5. ವಿಷಕನ್ಯೆ

II

6. ದಂಡೆಯಲ್ಲಿ ಬಿದ್ದು ಹೊರಳಾಡಿದರು.
7. ಆಸ್ಪತ್ರೆಗೆ
8.ನದಿ, ಕೆರೆ
9.ನೀರಿನ ಮಾಲಿನ್ಯದ ಸೋಂಕು ತಗುಲಿತು.
10.ಜಲದೇವತೆಯನ್ನು ನೋಡಿ ಅಸಹ್ಯವಾಗುತ್ತದೆ ಎಂದರು.

III

11. ನವೆ
12. ಹಸು
13. ಪುಸ್ತಕ
14.ಬೆಟ್ಟ

IV.

15. ಜಲದೇವತೆ ಮಕ್ಕಳಿಗೆ ಹೇಳಿದಳು.
16. ಮಕ್ಕಳೆಲ್ಲರೂ ಜಲದೇವತಿಗೆ ಹೇಳಿದ ಮಾತು.
17. ದೀಪಕ್ ವೈದ್ಯರಿಗೆ ಹೇಳಿದ ಮಾತು.

V.

18. ಅಕ್ಕ
19. ಆಪ್ತ,
20. ಸ್ವರ,
21. ಪರ್ರನೆ,
22. ಅಜ್ಜ
23. ಹಗ್ಗ,
24. ಗಿಡ್ಡ,
25. ಬಣ್ಣ
26. ಅನ್ನ

VI.

27.ಮಕ್ಕಳು ನದಿಯಲ್ಲಿ ಸ್ನಾನ ಮಾಡಿದರು.
28.ನದಿ ಶುದ್ದವಾಗಿ ಹರಿಯುತ್ತದೆ.
29. ನದಿಯಿಂದ ಜಲದೇವತೆ ಪ್ರತ್ಯಕ್ಷವಾದಳು.

VII.

30. ನೀರು ಕಲುಷಿತಗೊಳ್ಳುತ್ತದೆ
ಜಲಚರ ಜೀವಿಗಳು ಸಾಯುತ್ತವೆ.
ರಾಸಾಯನಿಕ ವಸ್ತುಗಳು ನೀರನ್ನು ಸೇರುತ್ತವೆ

31.ಕಾರ್ಖಾನೆಗಳಿಂದ ಬಿಡುವಂತಹ ರಾಸಾಯನಿಕ ವಸ್ತುಗಳನ್ನು ನೇರವಾಗಿ ನೀರಿನ ಮೂಲಗಳಿಗೆ ಸೇರಿಸುವುದರಿಂದ,

*ಕೀಟಹಾರಿ ನೀರನ್ನು ನದಿಗಳಿಗೆ ನೇರವಾಗಿ ಬಿಡುವುದರಿಂದ.

*ವಾಹನಗಳನ್ನು ನೀರಿನ ಮೂಲಗಳ ಬಳಿ ಸ್ವಚ್ಛಗೊಳಿಸುತ್ತಿರುವುದರಿಂದ.

*ಬಿಸಾಡುವ ರಸಾಯನಿಕಗಳು ಮತ್ತೆ ನೀರಿನ ಮೂಲಕ ನೀರಿನ ಮೂಲ ಸೇರುತ್ತಿರುವುದರಿಂದ.

32. *ಕುಡಿಯಲು

*ಗಿಡಮರಗಳಿಗೆ

*ಪ್ರಾಣಿ-ಪಕ್ಷಿಗಳಿಗೆ

* ಪಾತ್ರೆತೊಳೆಯಲು

*ಬಟ್ಟೆತೊಳೆಯಲು

*ಸ್ನಾನಮಾಡಲು

*ಅಡುಗೆತಯಾರಿಸಲು

*ಸಸ್ಯಗಳಿಗೆ

*ಪಾತ್ರೆತೊಳೆಯಲು

VIII.

33.(ಮಕ್ಕಳುತಮ್ಮವಿವೇಚನೆಗೆತಕ್ಕಂತೆಉತ್ತರಿಸುವರು)

IX.

34.ಕಲುಷಿತ, ಮಾಲಿನ್ಯ, ವಿಷಕನ್ಯೆ, ಆಸ್ಪತ್ರೆ, ವೈದ್ಯರು, ಆರೋಗ್ಯ, ಅಪಾಯ, ನದಿ, ತುರಿಕೆ, ಅಸಹ್ಯ.

.

ಗದ್ಯಭಾಗ -3 ನಮ್ಮ ಮಾತು ಕೇಳಿ

I.
1. ಆನೆ
2. ಅಮೂಲ್ಯ
3. ಶಾಂತಿ
4. ಸಕಲ

II.
5. ಮದ್ದು
6. ಫಲಕ
7. ಪಟಾಕಿ

III.
8. ಈ ಮಾತನ್ನುಬೆಕ್ಕು ಸಭೆಗೆ ಹೇಳಿತು.
9. ಈ ಮಾತನ್ನುಎರೆಹುಳು ಸಭೆಗೆ ಹೇಳಿದ್ದು.
10. ಈ ಮಾತನ್ನುಬೆಕ್ಕು ಸಭೆಗೆ ಹೇಳಿತು
11. ಈ ಮಾತನ್ನುಕೋತಿ ಸಭೆಗೆ ಹೇಳಿತು

IV.
12. ಸಾಲಾಗಿ ಬನ್ನಿ, ನಿಶಬ್ದವಾಗಿರಿ, ಸರದಿಯನ್ನುಅನುಸರಿಸಿ.
13. ಸ್ವಚ್ಛತೆಯನ್ನು ಕಾಪಾಡಿ, ಕಸವನ್ನುಕಸದಬುಟ್ಟಿಗೆಹಾಕಿ. ಕೈಯನ್ನುಸ್ವಚ್ಛಗೊಳಿಸಿ .
14. ಹೂವನ್ನು ಕೀಳಬೇಡಿ, ನೀರು ಅಮೂಲ್ಯವಾದದ್ದು ಮಿತವಾಗಿ ಬಳಸಿ.

V.
15.ಪ್ರಾಣಿಗಳು ನಮ್ಮಂತೆಯೇ ಜೀವಿಗಳು ಅವುಗಳು ಮಾತನಾಡುವುದಿಲ್ಲ. ಆದರೆ ಅವುಗಳಿಗೂ ನಾವು ದಯೆ,ಪ್ರೀತಿ,ಕರುಣೆಯನ್ನು ತೋರಿಸಬೇಕು. ಮುಖ್ಯವಾಗಿ ಆಹಾರವನ್ನು ನೀಡಬೇಕು. ಅವುಗಳನ್ನು ಎಂದಿಗೂ ಹಿಂಸೆ ಮಾಡಬಾರದು.

16.ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಹಾಗೂ ಎರೆಹುಳುವಿಗೆ ಸಹಾಯ ಮಾಡಲು ಸಾವಯವಗೊಬ್ಬರವನ್ನು,ಹಸಿಕಸವನ್ನು ಬಳಸುತ್ತೇವೆ. ರಾಸಾಯನಿಕ ಔಷಧಿ ಇಲ್ಲವೇ ಕ್ರಿಮಿನಾಶಕವನ್ನು ಹಾಗೂ ರಾಸಾಯನಿಕ ಗೊಬ್ಬರವನ್ನು ಬಳಸುವುದಿಲ್ಲ. ಈ ಮೂಲಕ ಎರೆಹುಳುವಿಗೆ ಸಹಾಯ ಮಾಡುತ್ತೇನೆ.

VI.
17. ರಾಜ, ನಾಯಕ
18. ಕೋತಿ, ವಾನರ
19. ಅರಣ್ಯ, ಅಡವಿ

VII.
20. ಈ ಭಿತ್ತಿಪತ್ರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಸಂಬಂಧಿಸಿದೆ.
21. ಒಣ ಕಸವನ್ನು ನೀಲಿ ಬುಟ್ಟಿಗೆ ಹಾಕಬೇಕು.
22. ಹಸಿ ಕಸವನ್ನು ಹಸಿರು ಬುಟ್ಟಿಗೆ ಹಾಕಬೇಕು.
23. ಸ್ವಚ್ಛಮೇವಜಯತೆ, ನಿಮ್ಮ ಪರಿಸರ ಮತ್ತು ನಿಮ್ಮ ಶಾಲೆಯನ್ನು ಸ್ವಚ್ಛವಾಗಿ ಇಡಿ.

ಗದ್ಯಭಾಗ -4 ಜೀವದಮೌಲ್ಯ

I

1. ಅವಿವೇಕ
2.ಅನ್ವರ್ಥನಾಮ
3.ಹೆರಿಗೆ
4.ಕುತ್ತಿಗೆಸೆಳೆತಕ್ಕೈಕಾಲುನೋವು

II.

5. ಅಣಕಿಸಿ
6. ಕಂಠ
7. ಅಂಕಿತನಾಮ
8. ಎಲ್ಆರ್ನಾಯ್ಕ

III.

9. ಉಪಚಾರ/ಪೋಷಣೆ
10. ಸರಿ
11. ಉದ್ಯಾನವನ
12. ಮಕ್ಕಳ ವಾಕ್ಯ ರಚನೆ ಪರಿಶೀಲನೆ.

IV.

16. ಪೋಲಿಯೋ
17. ತರುಣ ಡಾಕ್ಟರ್ ಟಿ.ಜೆ. ಮಿಲ್ಲರ್ ನನ್ನು ಭೇಟಿಯಾಗಲು ಸಲಹೆ ನೀಡಿದನು.
18. ನೀನು ಪುಟ್ಟ ಹುಡುಗಿಯ ಕಾಲು ಸರಿಪಡಿಸುತ್ತಿರುವುದಷ್ಟೇ ಅಲ್ಲ, ಕುರುಡಾಗಿದ್ದ ಒಬ್ಬ ಹಿರಿಯನ ಕಣ್ಣು ತೆರೆಸಿರುವೆ ಎಂದು ಹೇಳಿದ.

IV.

19.ವ್ಯಕ್ತಿ, ವಸ್ತು, ಸ್ಥಳ ಮತ್ತು ಪ್ರಾಣಿಗಳ ಹೆಸರುಗಳನ್ನುಸೂಚಿಸುವ ಪದಗಳಿಗೆ ನಾಮಪದ ಎನ್ನುವರು.
ಉದಾಹರಣೆ: ಮಂಡ್ಯ, ತಿಮ್ಮಣ್ಣ, ಹುಲಿ, ಕಲ್ಲು ಇತ್ಯಾದಿ.
20.ಡಾ. ಮಿಲ್ಲರ್ ಮಕ್ಕಳನ್ನು ಭೂಮಿಗಿಳಿಸಿದ ವೈದ್ಯರ ಹೆಸರನ್ನು ಆ ಮಕ್ಕಳ ಅಡ್ಡ ಹೆಸರಾಗಿ ಬಳಸುವುದು ನಮ್ಮೂರಿನ ಸಂಪ್ರದಾಯ. ಹಾಗೆಯೇ ನನ್ನನ್ನು ಭೂಮಿಗಿಳಿಸಿದ ಒಬ್ಬ ತರುಣ ವೈದ್ಯಕೀಯ ವಿದ್ಯಾರ್ಥಿಯ ಹೆಸರನ್ನೇ ನನಗೆ ಇಡಲಾಯಿತು." ಎಂದು ಹೇಳಿದ್ದನ್ನು ಕೇಳಿ ಮಾರ್ಲಿನನ ಕಂಠ ಬಿಗಿದು ಬಂದಿತು.
21.ಒಬ್ಬ ವ್ಯಕ್ತಿಗೆ ಗುಣವಾಗದ ಖಾಯಿಲೆ ಇದ್ದರೆ ಆತನನ್ನು ಬದುಕಿಸಿ ಉಳಿಸಿ ಸಾಧಿಸುವುದೇನಿದೆ? ಹಾಗೆ ಅವರಿಗೆ ವೈದ್ಯಕೀಯ ಉಪಚಾರ ಮಾಡುತ್ತ ಬದುಕಿಸುವುದು ಶುದ್ಧ ಅವಿವೇಕ ಎಂದು ಭಾವಿಸಿದ್ದನು.

22. ಮಗುವಿಗೆ ಉಸಿರಾಡುವಂತೆ ಸಹಕರಿಸುವಾಗ ಮಾರ್ಲಿನನ ಮನಸ್ಸಿನಲ್ಲಿ "ಏನು ದುರಂತವೀ ಶಿಶು ಅದು ಬೆಳೆದಾಗ ಜೀವನವಿಡೀ ಕುಂಟುಕಾಲಿನಲ್ಲೇ ನಡೆಯಬೇಕು. ಇತರ ಮಕ್ಕಳು ಅಣಕಿಸಿ ಗೇಲಿ ಮಾಡುವರು. ಈ ಮಗು ಜೀವಿಸುವಂತೆ ಮಾಡುವುದೇಕೆ? ಇದು ಸತ್ತರೆ ಜಗತ್ತಿಗೆ ಏನು ನಷ್ಟ" ಎಂಬ ಆಲೋಚನೆಗಳು ಬಂದವು.

23. ಶೌಚಾಲಯ–ಬಳಸಿದ ನಂತರ ನೀರನ್ನುಹಾಕುವುದು.
ಶಾಲೆ – ಶಾಲಾವಲಯ ನಿಧಾನವಾಗಿ ಚಲಿಸಿ
ಆಸ್ಪತ್ರೆ – ಮೊಬೈಲ್ ಫೋನನ್ನು ನಿಷೇಧಿಸಿದೆ
ದೇವಸ್ಥಾನ – ಪಾದರಕ್ಷೆಗಳನ್ನುಹೊರಗೆ ಬಿಡಿ

24. ಮಾರ್ಲಿನನನ್ನುಭೇಟಿಯಾದ ಪ್ರವೀಣರಲ್ಲೊಬ್ಬ"ಒಬ್ಬ ತರುಣ ಡಾಕ್ಟರ್ ಇದ್ದಾನೆ. ಅವನು ಇಂಥ ಒಂದಷ್ಟು ಪ್ರಕರಣಗಳನ್ನು ನೋಡಿದ್ದಾನೆ, ಔಷಧಿಯನ್ನುಕೊಟ್ಟಿದ್ದಾನೆ. ಆ ಕುರಿತು ಒಂದು ಲೇಖನವನ್ನು ಒಂದು ಪತ್ರಿಕೆಯಲ್ಲಿ ಬರೆದಿದ್ದಾನೆ. ಅವನ ಹೆಸರು ಟಿ.ಜೆ. ಮಿಲ್ಲರ್ ನಾನು ನಿನ್ನಸ್ಥಾನದಲ್ಲಿದ್ದರೆ ಅವನ ಸಹಾಯ ಪಡೆಯುತ್ತಿದ್ದೆ." ಎಂಬ ಸಲಹೆಯನ್ನು ಕೊಟ್ಟನು.

25. ಚಿಕನ್ಪಾಕ್ಸ್, ಗಳಗಂಡ, ವಸಡು ಸೋರುವಿಕೆ, ಮೂಗು, ಕಿವಿಸೋರುವುದು, ದಡಾರ, ಸಿಡುಬು, ಅನೀಮಿಯಾ ಇತ್ಯಾದಿ.

26. ಅಂಕಿತನಾಮ–ರಾಜು,ರಾಮಪಟ್ಟಣ, ಸೋನು
ಅನ್ವರ್ಥನಾಮ- ಶಿಕ್ಷಕ, ವಿದ್ಯಾರ್ಥಿ, ವ್ಯಾಪಾರಿಬಳೆಗಾರ
ರೂಢನಾಮ- ಸಂತೆಬೆಟ್ಟ ನದಿ, ಕೆರೆ,ಅಂಗಡಿ

V.

24.. ಉತ್ತರಗಳಲ್ಲಿ ಈ ಕೆಳಗಿನ ಅಂಶಗಳನ್ನುಗಮನಿಸುವುದು

*ವೈದ್ಯವೃತ್ತಿಯಮಹತ್ವದಅಂಶಗಳು
* ವಿಶೇಷ ಚೇತನ ವ್ಯಕ್ತಿಗಳು ಇತರರಿಗಿಂತ ಭಿನ್ನರೂ ಹಾಗೂ ಅವರ ಸಾಧನೆಗೆ ನ್ಯೂನ್ಯತೆ ಎಂದು ಅಡ್ಡಿಯಾಗದು ಎಂಬ ಅಂಶಗಳು
* ಕಷ್ಟ ಕಾಲದಲ್ಲಿ ನೆರವಾದರೆ ಮುಂದೊಂದು ದಿನ ಅದರಿಂದ ಸಿಗಬಹುದಾದ ಪ್ರತ್ಯುಪಕಾರ ಇತ್ಯಾದಿ
* ಸಹಾಯ, ಕರುಣೆ, ನೋವು, ನಲಿವು ಅಂಶಗಳ ಬರಹದ ಅಂಶಗಳನ್ನು ಗಮನಿಸುವುದು.

25. ಪಲ್ಸ್ ಪೋಲಿಯೋಕಾರ್ಯಕ್ರಮ
26. ಆರೋಗ್ಯ ಮತ್ತು ಕಲ್ಯಾಣ ಇಲಾಖೆ
27. 5 ವರ್ಷದ ಒಳಗಿನ ಮಕ್ಕಳು
28. ಮಾರ್ಚ್ 3 ಭಾನುವಾರ 2024

ಗದ್ಯಭಾಗ-5 ಪಂಜರಶಾಲೆ

I.

1. ಮಧುಫಲ
2.ಶುಖ ಪಕ್ಷಿ
3.ಶಿಕ್ಷಣ
4.ಕಾಂಬೋಜ I

II. 5.

ಎ. ಪಕ್ಷಿ
ಬಿ. ಸಿಹಿಯಾದ ಹಣ್ಣು
ಸಿ. ಕಾಪಾಡುವವರು
ಡಿ. ಗಿಳಿ

III.

6. ಪಂಚಮಿ
7. ಬೆಟ್ಟ
8. ಮನೆಯಲ್ಲಿ
9. ನಾವು ಹಣ್ಣನ್ನುತಿಂದೆವು

IV.

10. ಗಿಳಿಮರಿಯೂ ಮಧುಫಲತಿನ್ನಲುತನ್ನಬಳಗವನ್ನುಕರೆಯುತು
11. ರಾಜನು ಗಿಳಿಮರಿಯನ್ನುರಾಜಶಾಲೆಗೆಸೇರಿಸಲುಆದೇಶಮಾಡಿದನು
12. ರಾಜನು ತನ್ನಅಳಿಯಸುಖಶಿಕ್ಷಣಮಂತ್ರಿಆಗಿನೇಮಿಸಿದನು
13. ಮೃಗ ಪದದಅರ್ಥಪ್ರಾಣಿ

V.

14.ಹಂಸ ಕೊಳದಲ್ಲಿಈಜುತ್ತಿದೆ
15. ಶಂಖದನಾದ ಕೇಳಲುಇಂಪು
16. ನಕ್ಷತ್ರಗಳು ಇರುಳಿನಲ್ಲಿಹೊಳೆಯುತ್ತಿವೆ
17. ಹಾಲು ಮಾರಿಧನಸಂಪಾದಿಸಿದನು

VI.

18. ಗಿಳಿಮರಿಯ ಬಗೆಗೆಮಂತ್ರಿಯೂರಾಜನಿಗೆಮಹಾಪ್ರಭು ಈ ಗಿಳಿಅರಣ್ಯವಾಸಿನಿರಕ್ಷರಕುಕ್ಷೀತೀರಾಸಂಸ್ಕೃತಸಂಗೀತವಿಲ್ಲನೃತ್ಯವಿಲ್ಲಗದ್ಯಪಾಧ್ಯದಬೇರೆಗೊತ್ತಿಲ್ಲ ಒಂದುಎರಡರಮಗ್ಗಿಕೂಡಬರೋದಿಲ್ಲಎಂದುಹೇಳಿದನು

19. ಗಿಳಿಮರಿಯೂ ಸಭ್ಯತೆ ಕಲಿಯಲಿ. ಕಾಡುತನ ಮರೆಯಲಿ ಶಾಸ್ತ್ರ ವ್ಯಾಕರಣ ಕಲಿತು ಸುಶಿಕ್ಷಿತವಾಗಲಿ ತಾನು ಸುಸಂಸ್ಕೃತವಾಗಲಿ. ತಾನು ಸುಸಂಸ್ಕೃತವಾಗಿ ಕಾಡಿನ ಉಳಿದ ಶುಖ ಪಕ್ಷಿಗಳನ್ನು ಸಭ್ಯರನ್ನಾಗಿ ಮಾಡಲಿ ಎಂದು ರಾಜರು ಹೇಳಿದನು

20.ಗಿಳಿಮರಿಗೆ ಸುಶಿಕ್ಷಿತ ಶಿಕ್ಷಣ ನೀಡಲು ರಾಜನ ಅಳಿಯ ತೆಗೆದುಕೊಂಡ ಕ್ರಮಗಳೆಂದರೆ ಇದರ ಅಸಭ್ಯತೆಗೆ ಮತ್ತು ಅವಿದ್ಯೆಗೆ ಮೂಲ ಕಾರಣವನ್ನು ಕಂಡುಹಿಡಿಯಬೇಕು ಇದಕ್ಕಾಗಿ ನಮ್ಮ ವಿಶ್ವವಿದ್ಯಾಲಯದಲ್ಲಿಒಂದು ಶುಕ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಬೇಕು.

21. ಯಾರಾದರೂ ಯಾರಿಗಾದರೂ ಯಾವ ವಿಷಯವನ್ನು ಆದರೂ ತಿಳಿಸಲು ಹೇಳಿದ್ದರೆ, ಅವರಿಗೆ ಆ ವಿಷಯವನ್ನುಯಥಾವತ್ತಾಗಿ ತಿಳಿಸಿ ಬಿಡುತ್ತಾಳೆ ಮಲಜ್ಜಿ. ಪತ್ರಿಕೆ, ಪತ್ರಗಳನ್ನು ಸಂಬಂಧಿಸಿದವರಿಗೆ ತಪ್ಪದೆ ತಲುಪಿಸುತ್ತಾಳೆ. ಯಾರು? ಎಲ್ಲಿಗೆ ಏಕೆ ಹೋಗಿದ್ದಾರೆ? ಯಾವಾಗ ಬರುತ್ತಾರೆ? ಎಲ್ಲವೂ ತಿಳಿದಿರುತ್ತದೆ ಮಲ್ಲಜ್ಜಿಗೆ.

22. ಮಗುವಿನ ವಿವೇಚನೆಯಂತೆ ಉತ್ತರಿಸುತ್ತದೆ.

ಗದ್ಯಭಾಗ-6 ಮಲ್ಲಜ್ಜಿಯಮಳಿಗೆ

I. 1.

ಎ.ತೀರ್ಥರೂಪ
ಬಿ. ಮಾತೃಶ್ರೀ
ಸಿ. ಪೂಜ್ಯ
ಡಿ. ಆತ್ಮೀಯ
ಇ. ತೀರ್ಥರೂಪಸಮಾನ
ಎಫ್. ಮಾತೃಶ್ರೀಸಮಾನ
ಜಿ. ಚಿರಂಜೀವಿ

II.

2. ಗೀತಾಹಣ್ಣನ್ನುತಿನ್ನುತ್ತಾಳೆ.
3. ಹೋಗು
4. ಕಲ್ಲು
5. ಜರೂರು,ಕೂಡಲೆ
6. ಜಾನ್ಗೆಳೆಯನಜೊತೆಆಟವಾಡುತ್ತಿದ್ದನು

III. 7. ಬನ್ದರು
8. ರೈತಹಾಕುತ್ತಿದ್ದಮೇವನ್ನುಹಸುಗಳುಪ್ರತಿದಿನವೂತಿನ್ನುತ್ತಿದ್ದವು.
9. ತೃತೀಯವಿಭಕ್ತಿ
10. ಸಪ್ತಮಿವಿಭಕ್ತಿ
11. ತಿನ್ನುವಿರಿ

IV.

12. ಮಲ್ಲಜ್ಜಿಯ ಕೋರ್ಟನಲ್ಲಿ ಶುಲ್ಕ ವಕೀಲರ ಫೀಜು ಯಾವುದೂ ಇರುವುದಿಲ್ಲ. ಮಲ್ಲಜ್ಜಿ ನೀಡುವ ತೀರ್ಪು ಯಾವ ನ್ಯಾಯಾಧೀಶರ ತೀರ್ಪಿಗೂ ಕಡಿಮೆ ಇರುವುದಿಲ್ಲ. ಅದ್ದರಿಂದ ಮಲ್ಲಜ್ಜಿಯ ಮಳಿಗೆ ಒಂದು ಜನಪ್ರಿಯ"ಜನತಾ ನ್ಯಾಯಲಯ"

13. ಸೃಜನನಿಗೆ ಮಲ್ಲಜ್ಜಿಯ ಮಳಿಗೆ ಒಂದು "ಜಾದೂ ಲೋಕವಿದ್ದಂತೆ" ಕಾಣುತ್ತದೆ.

V. 14. ಪತ್ರಗಳ ವಿಧಗಳು 5

ವೈಯಕ್ತಿಕ ಪತ್ರಗಳು
ಮನವಿ ಪತ್ರಗಳು
ಆಡಳಿ ವಿಷಯಗಳಿಗೆ ಸಂಬಂಧಿಸಿದ ಪತ್ರಗಳು
ಜಾಹೀರಾತು ಪತ್ರಗಳು
ವಿವಿಧ ಸಂಗ್ರಹಣೆ ಮತ್ತು ಪತ್ರಿಕ ವರದಿ ಪತ್ರಗಳು

15.ಮಲ್ಲಜ್ಜಿಯ ಮಳಿಗೆಯಲ್ಲಿ ದೊರೆಯುವ ವಸ್ತುಗಳು ಕಡಲೆಪುರಿ, ಮಿಠಾಯಿಯಿಂದ ಹಿಡಿದು ಇತ್ತಿಚಿನ ತಿನಿಸು ಸಕ್ಕರೆ, ಚಹಾಪುಡಿ, ಊದುಕಡ್ಡಿ, ಕರ್ಪೂರ, ಬಿಸ್ಕತ್ – ಖಾರ ,ಸ್ನೊ –ಪೌಡರ್ ಚಾಕಲೇಟ್ ಹೀಗೆ ಎಲ್ಲರಿಗೂ ಬೇಕಾದ ವಸ್ತುಗಳು ಇಲ್ಲಿ ದೊರೆಯುತ್ತವೆ.

16.ಮಲ್ಲಜ್ಜಿಯು ದುಡ್ಡಿಲ್ಲದೆ ಬಂದ ಪುಟ್ಟ ಮಕ್ಕಳಿಗೂ ಮಲ್ಲಜ್ಜಿ ನಗುತ್ತ ಪ್ರೀತಿಯಿಂದ ಮಿಠಾಯಿ ಕೊಡುತ್ತಾಳೆ'. ಈಗ ದುಡ್ಡಿಲ್ಲಜ್ಜಿ ಎಂದೂ ದೊಡ್ಡವರು ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಹಣ ವಿದ್ದಾಗ ತಪ್ಪದೇ ತಂದು ಕೊಡುತ್ತಾರೆ. ಹೀಗಾಗಿ ಮಲ್ಲಜ್ಜಿಯ ಮಳಿಗೆ ಒಂದು ಪ್ರೀತಿಯ 'ಸಹಕಾರಿ ಬ್ಯಾಂಕ್' ಇದ್ದಂತೆ.

VI.

1. ಕ್ಷೇಮ, ಶ್ರೀ ದಿನಾಂಕ

ತೀರ್ಥರೂಪರಾದ ತಂದೆಯವರಿಗೆ ನಿಮ್ಮ ಮಗಳಾದ .... ಮಾಡುವ ನಮಸ್ಕಾರಗಳು. ನಮ್ಮ ಶಾಲೆಯಲ್ಲಿ ಉತ್ತಮವಾಗಿ ಪಾಠಬೋಧನೆ ನಡೆಯುತ್ತಿದೆ. ವಿಶೇಷವಾಗಿ ಇಂಗ್ಲೀಷ್ ಪಾಠಬೋಧನೆ, ನಲಿಕಲಿ ಹಾಗೂ ಸಂಭ್ರಮ ಶನಿವಾರದಂತಹ ಉತ್ತಮ ಚಟುವಟಿಕೆ ಆಧಾರಿತ ಕಾರ್ಯಕ್ರಮಗಳು ನಡೆಯುತ್ತಿವೆ. ದಯಮಾಡಿ ನಮ್ಮ ಶಾಲೆಗೆ ಭೇಟಿ ನೀಡಿ ನೋಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. (ಮಗುವಿನ ಸ್ವಅಭಿವ್ಯಕ್ತಿಗೆ ಅವಕಾಶ)

ಇಂತಿ ನಿಮ್ಮ ಮಗಳು.

____

ಗದ್ಯಭಾಗ-7 ಧೀರಸೇನಾನಿ

I.

1.ಗುರುನಾಥ ರಾಯ್

2.ರಾಯಲ್ ಇಂಡಿಯನ್ ಮಿಲಿಟರಿ ಶಾಲೆ

3.ಯೋಧ

4.ಪದ್ಮಭೂಷಣ ಪ್ರಶಸ್ತಿ

5.ಮಾತಿಗಿಂತ ಕೃತಿ ಲೇಸು

II. 6.

ಎ.ಶ್ರೇಷ್ಠ

ಬಿ.ಹುಟ್ಟು

ಸಿ.ಒಳ್ಳೆಯತನ

ಡಿ.ಒಳ್ಳೆಯದು

ಇ.ಹಳ್ಳಿ

III.

7.ರುಕ್ಮಿಣಿ ಬಾಯಿ

8.ಗೌರವ ಖಡ್ಗ

9.ಪಾಕಿಸ್ತಾನ

10.ರಾಧಿಕಾ ಬಾಯಿ

11.ಒಂಬತ್ತನೆಯ

IV.

12.ಬೇವೂರರು11.08.1916 ರಂದುಜನಿಸಿದರು

13.ಬಾಗಲಕೋಟೆ ಜಿಲ್ಲೆಯಬೇವೂರುಗ್ರಾಮದಲ್ಲಿ

14.ಫೀಲ್ಡ್ ಮಾರ್ಷಲ್ಮಾಣಿಕ್ಶಾ

15.ಇಂಡಿಯನ್ ಮಿಲಿಟರಿಅಕಾಡೆಮಿ

16.14.10.1989

V.

17.ರಾಯಲ್ ಇಂಡಿಯನ್ ಮಿಲಿಟರಿ ಕಾಲೇಜು ಮತ್ತು ಇಂಡಿಯನ್ ಮಿಲಿಟರಿ ಅಕಾಡೆಮಿಯಲ್ಲಿ ಸೈನಿಕ ಶಿಕ್ಷಣ ಪಡೆದರು. ಶಿಸ್ತು ಶಿಕ್ಷಣ ಕಠಿಣ ಶ್ರಮಗಳಿಂದ ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ ಗೌರವ ಖಡ್ಗ ಪ್ರಶಸ್ತಿ ಪಡೆದರು.

18.ಬಾಂಗ್ಲಾ ಹೋರಾಟದ ಸಂದರ್ಭದಲ್ಲಿ ಪಶ್ಚಿಮ ಪಾಕಿಸ್ತಾನದ ಕಡೆಗೆ ನುಗ್ಗಿದರು. ಸೇನಾ ತುಕಡಿಯ ಮುಖ್ಯಸ್ಥರಾಗಿ ರಾಜಸ್ಥಾನ ಮತ್ತು ಕಚ್ ದುರ್ಗಮ ಪ್ರದೇಶಗಳಲ್ಲಿ ಸಾವಿರಾರು ಚದುರ ಮೈಲು ಪಾಕ್ ನೆಲವನ್ನುಆಕ್ರಮಿಸಿಕೊಂಡರು.

19.ಮೆರವಣಿಗೆ ಸಂದರ್ಭದಲ್ಲಿ ಇವರೆಲ್ಲ ನನ್ನ ಜನ ಎಂದು ಜೀಪಿನಲ್ಲಿ ಕುಳಿತುಕೊಳ್ಳದೆ ತಮ್ಮ ಹೆಂಡತಿ ರಾಧಿಕಾ ಬಾಯಿಯವರೊಡನೆ ರೈತನ ಗಾಡಿಯೊಂದರಲ್ಲಿ ಹತ್ತಿ ಕುಳಿತು ಗ್ರಾಮದ ಓಣಿಯಲ್ಲಿ ಜನರ ಜೊತೆ ಮಾತನಾಡುತ್ತಾ ನಡೆದುಕೊಂಡುಹೋದರು.

VI.

20.ನಾನೊಬ್ಬ ಸೈನಿಕ. ನನಗೆ ರಕ್ಷಣೆ?

21.ಸೈನಿಕರು ಶತ್ರು ದೇಶದ ವಿರುದ್ಧ ಹೋರಾಡಿದರು.

22.ಹುಡುಗರು ಹಣ್ಣುಗಳನ್ನುತಿಂದರು

23.ಬೀಳಿಸಿದಳು.

24.ಮಕ್ಕಳ ವಾಕ್ಯ ರಚನೆ ವ್ಯಾಕರಣ ವಿಷಯವನ್ನು ಬರೆಯುವ ಕ್ರಮ ಲೇಖನ ಚಿಹ್ನೆಗಳನ್ನು ಗಮನಿಸಿ ಅಂಕಗಳನ್ನು ನೀಡುವುದು.

25.ಸೂಕ್ತವಾದ ಲೇಖನ ಚಿಹ್ನೆ ಬಳಸಿ ಬರೆದಿರುವುದನ್ನು ಗಮನಿಸಿ ಅಂಕಗಳನ್ನು ನೀಡುವುದು.

ಗದ್ಯಭಾಗ-8 ಸಂಗೊಳ್ಳಿರಾಯಣ್ಣ

I. 1. ಗೆರಿಲ್ಲಾ.

2. ವೀರಾಗ್ರಣಿ.

II. 3. ನಂದಗಡ

4. ಸ್ವಂತ ವಾಕ್ಯ ರಚನೆ

5. ಮೇಲೆ ಬೀಳು.

6. ನಿರೀಕ್ಷಿತ

7. ಹೊಂದು, ಸೈನ್ಯ

IV. 8.

ಎ. ಯುದ್ಧ.

ಬಿ. ಸಮಾಧಿ.

ಸಿ. ತಾಲೂಕು.

ಡಿ. ಮೇಜರ್ ಪಿಕ್ಕರಿಂಗ್

V.

9. ಈ ವಾಕ್ಯವನ್ನು ಸಂಗೊಳ್ಳಿರಾಯಣ್ಣ ಪಾಠದಿಂದ ಆಯ್ದುಕೊಳ್ಳಲಾಗಿದೆ. ಮರಣ ದಂಡನೆ ಶಿಕ್ಷೆಗೆ ಒಳಪಟ್ಟ ರಾಯಣ್ಣನನ್ನು ಆತನ ಮುಖ್ಯಕಾರ್ಯಕ್ಷೇತ್ರವಾದ ನಂದಗಡದಲ್ಲಿ ಗಲ್ಲಿಗೇರಿಸಲು ವಧಾಸ್ಥಾನಕ್ಕೆ ಬ್ರಿಟಿಷರು ಕರೆದೊಯ್ಯುತ್ತಿದ್ದಾಗ ಒಂದು ವಿಶೇಷವಾದ ಸ್ಥಳದಲ್ಲಿ ತನ್ನದೇಹವನ್ನು ಸಮಾಧಿ ಮಾಡಬೇಕೆಂದು ರಾಯಣ್ಣನು ಒಂದು ಸ್ಥಳವನ್ನು ತೋರಿಸಿದನಂತೆ. ಅಲ್ಲಿಯೇ ಆತನನ್ನು ಗಲ್ಲಿಗೇರಿಸಲಾಯಿತು ಎಂಬುದನ್ನು ಲೇಖಕರು ಈ ಸಂದರ್ಭದಲ್ಲಿ ಆತ ಬಯಸಿದ್ದಲ್ಲೇ ಸಮಾಧಿ ಮಾಡಲಾಯಿತು ಎಂದಿದ್ದಾರೆ.

10. ಈ ವಾಕ್ಯವನ್ನು ಸಂಗೊಳ್ಳಿರಾಯಣ್ಣ ಪಾಠದಿಂದ ಆಯ್ದುಕೊಳ್ಳಲಾಗಿದೆ. ರಾಯಣ್ಣನನ್ನು ಗಲ್ಲಿಗೇರಿಸಲು ವಧಾಸ್ಥಾನಕ್ಕೆ ಕರೆದುಕೊಂಡು ಹೋಗುತ್ತಿದ್ದಾಗ ಆತನು ತೋರಿಸಿದ ವಿಶೇಷವಾದ ಸ್ಥಳದಲ್ಲಿ ಆತನ ಸಮಾಧಿಮಾಡಲಾಯಿತು. ಅಲ್ಲಿ ಒಂದು ಆಲದಮರ ಬೆಳೆದಿದೆ. ಜನರು ಗುಡಿಯನ್ನು ಕಟ್ಟಿದ್ದಾರೆ. ಈಗ ರಾಯಣ್ಣನ ಸಮಾಧಿಯು ಜನರ ಪಾಲಿಗೆ ವೀರಗುಡಿಯ ರಾಯಣ್ಣನ ಗದ್ದುಗೆಯಾಗಿದೆ.

VI.

11. ರಾಯಣ್ಣ ಸೈನ್ಯದ ಸಹಾಯವಿಲ್ಲದೆ ಬ್ರಿಟಿಷರ ವಿರುದ್ಧ ಹೋರಾಡುತ್ತಾ ಮೊದಲಿಗೆ ಖಾನಾಪುರದಲ್ಲಿ ನೆಲೆಸಿದ್ದ ಮೇಜರ್ ಪಿಕ್ಕರಿಂಗ್ ಸೈನ್ಯದ ಮೇಲೆ ದಾಳಿ ನಡೆಸಿದನು. ಅಲ್ಲಿನ ಸರ್ಕಾರಿ ಕಛೇರಿಯನ್ನು ಸುಟ್ಟುಹಾಕುವ ಮೂಲಕ ಬ್ರಿಟಿಷ್ ಆಡಳಿತದ ವಿರುದ್ಧ ತನ್ನ ಪ್ರತಿಭಟನೆಯನ್ನು ದಾಖಲಿಸಿದ.

VII. 12. ರಾಯಣ್ಣ ತನ್ನ ಅಜ್ಜ ಮುತ್ತಜ್ಜರಿಂದ ವೀರಪರಂಪರೆ ಹೊಂದಿದ್ದ ಮನೆತನ ಇವರದು. ಈತನ ತಾತನಾದ ರಾಗಪ್ಪ ಅಂದಿನ ಕಿತ್ತೂರು ದೊರೆ ವೀರಪ್ಪದೇಸಾಯಿಯಿಂದ ಯುದ್ಧದಲ್ಲಿ ತೋರಿದ ಅಪ್ರತಿಮ ಶೌರ್ಯದಿಂದಾಗಿ 'ಸಾವಿರಒಂಟೆಸರದಾರ' ಎಂಬ ಬಿರುದನ್ನು ಪಡೆದಿದ್ದರು. ರಾಯಣ್ಣನಿಗೆ ಸಹಜವಾಗಿಯೇ ಯೋಧನೊಬ್ಬನಿಗಿರಬೇಕಾದ ಲಕ್ಷಣಗಳೆಲ್ಲವೂ ರಕ್ತಗತವಾಗಿ ಬಂದಿದ್ದವು ಎಂದು ತಿಳಿಯಬಹುದಾಗಿದೆ.

13. ರಾಯಣ್ಣ ಕಿತ್ತೂರು ಸಂಸ್ಥಾನದಲ್ಲಿ ತಳವಾರಿಯಾಗಿದ್ದು ಹಲವಾರು ದೇಶಭಕ್ತರೊಂದಿಗೆ ಬ್ರಿಟಿಷರ ವಿರುದ್ಧ ಹಗಲುರಾತ್ರಿ ಹೋರಾಡಿದ್ದರಿಂದ ಬ್ರಿಟಿಷ್ ಸರ್ಕಾರ ರಾಯಣ್ಣನ ಮನೆತನಕ್ಕೆ ಸೇರಿದ ಭೂಮಿಯನ್ನು ವಶಪಡಿಸಿಕೊಂಡಿತು.

14. ರಾಯಣ್ಣನು ಬ್ರಿಟಿಷ್ ಸರ್ಕಾರದ ವಿರುದ್ಧ ಹೋರಾಡಿದ್ದರಿಂದ ಬ್ರಿಟಿಷ್ ಸರ್ಕಾರ ಆತನ ಮನೆತನಕ್ಕೆ ಸೇರಿದ್ದ ಭೂಮಿಯನ್ನು ವಶಪಡಿಸಿಕೊಂಡಿತು. ಇದರಿಂದ ಕ್ರೋಧಗೊಂಡ ಈತನು ಕಿತ್ತೂರಿನ ಸ್ವಾತಂತ್ರ್ಯವನ್ನು ಪುನಃಸ್ಥಾಪಿಸಬೇಕೆಂದು ಶೂರಸಾಹಸಿಗಳ ಗುಂಪನ್ನು ಕಟ್ಟಿ ಬ್ರಿಟಿಷರ ವಿರುದ್ಧ ಬಂಡಾಯವೆದ್ದನು.

ಪದ್ಯಭಾಗ -1 ಗಿಡಮರ

I.

1. ತಪ್ಪು
2. ಸರಿ
3. ತಪ್ಪು
4. ತಪ್ಪು
5. ಸರಿ

II.

6.ಮಾನವರು
7.ಬಾಗಲಕೋಟೆ
8. ಕರಿಯಕಟ್ಟಿದಕವನ
9. ಮನಸ್ಸು
10. ಐಕ್ಯತೆ (ಒಗ್ಗಟ್ಟು)

III.

11.ಎ. ಮರದ ಕಾಂಡದ ಭಾಗ
ಬಿ.ವಿಧವಿಧವಾದ
ಸಿ.ಕಪ್ಪಾದ ಬಣ್ಣ
ಡಿ. ನಾಶ ಹೊಂದಿದ ಊರು

IV. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

12.ಗಿಡಮರ ಪದ್ಯವನ್ನು ಬರೆದವರು ಸತ್ಯಾನಂದ ಪಾತ್ರೋಟ.
13. ಸತ್ಯಾನಂದ ಪಾತ್ರೋಟರವರು ಎಸ್.ಬಿ. ಪಾಟೀಲ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು.
14. ಸತ್ಯಾನಂದ ಪಾತ್ರೋಟರವರು ರಚಿಸಿದ ಪ್ರಬಂಧ ಸಂಕಲನದ ಹೆಸರು ಒಂದಿಷ್ಟು ಕ್ಷಣಗಳು.
15. ಸತ್ಯಾನಂದ ಪಾತ್ರೋಟರವರ ಕಾವ್ಯದ ಧ್ವನಿಸುರುಳಿಯ ಹೆಸರು ಎದೆಯ ಪಿಸುಮಾತು.
16. ರೆಂಬೆ ಕೊಂಬೆ ಚಿಗುರುವಾಗ ಕಡಲುಕ್ಕುವ ಚೇತನ ಕಂಡುಬರುತ್ತದೆ ಎಂದು ಕವಿ ಹೇಳಿದ್ದಾರೆ.
17. ಕರ್ನಾಟಕ ಸರ್ಕಾರ ನೀಡುವ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.
18. ರಾಜ, ಮಹೇಶ, ಹರೀಶ ಇತ್ಯಾದಿ.
19. ರಾಣಿ,
20. ಕಲ್ಲು, ಪುಸ್ತಕ, ಮೇಜು, ಮನೆ, ಗಡಿಯಾರ ಇತ್ಯಾದಿ.

V.

21. ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ
--ಬೊಡ್ಡೆ ಕರಿದು ಎಲೆ ಹಸಿರು
ಹೂವು ನಾನಾ ತರತರ
ಎಂಥ ಸೊಗಸು ಏನು ಕಂಪು
ಬೆಳೆದು ನಿಂತ ಗಿಡಮರ

22.ಮನುಷ್ಯನಲ್ಲಿ ಮಾತು ಉಂಟು
ಮಾತಿನಂತೆ ಇಲ್ಲ ಮನ
ಲಿಂಗ ವರ್ಣ ಜಾತಿ ಧರ್ಮ
ಹಾಳು ಕೊಂಪೆ ಇವನ ಮನ

VI.

23.ಸತ್ಯಾನಂದ ಪಾತ್ರೋಟರವರು ರಚಿಸಿದ ನಾಟಕಗಳೆಂದರೆ ನಮಗೆ ಯಾರು ಇಲ್ಲೊ ಎಪ್ಪಾ, ಸಾಕ್ಷಿ, ಮತ್ತೊಬ್ಬ ಏಕಲವ್ಯ.

24. ಕರಿ ನೆಲದ ಕಲೆಗಳು, ಜಾಜಿ ಮಲ್ಲಿಗೆ, ಕಲ್ಲಿಗೂ ಗೊತ್ತಿರುವ ಕಥೆ, ಕರಿಯ ಕಟ್ಟಿದ ಕವನ, ನನ್ನ ಕನಸಿನ ಹುಡುಗಿ, ನದಿಗೊಂದು ಕನಸು ಮತ್ತು ಅವಳು ಇವು ಸತ್ಯಾನಂದ ಪಾತ್ರೋಟರವರು ರಚಿಸಿರುವ ಕವನ ಸಂಕಲನಗಳು.

25. ಮರವು ನೆರಳನ್ನು ನೀಡುತ್ತದೆ, ಹೂವು ಕಾಯಿ ಹಣ್ಣುಗಳನ್ನು ನೀಡುತ್ತದೆ ಮತ್ತು ಹಕ್ಕಿಗಳು ಗೂಡುಕಟ್ಟಲು ಮರಗಳು ಆಶ್ರಯತಾಣವಾಗಿವೆ. ಆಮ್ಲಜನಕವನ್ನು ಒದಗಿಸುತ್ತವೆ. ಮನೆಕಟ್ಟಲು ಮರದ ಭಾಗಗಳು ಬಳಕೆಯಾಗುತ್ತವೆ.

26. ಪ್ರಕೃತಿಯಲ್ಲಿ ಹಲವು ಬಣ್ಣ, ಹಲವು ಆಕಾರ, ಹಲವು ಸ್ವರೂಪದ ಗಿಡಮರಗಳು ಇವೆ.

27. ಭೇದ ಭಾವವನ್ನು ತೊರೆದಾಗ ಸಾರ್ಥಕವಾಗುತ್ತದೆ. ಪರರಿಗೆ ಉಪಕಾರಿಯಾದರೆ ಸಾರ್ಥಕವಾಗುತ್ತದೆ.

28. ಗಿಡಮರಗಳು ಕಾಂಡದ ಭಾಗ ಕಪ್ಪಾಗಿದ್ದರೂ ಹಸಿರಾದ ಎಲೆಗಳು ಮತ್ತು ನಾನಾರೀತಿಯ ಹೂವುಹಣ್ಣುಗಳಿಂದ ಪರಿಸರ ಸುವಾಸನೆಯುಕ್ತವಾಗಿರುತ್ತದೆ. ಯಾರೇ ಬಂದು ಏನೇ ಮಾಡಿದರೂ ಶಾಂತವಾಗಿ ಮೌನವಾಗಿರುತ್ತದೆ. ಗಿಡಮರಗಳ ರೆಂಬೆಕೊಂಬೆಗಳು ಚಿಗುರುವಲ್ಲಿ ಅಪಾರವಾದ ಚೇತನವನ್ನು ಹೊಂದಿ ಹುಮ್ಮಸ್ಸಿನಲ್ಲಿರುತ್ತದೆ. ಆದರೆ ಮನುಷ್ಯನು ಮಾತಿನಂತೆ ನಡೆದುಕೊಳ್ಳದೆ ವರ್ಣ, ಜಾತಿ, ಧರ್ಮಗಳ ಬೇಧಮಾಡುತ್ತಾನೆ. ಗಿಡಮರಗಳು ಈ ವಿಷಯದಲ್ಲಿ ಮನುಷ್ಯನನ್ನು ಮೀರಿ ನಿಲ್ಲುತ್ತವೆ. ಮನುಷ್ಯ ತನ್ನ ಮನಸ್ಸು ಹಾಳುಮಾಡಿಕೊಂಡಿದ್ದಾನೆ. ಗಿಡಮರಗಳು ಋತುಮಾನಗಳ ವೈವಿಧ್ಯವನ್ನು ತಡೆದು ನಿಂತು ಹೂವನ್ನು ಅರಳಿಸುತ್ತಿರುತ್ತದೆ. ಗಿಡಮರಗಳಲ್ಲಿಲ್ಲದ ಭೇದಭಾವ ಮನುಷ್ಯರಲ್ಲಿದ್ದು, ಪರಿಸರವನ್ನು ಹಾಳುಮಾಡುವ ಬದಲಾಗಿ ಉಪಕಾರಿಗಳಾಗಿ ಬದುಕಿದಾಗ ಮನುಷ್ಯನ ಬದುಕು ಸಾರ್ಥಕವಾಗುತ್ತದೆ ಎಂಬುದು ಕವಿಯ ಆಶಯವಾಗಿದೆ.

29.





ಹೋಲಿಕೆ 1. ಗಿಡಕ್ಕೆ ಬೇರಿದೆ ಮತ್ತು ಮರಕ್ಕು ಬೇರಿದೆ.
ಗಿಡದ ಎಲೆ ಬಣ್ಣ ಹಸಿರು ಮತ್ತು ಮರದ ಎಲೆ ಬಣ್ಣ ಹಸಿರು.
ವ್ಯತ್ಯಾಸ 1. ಗಿಡ ಚಿಕ್ಕದು ಆದರೆ ಮರ ದೊಡ್ಡದು.
ಗಿಡಕ್ಕೆ ಕಡಿಮೆ ಜಾಗ ಸಾಕು ಆದರೆ ಮರಕ್ಕೆ ಹೆಚ್ಚು ಜಾಗಬೇಕು.

ಪದ್ಯಭಾಗ -2 ಸ್ವಾತಂತ್ರ್ಯದಹಣತೆ

I.

1. ಕೆಲಸ, ವೃತ್ತಿ
2. ತಲೆ, ಶಿರ
3. ಯುಕ್ತಿ
4. ಪರತಂತ್ರ

II.

5. ಚಂದ್ರಶೇಖರ ಆಜಾದ್, ಮಹಾತ್ಮಗಾಂಧಿ
6. ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಲು ನಾವು ಧೈರ್ಯವಾಗಿ ಹೋರಾಡಬೇಕು.
7. ನಮಗೆ ಸಿಕ್ಕಿರುವ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗಬೇಕು.
8. ದೇಶಕ್ಕಾಗಿ ಹೋರಾಡಿದ ಹುತಾತ್ಮರಿಗೆ ನಾವು ಗೌರವವನ್ನು ಸಲ್ಲಿಸಬೇಕು.

III.

9.ಸ್ವಾತಂತ್ರ್ಯದ ದೀಪವು ಸದಾ ಉರಿಯುವಂತೆ ಮಾಡಲು ನಾವೆಲ್ಲರೂ ಹಗಲಿ ಬಿಡುವಿಲ್ಲದೆ ದುಡಿಮೆ ಮತ್ತು ಹೋರಾಟವೆಂಬ ಎಣ್ಣೆಯನ್ನು ಹಾಕುತ್ತಿರಬೇಕು. ಹೀಗಾದಾಗ ಮಾತ್ರ ನಾವು ನಮ್ಮ ತಾಯ್ನಾಡಿನ ಗೌರವ ಕಡಿಮೆ ಆಗದಂತೆ ಮಾಡಬಹುದು.

10. ನಮಗೆ ಸಿಕ್ಕಿರುವ ಸ್ವಾತಂತ್ರ್ಯವನ್ನು ನಾವು ಧೀರತನದಿಂದ ಮುಳ್ಳಿನಿಂದ ಬಟ್ಟೆ ಬಿಡಿಸಿದಂತೆ, ಹುಲಿಯ ಬಾಯಿಯಿಂದ ಆಹಾರವನ್ನು ಕಸಿದಂತೆ ಕಾಪಾಡಿಕೊಳ್ಳಬೇಕು.

IV.

11. ಕವಿ ನಿಸಾರ್ ಅಹಮದ್ ರವರು 15/2/1936ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದರು. ತಂದೆ ಶೇಕ್ ಹೈದರ್, ತಾಯಿ ಹಮೀದಾಬೇಗಂ. ಭೂಗರ್ಭಶಾಸ್ತ್ರದಲ್ಲಿ ಪದವಿಯನ್ನು ಪಡೆದು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಸೇವೆಯನ್ನು ಪ್ರಾರಂಭಿಸಿದರು. ಇವರು ಮನಸು ಗಾಂಧಿ ಬಜಾರು, ನೆನೆದವರ ಮನದಲ್ಲಿ, ನಿತ್ಯೋತ್ಸವ, ಸುಮೂತ್ರ ಮೊದಲಾದಕೃತಿಗಳನ್ನುರಚಿಸಿದ್ದಾರೆ. ಇವರಿಗೆಪಂಪಪ್ರಶಸ್ತಿ, ನಾಡೋಜಪ್ರಶಸ್ತಿ, ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

12. ಮಗುವಿನ ಆಶಯದಂತೆ ಉತ್ತರಿಸುತ್ತದೆ.

V.

13. ಮಗುವಿನ ವೈಯುಕ್ತಿಕ ಉತ್ತರ.

ಪದ್ಯಭಾಗ -3 ವಚನಗಳು

I.

1.ಬಸವಣ್ಣ

2. ಉಂಬುವ

3. ಅಕ್ಕಮಹಾದೇವಿ

4. ಅರಿವೆಗೆ

5. ಸೊಕ್ಕು

6. ಆಡಿಸು

7. ಅಂತರಂಗ

8.ಸಂಧಿ

9.ಉಣ್ಣುವ

10. ಅಮರೇಶ್ವರ

11.ದೇವರು+ಇಗೆ

12. ಮರಣ

II.

13. ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ

14. ಮನದಲ್ಲಿ ಕೋಪವನ್ನು ಮಾಡಿಕೊಳ್ಳದಿದ್ದಲ್ಲಿ ಸಮಾಧಾನವಾಗಿರಬಹುದು.

15. ಮಹಾದಂಡನಾಯಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ.

16. ಹಳಿ ಪದದ ಅರ್ಥ ನಿಂದಿಸು/ದೂಷಿಸು

III.

17. ಬಡತನಕ್ಕೆ ಉಂಬುವ ಚಿಂತೆ, ಉಣಲಾದರೆ ಉಡುವ ಚಿಂತೆ
ಉಡಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡಿರ ಚಿಂತೆ
ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ
ಬದುಕಾದರೆ ಕೇಡಿನ ಚಿಂತೆ, ಕೇಡಾದರೆ ಮರಣದ ಚಿಂತೆ
ಇಂತೀ ಹಲವು ಚಿಂತೆಯಲಿಪ್ಪವರನು ಕಂಡೆನು
ಶಿವನ ಚಿಂತೆಯಲಿದ್ದವರೊಬ್ಬರನ್ನು ಕಾಣೆನೆಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜ ಶರಣ.

IV.

18. ಎರಡು ಅಕ್ಷರಗಳು ಯಾವುದೇ ಕಾಲ ವಿಳಂಬ ಇಲ್ಲದೆ ಪರಸ್ಪರ ಸೇರುವುದಕ್ಕೆ ಸಂಧಿ ಎನ್ನುವರು.

ಉದಾಹರಣೆ. ಅಂಗಡಿ+ ಇಂದ= ಅಂಗಡಿಯಿಂದ

19. ದೇವರಲ್ಲಿ ಸರಿಯಾದ ಭಕ್ತಿ ಇಲ್ಲದಿದ್ದಲ್ಲಿ ಅಥವಾ ನಾವು ಮಾಡುವ ಯಾವುದೇ ಕೆಲಸದಲ್ಲಿ ಗಟ್ಟಿತನ ಅಥವಾ ದೃಢತೆ ಇಲ್ಲದಿದ್ದಲ್ಲಿ ನಾವು ಮಾಡುವ ಎಲ್ಲಾ ಕೆಲಸಗಳು ಯಾವುದೇ ರೀತಿಯ ಯಶಸ್ಸನ್ನು ಕಾಣುವುದಿಲ್ಲ. ಹಾಗೆಯೇ ದೇವರಲ್ಲಿ ನಂಬಿಕೆ ಇಲ್ಲದೆ ದೇವರನ್ನು ಪೂಜಿಸುವುದು ಒಡೆದ ಮಡಕೆಯಲ್ಲಿ ಅಮೃತವನ್ನು ತುಂಬಿದಂತೆ ಯಾವುದೇ ಪ್ರಯೋಜನವಾಗುವುದಿಲ್ಲ.

20. ಮನುಷ್ಯನಲ್ಲಿ ಬದುಕುವ, ಹಣವನ್ನು ಗಳಿಸಬೇಕೆನ್ನುವ, ಎಲ್ಲವನ್ನು ಪಡೆಯುವ, ಉಣ್ಣುವ, ಉಡುವ ಚಿಂತೆಗಳಿವೆ. ಹಾಗೆಯೇ ಮದುವೆಮಾಡಿಕೊಳ್ಳುವ, ಹೆಂಡತಿಯನ್ನು,ಮಕ್ಕಳನ್ನು ಪಡೆಯುವ ಚಿಂತೆಯೂ ಕೂಡ ಇದೆ. ಜೊತೆಗೆ ಬದುಕಿನಲ್ಲಿ ಏನಾದರೂ ಕೇಡು ಉಂಟಾದಲ್ಲಿ ಮರಣವನ್ನು ಪಡೆಯುವ ಚಿಂತೆ, ಹೀಗೆ ಹಲವು ಚಿಂತೆಗಳು ಮನುಷ್ಯನಲ್ಲಿವೆ.

V.

21.ಬಸವಣ್ಣನವರು ತಮ್ಮ ವಚನದಲ್ಲಿ ಈ ರೀತಿಯಾಗಿ ಅಂತರಂಗಶುದ್ದಿ ಮತ್ತು ಬಹಿರಂಗ ಶುದ್ದಿಗಳ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ಮನುಷ್ಯನಲ್ಲಿ ಕಳ್ಳತನದ ಭಾವನೆ ಕೊಲ್ಲುವ, ಸುಳ್ಳನ್ನು ಹೇಳುವ, ಕೋಪಗೊಳ್ಳುವ, ಬೇರೆಯವರಲ್ಲಿ ಅಸಹ್ಯಪಡುವ ಗುಣಗಳು ಹಾಗೂ ತನ್ನನ್ನು ತಾನು

ಬಣ್ಣಿಸಿಕೊಳ್ಳುವ, ಬೇರೆಯವರನ್ನು ನಿಂದಿಸುವ ಗುಣಗಳನ್ನು ತೊರೆದಲ್ಲಿ ಅಂತರಂಗ ಶುದ್ದಿಯಿಂದ ನಮ್ಮ ಜೀವನವನ್ನು ಸಾರ್ಥಕ ಪಡೆದುಕೊಳ್ಳಬಹುದು ಎಂದು ತಿಳಿಸಿಕೊಟ್ಟಿದ್ದಾರೆ.

22. ಹೊಗಳಿಕೆಗೆ ಹಿಗ್ಗಬಾರದು ತೆಗಳಿಕೆಗೆ ಕುಗ್ಗಬಾರದು. ವೇದ ಸುಳ್ಳಾದರು ಗಾದೆ ಸುಳ್ಳಾಗದು ಎಂಬ ಮಾತಿನಂತೆ ಮನುಷ್ಯನಲ್ಲಿ ಸುಪ್ತವಾಗಿ ಅಡಗಿರುವ ಕೆಲವು ಗುಣಗಳಲ್ಲಿ ತಮ್ಮನ್ನು ಯಾರಾದರೂ ಹೊಗಳಿದಾಗ, ಪ್ರಶಂಸೆ ಮಾಡಿದಾಗ ನಾನೇ ಹೆಚ್ಚು ಎಂಬ ಹೆಗ್ಗಳಿಕೆಗೆ ಹಿಗ್ಗುತ್ತೇವೆ. ಅಂತೆಯೇ ನಮ್ಮ ಕೆಲವು ಕೆಲಸಗಳಲ್ಲಿ ತೊಡಕುಂಟಾಗಿ ಯಾರಾದರೂ ನಮ್ಮನ್ನು ತೆಗಳಿದಾಗ ಕುಗ್ಗಿ ಹೋಗುತ್ತೇವೆ. ಆದರೆ ಅದು ಶಾಶ್ವತವಲ್ಲ ಹಾಗಾಗಿ ನಾವೆಲ್ಲರೂ ಹೊಗಳಿದಾಗ ಹಿಗ್ಗದೇ ತೆಗಳಿದಾಗ ಕುಗ್ಗದೆ ಒಂದೇ ಸಮಭಾವದಲ್ಲಿ ಇರಬೇಕು.

VI.

23. ಮೂರ್ಖನಿಗೆ ಬುದ್ದಿಯನ್ನು ನೂರ್ಕಾಲ ಪೇಳಿದರು
ಗೋರ್ಕಲ್ಲ ಮೇಲೆ ಮಳೆಗರೆದರೆ
ಆ ಕಲ್ಲು ನೀರು ಕುಡಿಯುವುದೇ ಸರ್ವಜ್ಞ
ಅನ್ನವನ್ನು ಇಕ್ಕುವುದು ನನ್ನೀಯನು ನುಡಿಯುವುದು
ತನ್ನಂತೆ ಪರರದ ಬಗೆದೊಡೆ
ಕೈಲಾಸ ಬಿನ್ನಾಣವಕ್ಕೂ ಸರ್ವಜ್ಞ

24. ಬಸವಣ್ಣ: ಶಿವಶರಣ ಬಸವಣ್ಣ ಅವರು ಸುಮಾರು 12ನೇ ಶತಮಾನದ ವಚನಕಾರರು ಮತ್ತು ಸಮಾಜಸುಧಾರಕರು ಇವರು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ಜನಿಸಿದರು. ಇವರು ಕಳಚೂರಿವಂಶದ ಬಿಜ್ಜಳನ ಆಸ್ಥಾನದಲ್ಲಿ ಬಂಡಾರಿಯಾಗಿ ರಾಜ್ಯದ ಮಹಾದಂಡನಾಯಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಕೂಡಲಸಂಗಮದೇವ ಅಂಕಿತದಿಂದ ರಚಿಸಿರುವ ಇವರ ಸಾವಿರಾರು ವಚನಗಳು ದೊರೆತಿವೆ.

ಅಕ್ಕಮಹಾದೇವಿ: ಶಿವಶರಣೆ ಅಕ್ಕಮಹಾದೇವಿ ಅವರು ಸುಮಾರು 12ನೇ ಶತಮಾನದಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಉಡುತಡಿಗ್ರಾಮದಲ್ಲಿ ಜನಿಸಿದರು. ಇವರು ಒಬ್ಬ ಶ್ರೇಷ್ಠ ವಚನಗಾರ್ತಿ ಹಾಗೂ ಕವಯತ್ರಿ ಇವರ 434 ವಚನಗಳು ಲಭ್ಯವಾಗಿವೆ. ಇವರ ಬರವಣಿಗೆಯು ಗೀತಾತ್ಮಕವಾದುದ್ದು.ಜೀವನದ ನೋವು ನಲಿವು ಆಧ್ಯಾತ್ಮಿಕ ನಿಲುವು ಅವರ ಅಭಿವ್ಯಕ್ತಿಯ ವೈಶಿಷ್ಟಗಳಾಗಿವೆ. ಚೆನ್ನಮಲ್ಲಿಕಾರ್ಜುನ ಎಂಬುದು ಇವರ ವಚನಗಳ ಅಂಕಿತವಾಗಿದೆ.

ಆಯ್ದಕ್ಕಿ ಲಕ್ಕಮ್ಮ: ಶಿವಶರಣೆ ಆಯ್ದಕ್ಕಿ ಲಕ್ಕಮ್ಮ ಅವರು ಸುಮಾರು 12ನೇ ಶತಮಾನದ ವಚನಕಾರ್ತಿ ಹಾಗೂ ಕಾಯಕಯೋಗಿ ಬಸವಣ್ಣ ಅವರ ಸಮಕಾಲಿನರು ಕಾಯಕಯೋಗಿ ಆಯ್ದಕ್ಕಿಮಾರಯ್ಯ ಅವರಧರ್ಮಪತ್ನಿ ಇವರು ಮೂಲತಃ ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲೂಕಿನ ಅಮರೇಶ್ವರ ಎಂಬ ಗ್ರಾಮದವರು ಬಸವಣ್ಣ ಅವರ ಕೀರ್ತನೆಯನ್ನು ಕೇಳಿದ ಇವರು ಕಲ್ಯಾಣಕ್ಕೆ ಬಂದು ನೆಲೆಸುತ್ತಾರೆ. ಮಹಾಮನೆಯ ಅಂಗಳದಲ್ಲಿ ಅಕ್ಕಿಯನ್ನು ಆಯ್ದು ಜಂಗಮ ದಾಸೋಹವನ್ನು ನಡೆಸುತ್ತಿದ್ದರು. ಮಾರಯ್ಯ ಪ್ರಿಯ ಅಮರೇಶ್ವರ ಲಿಂಗ ಎಂಬುದು ಇವರ ವಚನಗಳ ಅಂಕಿತವಾಗಿದೆ.

ಅಂಬಿಗರಚೌಡಯ್ಯ: ಶಿವಶರಣ ಅಂಬಿಗರ ಚೌಡಯ್ಯ ಅವರು ಸುಮಾರು 12ನೇ ಶತಮಾನದ ಪ್ರಸಿದ್ಧ ವಚನಕಾರರು ಮತ್ತು ಸಮಾಜ ಸುಧಾರಕರು ಇವರು ಗುತ್ತಲರ ಅರಸರ ಆಳ್ವಿಕೆ ಕಾಲದಲ್ಲಿ ಚೌಡದಾನಪುರದ ತುಂಗಭದ್ರ ನದಿ ತೀರದಲ್ಲಿ ತನ್ನ ದೋಣಿಯ ಮೂಲಕ ಜನರನ್ನು ಒಂದು ದಡದಿಂದ ಇನ್ನೊಂದು ದಡಕ್ಕೆ ಸಾಗಿಸುವ ಕಾಯಕದಲ್ಲಿ ನಿರತರಾಗಿದ್ದರು. ಸಮಾಜ ಚಿಂತನೆಯ ಮೂಲಕ ಜನತೆಯ ಒಳಿತನ್ನು ಬಯಸಿದ ವಚನಗಳನ್ನು ರಚಿಸುವುದರ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತ 278 ಅವುಗಳಲ್ಲಿ ಚೌಡಯ್ಯ ಅವರ ಅಂತರಾಳದ ಅನುಭವ ಸಮಾಜದಲ್ಲಿ ತಾವು ಕಂಡು ಉಂಡ ಅನುಭವಗಳನ್ನು ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ. ಇವರ ಅಂಕಿತನಾಮ ಅಂಬಿಗರ ಚೌಡಯ್ಯ ಎಂಬುದಾಗಿದೆ.

ಪದ್ಯಭಾಗ -4 ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ

I.
1. ಆಶ್ರಯ
2. ಚಂಪ
3. ನಿತ್ಯ
4. ನಮ್ಮ + ಎಲ್ಲರ

II.
5. ನಮ್ಮ ನಾಡು ಕನ್ನಡ ನಾಡು
6. ನಮ್ಮ ನುಡಿ ಕನ್ನಡ.
7. ಕನ್ನಡ ಬಾಳಿಗೆ ಅನ್ನ ಕೊಡುವ ಭಾಷೆಯಾಗಬೇಕು.
8. ಕವಿ ಸಿರಿನಾಡನ್ನು ಕಟ್ಟಲು ಬಯಸುತ್ತಾರೆ.
9. ಅಕ್ಷರಗಳ ಕನ್ನ ಕೊರೆದು ಅರಿವು ಬರುತ್ತದೆ.
10. ಪ್ರೀತಿಯ ಬೆಳದಿಂಗಳು ಎದೆಯ ತುಂಬಿ ತುಳುಕಬೇಕು.

III.
11. ದಿನಕರ, ಸೂರ್ಯ, ಗಗನದೀಪ, ಆದಿತ್ಯ, ರವಿ, ಭಾನು.
12. ಕನ್ನಡ - ಸಂಗಡ
ಹೊಟ್ಟೆಗನ್ನ - ಚಿನ್ನ
ಆಸರ - ನೇಸರ
ಕಂಗಳು - ಬೆಳದಿಂಗಳು
13. ವೈಯುಕ್ತಿಕ ಉತ್ತರ
14. ಆಶಯ - ಪೂರ್ವಪದ
ಆಗಿದೆ - ಉತ್ತರಪದ.

IV.
15. ವೈಯುಕ್ತಿಕ ಉತ್ತರ
16. 1) ಕುವೆಂಪು 2) ದರಾ ಬೇಂದ್ರೆ
3) ಕೋಟಾ ಶಿವರಾಮ ಕಾರಂತ 4) ಮಾಸ್ತಿ ವೆಂಕಟೇಶ ಅಯ್ಯಂಗಾರ್
5) ವಿನಾಯಕ ಕೃಷ್ಣ ಗೋಕಾಕ್ 6) ಯು ಆರ್ ಅನಂತಮೂರ್ತಿ
7) ಗಿರೀಶ್ ಕಾರ್ನಾಡ್ 8) ಚಂದ್ರಶೇಖರ ಕಂಬಾರ
17. ವೈಯುಕ್ತಿಕ ಉತ್ತರ
18. 1) ಕನ್ನಡದ ಮೊದಲ ಪತ್ರಿಕೆ ಮಂಗಳೂರು ಸಮಾಚಾರ
2) ಕನ್ನಡದ ಮೊದಲ ಕವಿ ಪಂಪ
3) ಕನ್ನಡದ ಮೊದಲ ಕೃತಿ ವಡ್ಡಾರಾಧನೆ
4) ಕನ್ನಡದ ಮೊದಲ ಕವಿಯತ್ರಿ ಅಕ್ಕಮಹಾದೇವಿ.

ಪದ್ಯಭಾಗ -5 ಕರಡಿಕುಣಿತ

I.

1.ಆದೇಶ ಸಂಧಿ

2. ಅಂಬಿಕಾತನಯದತ್ತ

3. ನೇರಳೆಹಣ್ಣು

4. ಎ

II.

5. ಕೋತಿ

6. 'ಧಣಿಯರ ಮನಿ ಮುಂದ ಕಾವಲು ಮಾಡಣ್ಣ ಧಣಿ ದಾನ ಕೊಡುವನು ಅಂದಾನ'.

7. ಸವರ್ಣದೀರ್ಘಸಂಧಿ

8. ಊರು+ಎಲ್ಲ

9. ಕಣ್ಣಾವಲು

10. ಕಷ್ಟದ ಕಾಲದಲ್ಲಿ ನನ್ನ ಗೆಳೆಯ ಪರಮಾತ್ಮನಂತೆ ಸಹಾಯಕ್ಕೆ ಬಂದನು.

11. ಕೃಷ್ಣ

III.

12. ಕರಡಿಯು ರಾಮಕೃಷ್ಣ ಕಲ್ಕಿಯನ್ನು ಕಂಡಿದೆ.

13. ಜಾಂಬುನದಿಯ ದಡದ ಮೇಲೆ ನೇರಳೆ ಮರ ಇದೆ.

14. ಕರಡಿಯ ಕೂದಲಿನ ಭೀಮ ರಕ್ಷ ಬಲವನ್ನು ಮಕ್ಕಳ ಕೊರಳಿಗೆ ಕಟ್ಟುತ್ತೇನೆ ಎಂದು ಕೂಗುತ್ತಿದ್ದಾನೆ.

15. ದಾನ ನೀಡಿದವರು ಹೊಟ್ಟೆ ತಣ್ಣಗಾಗಲಿ ಎಂದು ಕರಡಿಯು ಹಾರೈಸುತ್ತದೆ.

16. ದ ರಾಬೇಂದ್ರೆಯವರ ನಾಕುತಂತಿ ಕವನ ಸಂಕಲನಕ್ಕೆ ಭಾರತೀಯ ಜ್ಞಾನಪೀಠಪ್ರಶಸ್ತಿ ಲಭಿಸಿದೆ.

17. ಮಾನವನ ಬುದ್ಧಿಯ ಕುಣಿತ ಎಲ್ಲಾ ಪ್ರಾಣಿಗಳ ಕುಣಿತಕ್ಕಿಂತ ಮಿಗಿಲಾದದ್ದು ಎಂಬ ತತ್ವವನ್ನು ಈ ಪದ್ಯ ಸಾರುತ್ತದೆ.

18. ಪ್ರಾಣಿ ಸಂಗ್ರಹಾಲಯ ವನ್ಯ ಸಂರಕ್ಷಣಾ ಸ್ಥಳಗಳಲ್ಲಿ ಈ ಸೂಕ್ತಿಯನ್ನು ಗಮನಿಸುತ್ತೇವೆ.

IV

19. ಕರಡಿಗೆ ಜೇನುತುಪ್ಪ, ಹಲಸಿನಹಣ್ಣು, ನೇರಳೆಹಣ್ಣು, ಮುಂತಾದ, ಆಹಾರಪದಾರ್ಥಗಳು, ಬಲು ಇಷ್ಟ.

20. ಮನುಷ್ಯರು ತನ್ನ ಸ್ವಾರ್ಥಕೋಸ್ಕರ ಪ್ರಾಣಿಗಳ ಸ್ವತಂತ್ರವನ್ನು ಕಸಿದುಕೊಂಡು ತಮಗೆ ಹೇಗೆ ಬೇಕೋ ಹಾಗೆ ಕೊಡಿಸುತ್ತಿದ್ದಾರೆ ಎಂಬ ಭಾವಾರ್ಥವನ್ನು ಹೊಂದಿದೆ.

21. ಕನ್ನಡ ಪದಗಳು ಪರಸ್ಪರ ಸೇರಿ ಸಂಧಿಕಾರ್ಯ ನಡೆಯುವುದನ್ನು ಕನ್ನಡ ಸಂಧಿ ಎಂದು ಕರೆಯುತ್ತೇವೆ.

1. ಲೋಪಸಂಧಿ
2. ಆಗಮಸಂಧಿ
3. ಆದೇಶಸಂಧಿ

22. ದ ರಾ ಬೇಂದ್ರೆಯವರಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

V.

23. ಕರಡಿ ಆಡಿಸುವವನು ಕರಡಿಯನ್ನು ಕರೆದುಕೊಂಡು ನಿಮ್ಮ ಮನೆಯ ಬಾಗಿಲಿಗೆ ಬಂದಿದ್ದಾನೆ. ನಿಮ್ಮ ಮನೆಯ ಮಕ್ಕಳನ್ನು ಕರೆದುಕೊಂಡು ಬನ್ನಿ. ಮಗುವಿನಲ್ಲಿರುವ ಅಂಜಿಕೆ ಭಯವನ್ನು ಈ ಕರಡಿಯ ಕೂದಲಿನಿಂದ ಮಾಡಿರುವ ಭೀಮ ರಕ್ಷ ಬಲವನ್ನು ಹೊಂದಿರುವ ಈ ತಾಯಿತನವನ್ನು ಮಕ್ಕಳ ಕೊರಳಿಗೆ ಕಟ್ಟಿದರೆ ಅವನಿಗೆ ಬಲ ಬರುತ್ತದೆ.

24. ಮಕ್ಕಳ ಬರವಣಿಗೆಯ ಮೆಲೆ ಅಂಕಗಳನ್ನು ನೀಡುವುದು.

ಪದ್ಯಭಾಗ -6 ಮಗುವಿನ ಮೊರೆ

I.

1.

ಎ. ಬಾಳ ಹಣತೆ
ಬಿ.ಬಾಳ ಒರತೆ
ಸಿ. ಬಾಳ ಹೂವು
ಡಿ.ಬಾಳ ನಾವೆ

II.

2. ಬರೆಯುತ್ತಾನೆ
3. ಓಡುತ್ತಾನೆ
4. ಆಡುತ್ತಾನೆ

III.

5. ನೀರು ಜಿನುಗುವ ತಗ್ಗು
6. ದೀಪ

IV.

7.ಎಳೆಯುವವು
8.ದುಡಿಯುವನು

V. 9. ಉರಿಯಲಿಲ್ಲ ಆರಲಿಲ್ಲ
ಬಹಳ ಹಣತೆ ಹೇ ಪ್ರಭು
ಬತ್ತಲಿಲ್ಲ ತುಂಬಲಿಲ್ಲ
ಬಾಳ ಒರತೆ ಹೇ ವಿಬೋ

VI.

10.ಬಾಳ ಹಣತೆ
11. ಬಾಳಹೊರತೆ
12.ಬಾಳ ನಾವೇ
13.ಬಾಳ ಹೂವು
14. ಬದುಕಿಗೊಂದು ಅರ್ಥ ತೋರಿ ಎಂದು ಹಾಡಿಕೊಳ್ಳಬೇಕು.
15. ಮಗುವಿನ ಮೊರೆ ಈ ಪದ್ಯವನ್ನು ಬರೆದ ಕವಿ ಸಿದ್ದಯ್ಯ ಪುರಾಣಿಕ.

VII.

16. ವೇದ ಸುಳ್ಳಾದರು ಗಾದೆ ಸುಳ್ಳಾಗದು
ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ
ಕೈಕೆಸರಾದರೆ ಬಾಯಿ ಮೊಸರು
ಮನಸಿದ್ದರೆ ಮಾರ್ಗ

17. ಮನುಷ್ಯರಾಗಿ ಹುಟ್ಟಿದ ಮೇಲೆ ವ್ಯರ್ಥವಾಗಿ ಬದುಕದೆ ಏನನ್ನಾದರೂ ಸಾಧಿಸಬೇಕು. ಆ ನಿಟ್ಟಿನಲ್ಲಿ ನಮ್ಮ ಪ್ರಯತ್ನ ಸದಾ ಇರಬೇಕು. ನಮ್ಮ ಜೀವನದಲ್ಲಿ ಒಂದು ಗುರಿ ಇರಬೇಕು, ಆ ಗುರಿಯನ್ನು ಸಾಧಿಸುವತ್ತ ನಮ್ಮ ಪಯಣ ಸಾಗಬೇಕು. ನಾವು ಇದ್ದಂತೆ ಇರುವುದರಿಂದ ನಮಗೂ ಉಪಯೋಗವಿಲ್ಲ. ಸಮಾಜಕ್ಕೂ ಉಪಯೋಗವಿಲ್ಲ ಎಂಬಂತಾಗುತ್ತದೆ.

18.ನಾನು ಬೆಳೆದು ದೊಡ್ಡವನಾದ ನಂತರ ಸೈನಿಕನಾಗಬೇಕೆಂದು ಬಯಸುವೆ .ಏಕೆಂದರೆ ಸೇನೆಗೆ ಸೇರಿ ನಾನು ದೇಶಸೇವೆ ಮಾಡಲು ಇಷ್ಟಪಡುತ್ತೇನೆ.

19. ನನ್ನ ಕುಟುಂಬದಲ್ಲಿ ನನಗೆ ಇಷ್ಟವಾದ ವ್ಯಕ್ತಿ ನನ್ನ ತಂದೆ. ಏಕೆಂದರೆ ಅವರು ರೈತರಾಗಿದ್ದಾರೆ. ನಮ್ಮ ಅಪ್ಪ ಹೊಲದಲ್ಲಿ ಗದ್ದೆಯಲ್ಲಿ ಕಷ್ಟಪಟ್ಟು ದುಡಿದು ಬೆಳೆಯನ್ನು ಬೆಳೆದು ನಮ್ಮನ್ನು ಸಾಕುತ್ತಿದ್ದಾರೆ. ನಮಗೆ ಒಳ್ಳೆಯ ಶಿಕ್ಷಣವನ್ನು ಕೊಡಿಸುತ್ತಿದ್ದಾರೆ. ರೈತರು ನಮ್ಮ ದೇಶದ ಬೆನ್ನೆಲುಬಾಗಿದ್ದಾರೆ. ಅವರು ನಮಗೆ ಅನ್ನವನ್ನು ನೀಡುತ್ತಾರೆ. ಆದ್ದರಿಂದ ಅವರು ನನಗೆ ಇಷ್ಟವಾಗುತ್ತಾರೆ.

20. ಹೌದು ತಿಳಿದಿದೆ. ಅಬ್ದುಲ್ ಕಲಾಂ – ವಿಜ್ಞಾನ ಕ್ಷೇತ್ರ, ರತನ್ ಟಾಟ - ಕೈಗಾರಿಕೋದ್ಯಮ , ಮದರ್‌ತೆರೇಸಾ - ಸಮಾಜಸೇವೆ, ಅಂಬೇಡ್ಕರ್ - ರಾಜಕೀಯ, ಸ್ವಾಮಿ ವಿವೇಕಾನಂದ – ಆಧ್ಯಾತ್ಮಿಕ ಕ್ಷೇತ್ರ.

21. ಅಬ್ದುಲ್ ಕಲಾಂ, ಇವರು ಭಾರತದ ಮಾಜಿ ರಾಷ್ಟ್ರಪತಿಗಳಾಗಿದ್ದರು ಹಾಗೂ ಒಬ್ಬ ಮಹಾನ್ ವಿಜ್ಞಾನಿಯಾಗಿದ್ದರು. ಇವರು ಬಡತನದಲ್ಲಿ ಬೆಳೆದವರು, ಬಾಲ್ಯದಲ್ಲಿ ಪತ್ರಿಕೆ ವಿತರಿಸುವ ಕೆಲಸ ಮಾಡುತ್ತಿದ್ದರು. ಕಷ್ಟಪಟ್ಟು ಮುಂದೆ ಬಂದು ಇವರು ಭಾರತೀಯ ವಿಜ್ಞಾನ ಕ್ಷೇತ್ರಕ್ಕೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ.

VIII.

22. ಹಣತೆ ತಾನು ಉರಿದು ಜಗಕೆಲ್ಲ ಬೆಳಕನ್ನು ನೀಡುವಂತೆ ನಮ್ಮ ಜೀವನವಿರಬೇಕು. ದೀಪ ಉರಿಯದೆ ಇದ್ದರೆ ಯಾರಿಗೂ ಪ್ರಯೋಜನವಿಲ್ಲ. ಅಂತೆಯೇ ನಮ್ಮ ಜೀವನ ನಮ್ಮ ಜೀವನ ಇತರರಿಗೆ ಉಪಯೋಗವಾಗುವಂತೆ ಇರಬೇಕು. ನಮ್ಮ ಜೀವನ ತುಂಬಿ ಹರಿಯುವ ನದಿಯಂತೆ ಇರಬೇಕು. ತುಂಬಿ ಹರಿಯುವ ನದಿ ನೂರಾರು ಜನರ ಜೀವನಕ್ಕೆ ಆಧಾರವಾಗುವಂತೆ ನಮ್ಮ ಜೀವನ ಇತರರಿಗೆ ಆಧಾರವಾಗಿರಬೇಕು ಹೊರತು ನಿಂತ ನೀರಿನಂತೆ ಆಗಬಾರದು. ಮರಳುಗಾಡಿನಲ್ಲಿರುವ ಕೊರತೆಯಲ್ಲಿ ನೀರಿದ್ದರೆ ಮಾತ್ರ ಉಪಯೋಗ ಇಲ್ಲದೆ ಇದ್ದರೆ ಅದರಿಂದ ಲಾಭವಾದರೆ ಏನು? ಹರಳುವ ಹೂವಿನಂತೆ ನಮ್ಮ ಬದುಕಿನ ಹೂವು ಅರಳುತ್ತಿರಬೇಕು ಆಗಲೇ ಅರಳಿದ ಹೂವಿನಂತೆ ನಮ್ಮ ಬದುಕಿಗೆ ಒಂದು ಬೆಲೆ ಇರುತ್ತದೆ. ಹೂ ಅರಳದಿದ್ದರೆ ಯಾರಿಗೂ ಪ್ರಯೋಜನವಿಲ್ಲ. ಆದ್ದರಿಂದ ಅರಳಿದ ಹೂವಿನಂತೆ ನಮ್ಮ ಬದುಕು ಆಗಬೇಕು.

23. ನೀರಿನಲ್ಲಿ ದೋಣಿ ಮುಂದೆ ಸಾಗಿದರೆ ಮಾತ್ರ ದಡ ತಲುಪಲು ಸಾಧ್ಯ. ನಿಂತಲ್ಲೇ ನಿಂತರೆ ದಡ ಮುಟ್ಟಲು ಸಾಧ್ಯವಿಲ್ಲ. ಅದರಂತೆ ನಮ್ಮ ಜೀವನನೌಕೆ ದಡಸೇರಬೇಕೆಂದರೆ ಗುರಿಯೊಂದಿಗೆ ಮುಂದೆ ಸಾಗಬೇಕು. ನಮ್ಮ ಬದುಕು ಬರಿ ಮೊಟ್ಟೆ ಇಟ್ಟು ಬೇಸರಪಡುವಂತೆ ಆಗಬಾರದು. ನಮ್ಮ ಇರುವಿಕೆಗೊಂದು ಅರ್ಥಕೊಡು, ಜೀವನಕ್ಕೊಂದು ಗುರಿತೋರಿಸು ಎಂದು ಆ ದೇವರಲ್ಲಿ ಬೇಡಿಕೊಳ್ಳಬೇಕು.

ಪದ್ಯಭಾಗ-7 ಮೂಡಲಮನೆ

I. 1 ಎಲ್ಲಿದೆ ಶಿವಪುರ

II. 2. ತೊಗಲು ಗೊಂಬೆಯಾಟ

3.ವಲಸಿಗ

III. 4. ಮೇಲೆ

5. ಬಿಸಿಲು

6. ತಪಸ್ಸು

7. ಭೂತಕಾಲ

8. ಒಳಗ- ಬಳಗ, ಒಡೆಯುತಾವ -ಕುಣಿಯುತಾವ

IV. 9. ಗೂಡಿನಲ್ಲಿ ಮಲಗಿದೆ ಮರಿ ಹಕ್ಕಿ

10. ಬಾವಿಯ ಸ್ವಳದ ನೀರಿನಲ್ಲಿ ಹಸಿರು ಚಿಗುರುತದೆ.

11. ತೊಗಲು ಗೊಂಬೆಯಾಟವು ಕರುಳ ಬಳ್ಳಿಯ ಕಥೆ ಹೇಳುತ್ತದೆ.

12. ಭಾರತ ಮಾತೆಯೆಂಬ ಒಂದೇ ಮರದಡಿ ನೆಲೆಸಿರುವ ವಿವಿಧ ಜಾತಿಮತಗಳೆಂಬ ಭೂತ ಬೇತಾಳಗಳು ಹಾಗೂ ಮರದ ಕೊಂಬೆಗಳಲ್ಲಿ ನೇತಾಡುವ ಬಾವಲಿಗಳನ್ನು ಕಂಡು ಕವಿಯು ಕರಗ ಕುಣಿಯುವುದಕ್ಕೆ ಹೋಲಿಸಿದ್ದಾರೆ.

ಪದ್ಯಭಾಗ 8: ಭುವನೇಶ್ವರಿ

I. 1) ಸಿ
2)ಸಿ
3) ಬಿ
4) ಬಿ
5) ಡಿ
6) ಬಿ

II.
7) ಕದಂಬ ಮಯೂರ ವೀರಪುರುಷ. ಅವನು ಬನವಾಸಿಯಲ್ಲಿ ಆಳಿದನು.
8) ಪೈರು, ಬೆಳವಣಿಗೆ
9) "ಕನ್ನಡ ಗೆಲ್ಲಲಿ ಕನ್ನಡ ಬಾಳಲಿ "ನಮ್ಮ ಕನ್ನಡ ನೆಲದಲ್ಲಿ.
10)ಆಳುವನು
11)ಪುಸ್ತಕಗಳು
12)ಹೋರಾಡಿದನು
13)ಮನೆಯನ್ನು

III.
14) ಹೆಮ್ಮೆ.
15) ಹಾರಿತು.
16) ಭಾವನೆ.
17) ಆಳ್ವಿಕೆ.
18) ವಿಷಯ.

IV 19)
ಎ)!
ಬಿ).
ಸಿ) " "
ಡಿ) '
ಇ)?
ಎಫ್) =
ಜಿ):-

V.
20) ಇಳೆ
21) ಮಾತೃಶ್ರೀ
22) ಬಿ ವಿ ಸತ್ಯನಾರಾಯಣ ರವ್
23) ಪರತಂತ್ರ
24) ಪೋಷಿಸು

VI.
25) ಮೊಳೆ
26) ಗೆಲ್ಲು
27) ಮಾಡು
28) ಬರು

29) ಬರೆ

VII.

30) ಭುವನೇಶ್ವರಿ ಪದ್ಯದ ರಚನಕಾರರು ಬಿ ವಿ ಸತ್ಯನಾರಾಯಣ ರಾವ್.
31) ಕನ್ನಡ ನಾಡಿನ ಸೊಬಗನ್ನು ಮಕ್ಕಳು ಹೆಮ್ಮೆಯಿಂದ ಕೇಳಬೇಕು.
32) ಮೈಸೂರಿನ ಹುಲಿ ಎಂದು ಟಿಪ್ಪು ಸುಲ್ತಾನನನ್ನು ಕರೆಯುತ್ತಾರೆ.
33) ಬ್ರಿಟಿಷರ ವಿರುದ್ಧ ಹೋರಾಡಿದಳು
34) ರಾಜರ ಅಂತಕಲಹದಿ ಬಿಳಿಯರು ಭಾರತವನ್ನು ನುಂಗಿದರು.
35) ಕೆಳದಿಯ ವೈಭವ ಕನ್ನಡ ಮಾತೆಯ ನಿಜಗರಿಮೆ.
36) ಲೋಕವೇ ಬೆರಗಾಗುವ ಸಿರಿ ಸಂಪದ ವಿಜಯನಗರ ಸಾಮ್ರಾಜ್ಯದಲ್ಲಿ ಮೆರೆಯಿತು.
37) ಸ್ವದೇಶೀ ಚಳುವಳಿ ಗಾಂಧಿ ತತ್ವದಲ್ಲಿ ಪ್ರಾರಂಭಗೊಂಡಿತು
38) 1947ರಲ್ಲಿ ಭಾರತ ಸ್ವಾತಂತ್ರ್ಯಗೊಂಡಿತು.
39) 1973 ಕ್ಕಿಂತ ಮುಂಚೆ ಕರ್ನಾಟಕವನ್ನು ಮೈಸೂರು ಎಂದು ಕರೆಯುತ್ತಿದ್ದರು.
40) ಕನ್ನಡದ ಮೊದಲ ಶಾಸನ ಹಲ್ಮಿಡಿ ಶಾಸನ.
41) ಹೊಯ್ಸಳರ ರಾಜಧಾನಿ ದ್ವಾರಸಮುದ್ರ.
42) ಕನ್ನಡದ ಮೊದಲ ರಾಜಮನೆತನ ಕದಂಬ ಮನೆತನ.
43) ಜ್ಞಾನಪೀಠ ಪ್ರಶಸ್ತಿಯನ್ನು ಪಡೆದ ಮೊಟ್ಟ ಮೊದಲಿಗರು ರಾಷ್ಟ್ರಕವಿ ಕುವೆಂಪು.

VIII.

44) ಇಂದು ಮುಸ್ಲಿಂ ಕ್ರೈಸ್ತ ಜೈನ ಬಸವೇಶ್ವರರ ಸಿರಿಪಂಥದಲ್ಲಿ ನಡೆಯಬೇಕು.
45) ಗಾಂಧೀಜಿಯವರ ಮಾರ್ಗದರ್ಶನದಲ್ಲಿ ಸ್ವದೇಶಿ ಮತ್ತು ಅಸಹಕಾರ ಚಳುವಳಿಗಳು ಮೊಳೆತವು.
46)ವಿಜಯನಗರ ಸಾಮ್ರಾಜ್ಯದ ಸ್ಥಾಪಕರು ಹಕ್ಕಬುಕ್ಕರು. ಇವರು ವಿದ್ಯಾರಣ್ಯರ ಸಹಾಯದಿಂದ ಸ್ಥಾಪಿಸಿದರು.

IX.

47) ಭುವನೇಶ್ವರಿ ಪದ ಪೂಜಿಸಿ ಹೇಳುವೆ ಸಿಡಿಗನ್ನಡ ವರ ಚರಿತೆಯನು। ಕನ್ನಡ ನಾಡಿನ ಹೆಮ್ಮೆಯ ಮಕ್ಕಳಿಗೆ ಕೇಳಿರಿ ನಾಡಿನ ಸೊಬಕನ್ನು ಗೆದ್ದು ಪಲ್ಲವರ ಕದಂಬ ಮಯೂರ ಮೆರೆದನು ವರ ಬನವಾಸಿಯಲಿ। ತದನಂತರ ಚಾಳಕ್ಯರ ಆಳ್ವಿಕೆ ವೀರತಾಣ ಬಾದಾಮಿಯಲ್ಲಿ

X.

48) ಕನ್ನಡ ನಾಡು ನುಡಿಯ ಬಗ್ಗೆ ಗೆಳೆಯರಲ್ಲಿ ಪ್ರೀತಿ ಮತ್ತು ಅಭಿಮಾನವನ್ನು ಮೂಡಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ನಮ್ಮ ನಾಡಿನ ಇತಿಹಾಸ, ಆಳಿದಪರಾಕ್ರಮಿಗಳು, ನಾಡನ್ನು ಕಟ್ಟಲು ಶ್ರಮಿಸಿದ ನೇತಾರರು, ಇಲ್ಲಿನ ಶಿಲ್ಪಕಲೆ, ಸಂಸ್ಕೃತಿ ಮುಂತಾದ ಪರಂಪರೆಯನ್ನು, ಅದರ ಶ್ರೀಮಂತಿಕೆಯನ್ನು ಮಕ್ಕಳಿಗೆ ಅರ್ಥಮಾಡಿಸುವ ಮೂಲಕ ಅವರೆಲ್ಲರಲ್ಲೂ ನಾವು ಎಂತಹ ಪರಂಪರೆಯ ವಾರಸುದಾರರಾಗಿದ್ದೇವೆಂಬ ಬಗ್ಗೆ ಹೆಮ್ಮೆ ಮೂಡಿಸುವ ಆಶಯವನ್ನು ಕವಿಯು ಹೊಂದಿದ್ದಾರೆ.

XI.

49) ಬೇಡನು ಬೀಸಿದ__ ಗೆ __ ಯೊಂದು __ ಕಾಳುಗಳ __ ಗೆ__ ಬಂದು ಸಿಲುಕಿಕೊಂಡಿತು. ______ ದಿಂದ ಗಾಬರಿಗೊಂಡ __ಯನ್ನು ರಕ್ಷಿಸಲು ____ಗಳು ಸಹಾಯ ಮಾಡಿದವು. ಒಗ್ಗಟ್ಟಿನ___ ತಪ್ಪಿಸಿಕೊಂಡ ಹಕ್ಕಿಯು___ ದಿಂದ__ ಗೂಡುಸೇರಿತು.

XII.

50) ಕನ್ನಡ ನಾಡು ಕರುನಾಡು। ಶಿಲ್ಪಕಲೆಗಳ ಧರೆ ನೋಡು.
ಚೆಲುವಿಗೆ ತವರು ಕರುನಾಡು ಭವ್ಯಪರಂಪರೆ ನೆಲೆಬೀಡು.

XIII.

51) ಮಹಾತ್ಮ ಗಾಂಧೀಜಿ ಅವರು 1869 ಅಕ್ಟೋಬರ್ 2 ರಂದು ಜನಿಸಿದರು. ಇವರ ಜನ್ಮಸ್ಥಳ ಗುಜರಾತಿನ ಪೋರಬಂದರು. ಇವರ ತಂದೆ ಕರಮಚಂದಗಾಂಧಿ ಮತ್ತು ತಾಯಿ ಪುತಲಿಬಾಯಿ. ಇವರ

ಪತ್ನಿ ಕಸ್ತೂರಿಬಾ ಗಾಂಧೀಜಿಯವರನ್ನು ಮಕ್ಕಳು ಪ್ರೀತಿಯಿಂದ ಬಾಪೂಜಿ ಎಂದು ಕರೆಯುತ್ತಾರೆ. ಗಾಂಧೀಜಿಯವರು ಸ್ವತಂತ್ರಕ್ಕಾಗಿ ಹೋರಾಡಿದರು. ಸಹಕಾರ ಚಳುವಳಿ ಸ್ವದೇಶಿ ಚಳುವಳಿಗಳನ್ನು ಮಾಡಿದರು.

52) ಕಿತ್ತೂರು ರಾಣಿ ಚೆನ್ನಮ್ಮ 1778 ನವೆಂಬರ್ 14ರಂದು ಜನಿಸಿದರು. ಇವರ ಜನ್ಮಸ್ಥಳ ಬೆಳಗಾವಿ ಜಿಲ್ಲೆಯ ಕಾಕತಿ ರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡಿದಳು. ಚೆನ್ನಮ್ಮಳ ತಂದೆ ದೂಳಪ್ಪದೇಸಾಯಿ, ತಾಯಿ ಪದ್ಮಾವತಿ ಬ್ರಿಟಿಷರ ವಿರುದ್ಧ ಹೋರಾಡಿ ಸೆರೆಮನೆವಾಸ ಅನುಭವಿಸಿದಳು. 1829ರಲ್ಲಿ ವೀರ ಮರಣ ಹೊಂದಿದಳು.

ಪೂರಕಪಾಠ-1 ಕಾಮನಬಿಲ್ಲು

I. 1. ನಮ್ಮ+ಅವನು
2. ಪೂರ್ವ
3. ರಮೇಶನು ಶಾಲೆಗೆ ಹೋಗುತ್ತಾನೆ
4. ಕಾಮನಬಿಲ್ಲು

II. 5.
ಎ. ಗತಿಗೇಡು
ಬಿ. ಮಹಾಗರ್ವಿ
ಸಿ. ಬುದ್ಧಿಬಂತು
ಡಿ. ಮಹರಾಯ

III. 6.

ರೂಢನಾಮ	ಅಂಕಿತನಾಮ	ಅನ್ವರ್ಥಕನಾಮ
ನದಿ, ಹೆಂಗಸು, ದೇಶ	ಮೇರಿ, ಮಮತ, ಬ್ರಹ್ಮಪುತ್ರ	ಪೂಜಾರಿ, ಶಿಕ್ಷಕಿ, ವ್ಯಾಪಾರಿ

IV. 7. ಕೋತಿಯೊಂದು ಬಂದಿತು
ಮಡಿಕೆಯನ್ನು. ತಂದಿತು
ಅಂಗಡಿಗೆ ಹೋಯಿತು
ಬೇಳೆ ಬೆಲ್ಲ ತಂದಿತು.
ಪಾಯಸವನ್ನು ಮಾಡಿತು
ಹೊಟ್ಟೆ ಬಿರಿಯೆ ತಿಂದಿತು

V. 8. ಮಗುವಿನ ವಿವೇಚನೆಗೆ ಬಿಟ್ಟದ್ದು

VI. 9. ರವಿಯದೊ ಹೊರಟನು ಪಡುವಣಕೆ
ತಾಯಿಯ ಮನೆಯನು ಸೇರಲಿಕೆ
ಸಂಜೆಯ ಹೊತ್ತಿನ ಹೂಬಿಸಿಲು
ಕಣ್ಣಿಗೆ ಹಿಗ್ಗಿನ ಅಂದದ ಹೊನಲು

VII. 10. ಮಗುವಿನ ಜ್ಞಾನಕ್ಕೆ ಬಿಟ್ಟಿದ್ದು.

VIII. 11. ಕಾಮನಬಿಲ್ಲು ಜೋರು ಮಳೆ ಬಂದು ನಿಂತ ಮೇಲೆ 7 ಬಣ್ಣಗಳಿಂದ ಮೂಡುತ್ತದೆ. ಕಾಮನಬಿಲ್ಲು ಪದ್ಯ ಬರೆದ ಕವಿ ನಿಂಗಣ್ಣ ಕುಂಟಿ.
12. ಮಗುವಿನ ವಿವೇಚನೆಗೆ ಬಿಟ್ಟಿದ್ದು

ಪೂರಕಪಾಠ-2 ನಾನು ಮತ್ತು ಹುಂಚಿಮರ

I.

1. ಪೂರ್ಣ ವಿರಾಮ ಚಿಹ್ನೆ
2. ಭಾವ ಸೂಚಕ ಚಿಹ್ನೆ
3. ಪ್ರಶ್ನಾರ್ಥಕ ಚಿಹ್ನೆ
4. ಉದ್ಧಾರಣ ಚಿಹ್ನೆ ,ಅಲ್ಪ ವಿರಾಮ ಚಿಹ್ನೆ ,ಭಾವ ಸೂಚಕ ಚಿಹ್ನೆ
5. ಪ್ರಶ್ನಾರ್ಥಕ ಚಿಹ್ನೆ

II.

6. ಹತ್ತಿರ
7. ಮೇಲೆ
8. ನಿರಾಸೆ
9. ಚಿಕ್ಕ
10. ದ್ವೇಷ

III.

11. ನೆಲದ ತುಂಬಾ ಹುಂಚಿ ಹೂಗಳ ರಾಶಿ ಬಿದ್ದಿತ್ತು.
12. ಡೋರೆ ಹುಣಸೆ ಹಣ್ಣಿನ ರುಚಿಯನ್ನು ಆಫೂಸ್ ಮಾವಿನ ಹಣ್ಣಿಗೆ ಹೋಲಿಸಿದ್ದಾರೆ .
13. ಹುಣಸೆ ಮರದ ಹತ್ತಿರ ಮರಕುಟಿಗನ ಹಕ್ಕಿ, ಕಾಗೆ, ಗುಬ್ಬಿ, ಮೈನಾ ಟಿಟ್ಟಿಭ ಪಕ್ಷಿಗಳು ಕಾಣಿಸಿಕೊಂಡವು.
14. ನಾನು ಮತ್ತು ಹುಣಸೆ ಮರ ಪಾಠದ ಕೃತಿಕಾರರ ಹೆಸರು ಶ್ರೀ ಗುರು ಸಿದ್ದಯ್ಯ ಹುಚ್ಚಯ್ಯ ಹನ್ನೆರಡು ಮಠ.
15. ಹುಂಚಿ ಮರದಲ್ಲಿ ದೆವ್ವಗಳು ವಾಸವಾಗಿದ್ದವೆಂದು ಕಡಿದು ಹಾಕಿದರು.

IV.

16. ಲೇಖಕರು ಹುಂಚಿ ಹೂವನ್ನು ಆರಿಸಿಕೊಳ್ಳಲು ಹೋದಾಗ ಮನಸ್ಸಿನಲ್ಲಿ ನಾನೀಗ ಪುಟ್ಟ ಹುಡುಗನಲ್ಲ ದೊಡ್ಡವ ದೊಡ್ಡ ಪಗಾರದವ ಪ್ಯಾಂಟು ಬೂಟು ಹಾಕುವ ಈ ಕಾಲದಲ್ಲಿ ರಸ್ತೆಯಲ್ಲಿ ನಿಂತು ಹೊಂಚಿ ಹೂವು ಆರಿಸಬಾರದು ಎಂಬ ಭಾವನೆ ಮೂಡಿತು.

17. ಹುಣಸೆ ಮರದ ಗಾಳಿಯನ್ನು ಸೇವಿಸಲು ಹೋಗಿ ಕುಳಿತಾಗ ಕಾಗೆ ಗುಬ್ಬಿ ಮೈನಾ ಟಿಟ್ಟಿಭ ಮರಕುಟಿಗನ ಪಕ್ಷಿಗಳು ಕಾಣಿಸಿಕೊಂಡವು ಆ ಹಕ್ಕಿ ಮಿತ್ರರೊಂದಿಗೆ ಮಾತನಾಡಿದರು ಹಕ್ಕಿಗಳೆಲ್ಲವೂ ಹುಣಸೆ ಮರದಲ್ಲಿ ಹಾಡಿ ನಲಿಯುತ್ತಿದ್ದನ್ನು ನೋಡಿ ಸುಂದರ ಅನುಭವವನ್ನು ಪಡೆದರು.

18. ಹುಚ್ಚಿ ಮರದ ಬಳಿ ತಂಗಾಳಿ ಬೀಸಿದಾಗ ಹುರಿದು ಹುಂಚಿಕಪ್ಪ ಕುಟುಂಕುಟುಂ ಎಂದು ತಿಂದಿದ್ದು ಹುಂಚಿಹಣ್ಣಿನ ಜೊತೆಗೆ ಉಪ್ಪು, ಜೀರಿಗೆ ಬೆಲ್ಲ ಬೆರೆಸಿ ಕುಟ್ಟಿ ಉಂಡೆ ಮಾಡಿ ಕಡ್ಡಿಗೆ ಸಿಕ್ಕಿಸಿ ಜುರುಜುರು ಚೀಪಿದೆ ನೆನಪುಗಳು ಮರುಕಳಿಸಿದವು

19. ಹುಂಚಿ ಮರದಲ್ಲಿ ದೆವ್ವಗಳು ವಾಸವಾಗಿದ್ದವು ಮತ್ತು ದೆವ್ವಗಳು ವಾಸ ಮಾಡುತ್ತವೆ ಎಂಬ ಮೂಢನಂಬಿಕೆ ಬಂದಿದ್ದರಿಂದ ಹುಚ್ಚಿ ಮರವನ್ನು ಕುಡಿದರು.

V.

20. ನಾನು ಮತ್ತು ಚಿಮರದ ಅನುಭವವು ಒಂದು ಮರೆಯಲಾಗದ ಸುಂದರ ಸನ್ನಿವೇಶ ಎನ್ನಬಹುದು.ಇಲ್ಲಿ ಹುಂಚಿಮರದ ಬಾಂಧವ್ಯವು ಬಾಲ್ಯದಿಂದ ಹಿಡಿದು ಲೇಖಕರು ದೊಡ್ಡವರಾಗಿ ಬೆಳೆದು ಬಂದು ನೋಡುವ ವರೆಗಿನ ನೆನಪುಗಳನ್ನು ಕಟ್ಟಿಕೊಟ್ಟಿದೆ ಜೊತೆಗೆ ಹುಚ್ಚಿ ಹೂವು ಮತ್ತು ಹುಣಸೆ ಹಣ್ಣಿನ ಮರದಲ್ಲಿರುವ ಹಕ್ಕಿಗಳು ಬೀಸುವ ತಂಗಾಳಿ ಅನುಭವದೊಂದಿಗೆ ಮೂಢನಂಬಿಕೆಗೆ ಬಲಿಯಾದ ರೀತಿಯ ದುಃಖಕರ ವಿಷಯವು ಕೂಡ ಒಂದು ಮರೆಯದ ಸಂಬಂಧವಾಗಿದೆ.

VI.

21. "ಏ ತಮ್ಮ...ಇಲ್ಲಿ ಹುಂಚಿ ಮರ ಇತ್ತಲ್ಲ...ಏನಾಯ್ತು?"
22. "ಆಂ..ಆಂ.. ಕಡಿದರೆ? ಯಾಕೆ? ಯಾಕೆ?

23. ಮೇಲೆ ಬಿಸಿಲು.... ಕೆಳಗೆ ಬೋಳು ನೆಲ..
24. ಬೂಟು ಖಟ್ ಖಟ್ ಊದುತ್ತಾ ಮುಂದೆ ಸಾಗಿ ಬಿಟ್ಟೆ.
25. ಅದೆಂದರೆ ಹುಂಚಿಹೂವು ತಿನ್ನುವುದು!

VII.

26. ಈ ಹಣ್ಣಿನ ಹೆಸರು ಹುಣಸೆ ಹಣ್ಣು. ಹುಣಸೆಹಣ್ಣಿನ ರುಚಿ ಹುಳಿಯಾಗಿರುತ್ತದೆ. ಹುಣಸೆ ಹಣ್ಣು ಹೂವು ನೋಡಲು ಚಂದ. ಡೋರೆ ಹಣ್ಣು ತಿನ್ನಲು ಬಲು ರುಚಿಯಾಗಿರುತ್ತದೆ. ಹುಣಸೆ ಮರವು ಚಿಕ್ಕ ಚಿಕ್ಕ ಎಳೆನಾಗರಕಾಯಿ ಬಿಟ್ಟ ಮೇಲೆ ಹಣ್ಣಾಗುತ್ತದೆ.

VIII.

27. ಹುಣಸೆ ಮರವು ಬಹಳ ದೊಡ್ಡದಾಗಿದೆ. ಮರದ ಕೆಳಗೆ ಜನರು ಏಕೆ ನಿಂತಿರುವುದು? ಹುಣಸೆ ಮರದ ಬಳಿ ಜನರು ಆಟೋ, ಸ್ಕೂಟರ್, ಕಾರು ಮುಂತಾದ ವಾಹನಗಳು ನಿಂತಿವೆ.

ಪೂರಕಪಾಠ 3: ನನ್ನರಟ್ಟೆಯಬಲ

I.

1.ರಾತ್ರಿ

2.ಷಷ್ಠಿ

II.3.

ಎ. ಕನಸು

ಬಿ. ಆಕಾಶ

ಸಿ. ಕೆಲಸ

ಡಿ. ಸೂರ್ಯ

III.

4.ಮಕ್ಕಳು

5. ಪುಸ್ತಕಗಳು

6. ತಾಯಂದಿರು

IV.

7.ರೈತ

8.ದುಡಿಯುವುದು

9.ಧರ್ಮ

V.

10.(ಗೆಯ್ಯುವ, ಜೀವನಧರ್ಮ, ಅಖಂಡ, ಕಣಕಣ)

VI.

11.ಹುಡುಗಿ

ಹೋಗಿದ್ದಳು

ಕುಳಿತಳು

ಬಂದಿದೆ

ಬಂದರು

VII.

12. ನಿನ್ನ ಹೆಸರೇನು?

13. ಅಬ್ಬಾ! ಈ ಗುಲಾಬಿ ಎಷ್ಟು ಚೆಂದ ಇದೆ.

14. ನನ್ನ ಹೆಸರು ಪರಮೇಶ.

VIII.

15. ರೈತ, ದವಸ ಧಾನ್ಯ, ಅನ್ನದಾತ, ಹೊಲ...(ಮಗುವಿನವಿವೇಚನೆಗೆಅವಕಾಶ)

16. ನೇಗಿಲು, ಎತ್ತು, ಗುದ್ದಲಿ .... (ಮಗುವಿನವಿವೇಚನೆಗೆಅವಕಾಶ)

17. ಮಣ್ಣು ಕಣ ಕಣ ಸಿರಿಯಾಗಲಿ

ಪೂರಕಪಾಠ 4: ಹಿನ್ನುಡಿ

I. 1. ತಂದೆ
2. ಭೂಮಿ
3. ದಿನಕರದೇಸಾಯಿ
4. ಹಕ್ಕಿಗಳು

II.
5. ತನನ
6. ಸಂಗೀತ
7. ಕಂಬ
8. ಹೂವ

III.
9. ನನ್ನ ಧ್ಯೇಯವೇ ಕನ್ನಡಿಯ ಬಿಂಬ
10. ಚುಕ್ಕಿ ಮಿಂಚುವ ಹಾಗಿದೆ
11. ನಾಲ್ಕು ದಿಕ್ಕು ಎಂದು ಅರ್ಥ
12. ಬನ್ನಿ ಗಿಡ ಹೂಬಿಡಲು ದೇವರ ಕೃಪೆಯಿದೆ
13. ಚುಕ್ಕಿ

IV.
14. ವಾಯು, ಗಾಳಿ
15. ಹಿನ್ನುಡಿಯಿರಲು
16. ದೇವಿ
17. ನನ್ನ ಭಾವದ ಕವನ ನನ್ನ ಗಾನದ ತನನ ನನ್ನದೆಂಬುವ ಜಂಬ ಸಾಕು ದೈವಾ

V.
18. ನನ್ನ ದೇವಗೀತ ಹಕ್ಕಿಗಳ ಇಂಚರ ಇವು ದೇವರ ಸಂಗೀತವಾಗಿದೆ.
19. ನನ್ನದೆಂಬುವ ಜಂಬ ಬೇಡ ಎಂದು ಕವಿ ಹೇಳುತ್ತಾರೆ.
20. ನನ್ನ ಕನ್ನಡ ನುಡಿಗೆ ನಿನ್ನ ಹಿನ್ನುಡಿ ಇದೆ ಎಂದು ಹೇಳುತ್ತಾರೆ.
21. ಉಕ್ಕಿ ಬರುವ ತೆರೆಯ ಮೊರೆಯುವಿಕೆಯಂತೆ ಕವನ ಇದೆ.
22. ನಿನ್ನ ಭಾವನೆಯೇ ನುಡಿ-ಗುಡಿಯ ಕಂಬವಾಗಿದೆ.

VI.

23. ಹಿನ್ನುಡಿ ಕವಿತೆಯಲ್ಲಿ ದಿನಕರ ದೇಸಾಯಿಯವರು ನನ್ನದೆಂಬುದು ಯಾವುದು ಇಲ್ಲ. ಎಲ್ಲವೂ ದೇವರ ಕೃಪೆಯಿಂದ ಎನ್ನುತ್ತಾರೆ. ಗಿಡಮರಗಳು ಬಿಡುವ ಹೂ, ಹಕ್ಕಿಗಳ ಇಂಚರ, ನೀರಿನ ಮೊರೆಯುವಿಕೆ, ನಾನು ಹಾಡುವ ಹಾಡು, ಕನ್ನಡ ನುಡಿ, ಎಲ್ಲವೂ ದೇವರ ಕೃಪೆ.

24. ನಮ್ಮ ಕನ್ನಡ ನುಡಿಗೆ ನಿಮ್ಮ ಹಿನ್ನುಡಿ ಇರಲು ನನ್ನದೆಂಬುದು ಕನ್ನಡಿಯ ಬಿಂಬವಾಗಿದೆ. ಭೂಮಿಯ ನಾಲ್ಕು ದಿಕ್ಕುಗಳಲ್ಲಿ ನೀನೇ ಹಾಡುತಲಿರಲು ಇದು ಕನ್ನಡ ನುಡಿ -ಗುಡಿಯ ಕಂಬವಾಗಿದೆ ಎಂದು ಇದರ ಮಹತ್ವ.

ಪೂರಕಪಾಠ 5: ಮೆಚ್ಚಿನಗೊಂಬೆ

I. 1.ಗೊಂಬೆ ಎಂದರೆ ಮಕ್ಕಳಿಗೆ ಬಹಳ ಇಷ್ಟವಾಗುತ್ತದೆ.
2. ನಮ್ಮ ನಾಡ ಹಬ್ಬ ದಸರಾ.
3. ಜಾತ್ರೆ ಉತ್ಸವಗಳಲ್ಲಿ ಗೊಂಬೆಗಳದ್ದೇ ಆಕರ್ಷಣೆ.
4. ವಿದ್ಯಾರ್ಥಿಯ ಬರವಣಿಗೆ ಆಧರಿಸಿ ಅಂಕಗಳನ್ನುನೀಡುವುದು.
5. ಗೊಂಬೆಯ ಪೆನ್ಸಿಲ್, ಗೊಂಬೆಯ ಪೆನ್ನು, ಗೊಂಬೆ ತಿಂಡಿತಿನಿಸುಗಳು ಹೀಗೆ ವಿಧ ವಿಧ ವಸ್ತುಗಳನ್ನು ನಾವು ನೋಡಬಹುದಾಗಿದೆ.
6. ಮಗುವಿನ ಕೈಯಲ್ಲಿ ಗೊಂಬೆಗೆ ಜೀವ ಬರುತ್ತದೆ.
7. ಮರ, ಮಣ್ಣು, ಪ್ಲಾಸ್ಟಿಕ್, ರಬ್ಬರ್, ಪಿಂಗಾಣಿ, ಬಟ್ಟೆ, ಹತ್ತಿ, ಬಿದಿರು ಮತ್ತು ಕಾಗದಗಳಿಂದ ಗೊಂಬೆಗಳನ್ನು ತಯಾರಿಸುತ್ತಾರೆ.

III.

8. ಮಕ್ಕಳ ಕೈಯಲ್ಲಿ ಗೊಂಬೆ ಸಿಕ್ಕರೆ ತಿಂಡಿ ತಿನಿಸುವುದು, ಸ್ನಾನ ಮಾಡಿಸುವುದು, ಮಲಗಿಸಿ ಲಾಲಿ ಹಾಡುವುದು, ಬಟ್ಟೆ ತೊಡಿಸುವುದು, ಶೃಂಗಾರ ಮಾಡುವುದು ಹೀಗೆ ಎಲ್ಲವನ್ನು ಪ್ರೀತಿಯಿಂದ ಮಾಡುತ್ತಾರೆ.
9. ಸ್ಪ್ರಿಂಗ್ ಗೊಂಬೆಗಳು, ಕೀಗೊಂಬೆಗಳು, ಕೀಲಿಗೊಂಬೆಗಳು, ಯಂತ್ರಗೊಂಬೆಗಳು, ಸಣ್ಣ,ದೊಡ್ಡ, ವಿವಿಧ ರಂಗಿನ ಗೊಂಬೆಗಳು.
10. ಮಗುವಿನ ಬರವಣಿಗಯನ್ನು ಆಧರಿಸಿ ಅಂಕ ನೀಡುವುದು.
11. ಗೊಂಬೆಗಳನ್ನು ನೋಡಿದಾಗ ಸಂತೋಷ, ಖುಷಿ, ಗಾಬರಿ, ಭಯ ಮುಂತಾದ ಭಾವನೆಗಳು ಉಂಟಾಗುತ್ತದೆ.
12. ನಮ್ಮ ಮನೆಯಲ್ಲಿ ದಸರಾಹಬ್ಬ, ಸೀಮಂತ, ಮದುವೆ, ಮುಂತಾದ ಸಂದರ್ಭಗಳಲ್ಲಿ ಗೊಂಬೆಯನ್ನು ಅಲಂಕರಿಸುತ್ತೇವೆ.
13. ಮನುಷ್ಯ, ಪ್ರಾಣಿ,ಪಕ್ಷಿ, ಕೀಟ ಎಲ್ಲ ರೀತಿಯ ಗೊಂಬೆಗಳನ್ನು ಆಟ ಆಡಲು ಬಳಸುತ್ತೇವೆ.
14. ನಾನು ಇಷ್ಟಪಡುವ ಗೊಂಬೆಗೆ ನೋವಾದರೆ ಎತ್ತಿ ಮುತ್ತಾಡುವೆ, ಕೈ ಜಾರಿ ಕೆಳಗೆ ಬಿದ್ದರೆ ಅತ್ತೆಬಿಡುವೆ.
15. ಮಗುವಿನ ಬರವಣಿಗೆಯನ್ನು ಆಧರಿಸಿ ಅಂಕ ನೀಡುವುದು

IV.

16. ಮಗುವಿನ ಬರವಣಿಗೆಯನ್ನು ಆಧರಿಸಿ ಅಂಕ ನೀಡುವುದು.
17. ಮಗುವಿನ ಬರವಣಿಗೆಯನ್ನು ಆಧರಿಸಿ ಅಂಕ ನೀಡುವುದು
18. ಮಗುವಿನ ಬರವಣಿಗೆಯನ್ನು ಆಧರಿಸಿ ಅಂಕ ನೀಡುವುದು
19. ಜೋಕರ್ ಗೊಂಬೆಯನ್ನು ನಾನು ನಮ್ಮ ಊರಿನ ಜಾತ್ರೆಯಲ್ಲಿ ನೋಡಿರುವೆ. ಈ ಜೋಕರ್ ಗೊಂಬೆಗಳು ಬಣ್ಣ ಬಣ್ಣದ ವೇಷವನ್ನು ಧರಿಸಿ ಸದಾ ಜನರನ್ನು ನಗಿಸುತ್ತಾರೆ. ನನಗೆ ಜೋಕರ್ ಗೊಂಬೆ ಎಂದರೆ ತುಂಬಾ ಇಷ್ಟ.